## ಅಧ್ಯಾಯ 10

# ನಡತೆ ಮತ್ತು ವಿವೇಚನಾಶಕ್ತಿ

ದೇವಾಲಯದಲ್ಲಿ ಸುಳ್ಳು ದೇವರುಗಳ ವಿಗ್ರಹಗಳಿಗೆ ಸಲ್ಲಿಸಿದ ಮಾಂಸವನ್ನು ತಿನ್ನುವದನ್ನು ಸರ್ಮಥಿಸುವವರು ಎರಡು ವಿಧದಲ್ಲಿ ಪೌಲನಿಂದ ಎದುರಿಸ್ಪಟ್ಟರು: (1) ಜಾಣತನದ ವ್ಯಾಖ್ಯಾನ ಮತ್ತು ಸ್ವತಃ ಜ್ಞಾನಿಗಳೆಂದು ಹೇಳಿಕೊಳ್ಳುವ ಜನರು ಏನು ಮಾಡುತ್ತಿದ್ದಾರೆ ಎಂಬುದನ್ನು ಬದಲಾಯಿಸಿಕೊಳ್ಳದೇ ಇರುವ ಜನರ ಜ್ಞಾನಕ್ಕೆ ನಿವೇದಿಸುವದು. ಯಾವುದೇ ಸಮಂಜಸವಾದ ವ್ಯಾಖ್ಯಾನದಿಂದ, ವಿಗ್ರಹಗಳ ದೇವಾಲಯದ ಮಾಂಸವನ್ನು ತಿನ್ನುವದು ಮತ್ತು ಅಲ್ಲಿ ನಡೆಯುತ್ತಿರುವ ಸಂಪ್ರದಾಯಗಳಲ್ಲಿ ಮತ್ತು ಸುಳ್ಳು ದೇವರುಗಳಿಗೆ ಅರ್ಪಿಸಿದ ಊಟದಲ್ಲಿ ಪಾಲು ತೆಗೆದುಕೊಳ್ಳುವದು. ಇಂಥಹ ಸಂಗತಿಗಳು ಕ್ರಿಸ್ತನಿಗೆ ಹೊಂದಿಕೆಯಾಗಿರುವದಿಲ್ಲ. (2) ಒಂದು ವೇಳೆ ಮಾನಸಿಕ ಕಾಯ್ದಿರಿಸುವಿಕೆ ಜ್ಞಾನಿಗಳನ್ನು ವಿಗ್ರಹಾರಾಧನೆಯಿಂದ ದೂರವಿಟ್ಟಿದ್ದಲಿ, ಬಲಹೀನ ಕ್ರೈಸ್ತರು ಅವರು ಮಾಡಿರುವ ವ್ಯತ್ಯಾಸವನ್ನು ಗುರುತಿಸಲಾರರು. ಬಲಹೀನರು ಕ್ರಿಸ್ತನನ್ನು ತೊರೆಯಬೇಕು ಇಲವೇ ಅವರು ಕ್ರೈಸ್ತರಲ್ಲಿ ವೀಕ್ಷಿಸಿದ ಕಪಟತನವನ್ನು ಸಹಿಸಬಾರದು, ಅಥವಾ ಅವರು ಜ್ಞಾನಿಗಳು ಸರಿ ಎಂದು ಹೇಳಿಕೊಂಡಿರುವ ಅದೇ ಊಟದಲ್ಲಿ ಜ್ಞಾನಿಗಳ ಮಾನಸಿಕ ಕಾಯ್ದಿರಿಸುವಿಕೆ ಇಲ್ಲದೆ ಪಾಲುತೆಗೆದುಕೊಳ್ಳಬೇಕು. ಯಾರ ಜ್ಞಾನವು ನಂಬಿಕೆಯಲ್ಲಿ ಬಲಹೀನರಾದವರು ಪಾಪದಲ್ಲಿ ಬೀಳುವದಕ್ಕೆ ಕಾರಣವಾಗುತ್ತದೆ ಎಂದು ಹೇಳಿಕೊಳ್ಳುವರೋ.

ಒಂದು ವೇಳೆ ಅವರು ಸರಿಯಾಗಿದ್ದರೂ, ಜ್ಞಾನಿಗಳು ವಿಗ್ರಹಾರಾಧಕರ ದೇವಾಲಯದಲ್ಲಿ ಮಾಂಸವನ್ನು ತಿನ್ನುವದನ್ನು ವರ್ಜಿಸಬೇಕು. ಹಕ್ಕುಗಳ ದೃಢಪಡಿಸುವಿಕೆಗಿಂತ ಬಲಹೀನರಾಗಿರುವ ಸಹೋದರರ ಆತ್ಮಗಳು ಪ್ರಾಮುಖ್ಯವಾಗಿವೆ. ಅಪೊಸ್ತಲನು ಇವುಗಳನ್ನು ಅಧ್ಯಾಯ ೯ರಲ್ಲಿ ಉಪಯೋಗಿಸಿದ್ದಾನೆ. ಆವನು ಸುವಾರ್ತೆಗಾಗಿ ತನ್ನ ಹಣಕಾಸಿನ ಬೆಂಬಲದ ತನ್ನ ಹಕ್ಕನ್ನು ತೊರೆದು ಬಿಟ್ಟಾಗ, ಜ್ಞಾನಿಗಳಾದ ಕ್ರೈಸ್ತರು ವಿಗ್ರಹಾರಾಧಕರ ಆರಾಧನೆಯಲ್ಲಿ ತಮಗಿರುವ ಅಪಾದಿಸುವ ಹಕ್ಕನ್ನು ತೊರೆದುಬಿಟ್ಟರು. ತನ್ನ ವಿಷಯವನ್ನು ಸ್ಥಾಪಿಸಿ, ಪೌಲನು ತನ್ನ ಮೊದಲನೆಯ ದೃಢಪಡಿಸುವಿಕೆಗೆ ಹಿಂತಿರುಗುತ್ತಾನೆ, ಮುಖ್ಯವಾಗಿ ಜ್ಞಾನಿಗಳು ಮಾನಸಿಕವಾದ ಯಾವುದೇ ರೀತಿಯ ಕಾಯ್ದಿರಿಸುವಿಕೆಯಿಲ್ಲದೇ ವಿಗ್ರಹಾರಾಧನೆಯ ಅಪರಾಧಿ ಮನೋಭಾವವನ್ನು ಹೊಂದಿದ್ದಾರೆಂದು ಅಧ್ಯಾಯ 10 ಅಧ್ಯಾಯ ೮ರಲ್ಲಿ ತಿಳಿಸಿದ ಮುಖ್ಯವಿಷಯಗಳಿಗೆ ಹಿಂತಿರುಗುತ್ತದೆ. ನಂಬಿಕೆಯಲ್ಲಿ ಬಲಹೀನರಾಗಿರುವವರ ಮೇಲೆ ಅದರ ನಕಾರಾತ್ಮಕ ಪರಿಣಾಮಗಳನ್ನು ಬದಿಗಿಟ್ಟು, ಕ್ರೈಸ್ತರು ವಿಗ್ರಹಾರಾಧಕರ

ಸಂಪ್ರದಾಯಗಳಲ್ಲಿ ಪಾಲುತೆಗೆದುಕೊಳ್ಳುವಾಗ ಪಾಪ ಮಾಡುವವರಾಗಿದ್ದಾರೆ.

## “ಇಸ್ರಾಯೇಲೇ ಜ್ಞಾನಪಕದಲ್ಲಿಟ್ಟುಕೋ” (10:1-5)

**[1]ಸಹೋದರರೇ, ಮುಂದಿನ ಸಂಗತಿಯಲ್ಲಿ ನೀವು ಲಕ್ಷವಿಡಬೇಕೆಂದು ನಾನು ಅಪೇಕ್ಷಿಸುತ್ತೇನೆ ಅದೇನಂದರೆ, ನಮ್ಮ ಪಿತೃಗಳೆಲ್ಲರೂ ಮೇಘದ ನೆರಳಿನಲ್ಲಿದ್ದರು;**
**[2]ಅವರೆಲ್ಲರೂ ಸಮುದ್ರವನ್ನು ದಾಟಿಹೋದರು; ಅವರೆಲ್ಲರೂ ಮೋಶೆಯ ಶಿಷ್ಯರಾಗುವದಕ್ಕಾಗಿ ಮೇಘದಲ್ಲಿಯೂ ಸಮುದ್ರದಲ್ಲಿಯೂ ದೀಕ್ಷಾಸ್ನಾನವನ್ನು ಹೊಂದಿದರು;**
**[3]ಅವರೆಲ್ಲರೂ ದೈವೀಕವಾದ ಒಂದೇ ಆಹಾರವನ್ನು ತಿಂದರು [4]ಅವರೆಲ್ಲರೂ ದೈವಿಕವಾದ**
**ಒಂದೇ ನೀರನ್ನು ಕುಡಿದರು; ಹೇಗಂದರೆ ಅವರ ಹಿಂದೆ ಹೋಗುತ್ತಿದ್ದ ದೈವಿಕವಾದ**
**ಬಂಡೆಯೊಳಗಿಂದ ಬಂದ ನೀರನ್ನು ಕುಡಿಯುತ್ತಿದ್ದರು; ಆ ಬಂಡೆ ಕ್ರಿಸ್ತನೇ. [5]ಆದರೂ**
**ಅವರೊಳಗೆ ಬಹುಮಂದಿಯ ವಿಷಯದಲ್ಲಿ ದೇವರು ಸಂತೋಷಿಸಲಿಲ್ಲ. ಅವರು ಅಡವಿಯಲ್ಲಿ ಸಂಹರಿಸಲ್ಪಟ್ಟರೆಂದು ಬರೆದದೆಯಷ್ಟೆ.**

**ವಚನಗಳು 1, 2.** ರೋಮನ್ ಲೋಕದ ವ್ಯಾಪಾರಿ ಕೇಂದ್ರಗಳುದ್ದಕ್ಕೂ ಚದುರಿಹೋದ ಯೆಹೂದ್ಯರು ತಾವು ಯೆಹೂದ್ಯ ಜನಸಮೂಹದೊಂದಿಗೆ ಎಷ್ಟರ ಮಟ್ಟಿಗೆ ಬೆರೆತುಕೊಳ್ಳಬಾರದೆಂಬ ಅಭಿಪ್ರಾಯದಲ್ಲಿ ವ್ಯತ್ಯಾಸವುಳ್ಳವರಾಗಿದ್ದರು. ಕೆಲವರು ತಮ್ಮ ಸ್ಥಳವನ್ನು ವಿಗ್ರಹಾರಾಧಕರ ಸಂಸ್ಕೃತಿಯ ಮಧ್ಯದಲ್ಲಿ ಮಾಡಿಕೊಂಡಿದ್ದರು ಮತ್ತು ಇತರರಿಗಿಂತ ಹೆಚ್ಚಾಗಿ ವ್ಯಾಪಾರದಲ್ಲಿ ಸಮೃದ್ಧಿಯನ್ನು ಹೊಂದಿದ್ದರು. ಸಮಯವು ಕಳೆಯುತ್ತಿರುವ ಹಾಗೆ, ಈ ಯೆಹೂದ್ಯ ವ್ಯಾಪಾರಿಗಳು ಮತ್ತು ಕುಶಲಕರ್ಮಿಗಳು ತಮ್ಮನ್ನು ತಾವು ತಮ್ಮ ವ್ಯಾಪಾರವನ್ನು ಪ್ರಗತಿಪತ್ರದತ್ತ ನಡೆಸುವ ಅಭ್ಯಾಸಗಳನ್ನು ಅಳವಡಿಸಿಕೊಂಡರು. ಮೊದಲು ಪೌಲನು ಕೊರಿಂಥಕ್ಕೆ ಬರುವ ಮೊದಲು ಯೆಹೂದ್ಯರು ಅನೇಕ ವರ್ಷಗಳಿಂದ ದೇವಾಲಯದಲ್ಲಿ ಸೇರಿಬರುತ್ತಿದ್ದ ವ್ಯಾಪಾರಿ ಸಂಸ್ಥೆಗಳ ಭಾಗವಾಗಿದ್ದರು. ಅವರು ಸಹ ಕುಶಲಕರ್ಮಿಗಳೊಡನೆ ಸೇರಿಬರುತ್ತಿದ್ದರು ಮತ್ತು ಧರ್ಮಶಾಸ್ತ್ರ ಮತ್ತು ಆರ್ಥಿಕ ಸ್ಥಾನಗಳ ಲಾಭಗಳ ಕುರಿತು ಪ್ರಭಾವ ಬೀರಲು ಪ್ರಯತ್ನಿಸುತ್ತಿದ್ದರು. ಅವರು ತಮ್ಮ ಅವಶ್ಯಕತೆಗಳನ್ನು ದೇವಾಲಯದ ಸಾರ್ವಜನಿಕ ಊಟದ ಕೋಣೆಗಳಲ್ಲಿ ವೈಚಾರಿಕವಾಗಿ ವಿವರಿಸುತ್ತಿದ್ದರು. ಬಹುಶಃ ಪೌಲನು ಇಂಥಹ ಮುಕ್ತ ಮನಸ್ಸಿನ ವ್ಯಾಪಾರಿಗಳನ್ನು ಇತರರಿಗಿಂತ ಸುವಾರ್ತೆಯನ್ನು ಆಲಿಸಲು ಬಹಳ ಪರಿಣಾಮಕಾರಿಯಾಗಿದ್ದಾರೆಂದು ಕಂಡುಕೊಂಡಿರಬಹುದು; ಆದರೆ ಅವರಲ್ಲಿ ಕೆಲವರು ಕ್ರೈಸ್ತರಾಗುವಾಗ, ಅವರು ಈ ಸಾರ್ವಜನಿಕ ಭೋಜನದಲ್ಲಿ ಪಾಲುಗೊಳ್ಳುವದನ್ನು ಮುಂದುವರೆಸಿದರು.

ವಿಗ್ರಹಗಳ ದೇವಾಲಯದಲ್ಲಿ ಊಟಮಾಡುವದು ತಮ್ಮ ಹಕ್ಕು ಎಂದು ಹೇಳಿಕೊಳ್ಳುತ್ತಿದ್ದ ಯೆಹೂದ್ಯ ಕ್ರೈಸ್ತರು ದೇವಾಲಯದಲ್ಲಿ ಬಹಳ ಮಟ್ಟಿಗೆ ಎರಡು ಕಾರಣಗಳಿಂದ ಗೌರವವನ್ನು ಹೊಂದಿದ್ದರು. ಮೊದಲನೆಯದಾಗಿ, ಯೆಹೂದ್ಯರಾಗಿ, ಅವರು ಮೋಶೆಯ ಧರ್ಮಶಾಸ್ತ್ರದ ಕುರಿತು ಯೆಹೂದೇತರ ಕ್ರೈಸ್ತರಿಗಿಂತ ಹೆಚ್ಚು ಜ್ಞಾನವುಳ್ಳವರಾಗಿದ್ದರು. ಎರಡನೆಯದಾಗಿ, ಸಮೃದ್ಧ ವ್ಯಾಪಾರಿಗಳಾಗಿ, ಅವರು ಬಹುಶಃ

ತಮ್ಮ ಮನೆಗಳನ್ನು ಸಭೆ ಸೇರಿಬರುವ ಸ್ಥಳಗಳನ್ನಾಗಿ ನೀಡಿರಬಹುದು, **ನಮ್ಮ ಪೂರ್ವಿಕರೆಲ್ಲರು ಮೋಡಗಳ ಕೆಳಗೆ ಸಮುದ್ರದ ಮೂಲಕ ಎಲ್ಲರೂ ದಾಟಿಹೋದರು** ಎಂದು ಪೌಲನು ಬರೆಯುವಾಗ, ಅವನು ಕೊರಿಂಥದಲ್ಲಿ ಕ್ರೈಸ್ತರಾದ ಜನಾಂಗೀಯ ಯೆಹೂದ್ಯರೊಂದಿಗೆ ಗುರುತಿಸಿಕೊಳ್ಳಲು ಅಲ್ಲಗಳೆಯುತ್ತಿದ್ದನು (ರೋಮಾ 9:3 ನೋಡಿರಿ). "ನಮ್ಮ" ಎಂಬ ಬಹುವಚನವು ಪೌಲನನ್ನು ಮತ್ತು ಕೊರಿಂಥದಲ್ಲಿರುವ ಯೆಹೂದ್ಯ ಕ್ರೈಸ್ತರನ್ನು ಒಳಗೊಂಡಿದೆ. 9:9ರಲ್ಲಿ ಧರ್ಮಶಾಸ್ತ್ರದ ಮೂಲಕ ಪೌಲನು ನೀಡಿರುವ ಉದಾಹರಣೆ ಯೆಹೂದೇತರರಿಗಿಂತ ಪರಿವರ್ತನೆ ಹೊಂದಿದ ಯೆಹೂದ್ಯರನ್ನು ಹೆಚ್ಚು ಒತ್ತಾಯಪಡಿಸುತ್ತದೆ.

Carl Holladay ಈ ಹೇಳಿಕೆಯನ್ನು ನೀಡುತ್ತಾರೆ: "ಕೊರಿಂಥದ ಕೆಲವರು ದೇವರ ಎದುರಿನಲ್ಲಿ ತಮ್ಮ ಸ್ಥಾನ ತಮಗೆ ಸವಾಲನ್ನು ನೀಡದಂತ ಹಕ್ಕುಗಳ ಭರವಸೆಯನ್ನು ನೀಡುತ್ತದೆ ಎಂದು ಊಹಿಸುತ್ತಿದ್ದರು; ಅವರು ತಮಗಿರುವ ಸ್ಥಾನವು ಅಲ್ಲಗಳೆಯುವಂತದ್ದಲ್ಲ ಎಂದು ಸಹ ಭಾವಿಸುತ್ತಿದ್ದರು."[1] ಅದೇ ಸಮಯದಲ್ಲಿ ಪ್ರಾಚೀನ ಇಸ್ರಾಯೇಲ್ಯರು ತಮ್ಮ ಮೆಚ್ಚಿನ ಸ್ಥಾನದಲ್ಲಿ ದೂರುವದರಲ್ಲಿ ಬೇರೂರಿದ್ದರು ಎಂಬ ಸಂದೇಹಕ್ಕೆ ಒಳಗಾಗಿದ್ದರು, ಅವನು ಕೊರಿಂಥದಲ್ಲಿ ಪರಿವರ್ತನೆ ಹೊಂದಿರುವ ಕ್ರೈಸ್ತರನ್ನು ಸಂಬೋಧಿಸುತ್ತಿದ್ದೇನೆ ಎಂಬುದನ್ನು ಸ್ಪಷ್ಟೀಕರಿಸುವಲ್ಲಿ ಅಪೊಸ್ತಲನು ವಿಫಲನಾದನು. ಇಸ್ರಾಯೇಲ್ಯ ಜನರು ಕೆಂಪು ಸಮುದ್ರವನ್ನು ದಾಟಿಬಂದರು ಎಂಬುದು ಪೌಲನ ವಾದಕ್ಕೆ ಪ್ರಾಮುಖ್ಯವಾಗಿತ್ತು (ವಿಮೋ. 14:21, 22). ದೇವಜನರನ್ನು ಐಗುಪ್ತ್ಯರ ಸೈನ್ಯದಿಂದ ಪ್ರತ್ಯೇಕಿಸಿದ ಮೋಡವು ಅವರ ಮೇಲೆ ವ್ಯಾಪಿಸಿಕೊಂಡಿತ್ತು; ನೀರು ಅವರ ಎರಡೂ ಕಡೆಗಳಲ್ಲಿ ಗೋಡೆಗಳಂತೆ ನಿಂತುಕೊಂಡಿತ್ತು.

ಐಗುಪ್ತ್ಯದ ದಾಸತ್ವದಿಂದ ಸಿನಾಯಿ ಅರಣ್ಯದಲ್ಲಿ ಜನರು ದಾಟಿ ಬಂದ ಕ್ಷಣವು ಇಸ್ರಾಯೇಲ್ಯರು ದೇವರು ಆದುಕೊಂಡ ಜನಾಂಗ ಎಂಬುದು ಸ್ಪಷ್ಟವಾಗುತ್ತದೆ. ಹೊಸ ಜನಾಂಗವು ಫರೋಹನನ ದೃಷ್ಟಿಯಿಂದ ದೇವರ ದೃಷಿ ಎಡೆಗೆ ದಾಟಿಬಂತು, ಇದು ಆತನ ಸೇವಕನಾದ ಮೋಶೆಯ ಮೂಲಕ ಕಾರ್ಯರೂಪಕ್ಕೆ ಬಂತು. ಇಸ್ರಾಯೇಲ್ಯರ ಪ್ರಯಾಣ ಐಗುಪ್ತ್ಯದ ದಾಸತ್ವದಿಂದ ಕ್ರಿಸ್ತನು ನೀಡುವ ಸ್ವಾತಂತ್ರದಲ್ಲಿ ಬಂತು ಎಂಬುದರೊಂದಿಗೆ ಹೋಲಿಸುವದನ್ನು ಪೌಲನು ಎಷ್ಟರಮಟ್ಟಿಗೆ ಉದ್ದೇಶಿಸಿದ್ದನು ಎಂಬುದು ಅಖಚಿತವಾಗಿದೆ, ಆದರೆ ಅವನು ಕೆಂಪು ಸಮುದ್ರವನ್ನು ದಾಟಿಬಂದಿರುವದು ಇಸ್ರಾಯೇಲ್ಯರಿಗೆ ಪ್ರಾಮುಖ್ಯವಾದ ಅಂಶವಾಗಿತ್ತು ಎಂಬುದನ್ನು ನೋಡುತ್ತಾನೆ. ಕೇವಲ ಸಮುದ್ರವನ್ನು ದಾಟಿ ಬಂದಿರುವದು ದೇವರಲ್ಲಿ ಇಸ್ರಾಯೇಲ್ಯರ ಸ್ಥಾನವನ್ನು ಬದಲಾಯಿಸಿತು, ರಕ್ಷಣೆಹೊಂದಿದವರನ್ನು ಅವಿಶ್ವಾಸಿಗಳಿಂದ ದೀಕ್ಷಾಸ್ನಾನವು ಪ್ರತ್ಯೇಕಿಸುವ ರೇಖೆಯಾಗಿತ್ತು. ದೇವರ ಸೇವಕನಾಧ ಮೋಶೆ ಧರ್ಮಶಾಸ್ತ್ರವನ್ನು ನೀಡಲು ಕಾರಣನಾದನು ಮತ್ತು ಇಸ್ರಾಯೇಲ್ಯರು ಅವನಿಗೆ ಉತ್ತರದಾಯಿಗಳಾದರು. ಕ್ರಿಸ್ತನ ಬೋಧನೆಗಳಿಗೆ ಪೂರ್ವಛಾಯೆಯಾಗಿ ಇಸ್ರಾಯೇಲ್ಯರ ಇತಿಹಾಸದ ಪ್ರಾಮುಖ್ಯವಾದ ಘಟನೆಗಳನ್ನು ನೋಡುವಾಗ, ಪೌಲನು ಜನಾಂಗವು ಮೋಶೆಯ ಕೈಗಳಿಂದ **ಮೋಡದಲ್ಲಿ ಮತ್ತು ಸಮುದ್ರದಲ್ಲಿ ದೀಕ್ಷಾಸ್ನಾನವನ್ನು ಹೊಂದಿತು** ಎಂದು ಹೇಳುತ್ತಾನೆ.

ನಾಲ್ಕು ವಚನಗಳಲ್ಲಿ ಐದು ಬಾರಿ ಪೌಲನು ಕೆಂಪು ಸಮುದ್ರದ ಬಳಿಯಲ್ಲಿ

ನಡೆದಿರುವ ಸಂಗತಿಯಲ್ಲಿ **ಎಲ್ಲರೂ** ಪಾಲುತೆಗೆದುಕೊಂಡರು ಎಂದು ಹೇಳುತ್ತಾನೆ (*πάντες*, *pantes*). ಈ ಘಟನೆಗಳು ಸಂಪ್ರದಾಯಿಕ ಇಸ್ರಾಯೇಲ್ಯರಿಗೆ ತಾವು ದೇವರಿಂದ ಆಯ್ದುಕೊಂಡವರು ಎಂಬುದಕ್ಕೆ ಏನೋ ಒಂದು ರೀತಿಯಲ್ಲಿ ಭರವಸೆಯನ್ನು ನೀಡಿದವು. ಪೌಲನು, ಇಸ್ರಾಯೇಲ್ಯರು ದೂರು ಹೇಳುವವರಾದರು ಎಂದು ಪ್ರದರ್ಶಿಸಿದರು ಎಂಬುದನ್ನು ವಾದಿಸುತ್ತಾನೆ. ವಿಗ್ರಹಾರಾಧಕರೊಂದಿಗೆ ಊಟಮಾಡುತ್ತಿದ್ದ ಕೊರಿಂಥದಲ್ಲಿರುವ ಕ್ರೈಸ್ತರು ಅರಣ್ಯದಲ್ಲಿ ಇಸ್ರಾಯೇಲ್ಯರ ಮೇಲೆ ಬಂದ ತೀರ್ಪನ್ನು ಕ್ರಿಸ್ತನ ದೇಹದ ಮೇಲೆ ತರುವ ಅಪಾಯವನ್ನು ಹೊಂದಿದ್ದರು.

**ವಚನ 3.** ಕೊರಿಂಥದಲ್ಲಿರುವ ಕ್ರೈಸ್ತರು ದೇವರು ತನ್ನನ್ನು ತಾನು ಅವರ ಜೀವಿತದಲ್ಲಿ ಪ್ರಕಟಿಸಿಕೊಳ್ಳಲು ಎರಡು ಮಾರ್ಗಗಳನ್ನು ಗುರುತಿಸಿದ್ದಾನೆ ಎಂದು ತಿಳಿದಿದ್ದರು. ನಂಬಿಕೆಯೊಂದಿಗೆ ಸಂಬಂಧ ಹೊಂದಿದ ಮತ್ತು ಪಶ್ಚಾತ್ತಾಪದಿಂದ ತುಂಬಿದ್ದರ ಪರಿಣಾಮವಾಗಿ ದೇವರು ಕರುಣೆಯಿಂದ ನೀಡಿರುವ ಪಾಪಗಳ ಕ್ಷಮಾಪಣೆಗೆ ಸಂಬಂಧಹೊಂದಿದ ದೀಕ್ಷಾಸ್ನಾನವಾಗಿದೆ. ಇಸ್ರಾಯೇಲ್ಯರಿಗೆ ಮೋಶೆಯೊಂದಿಗೆ ದೀಕ್ಷಾಸ್ನಾನ ಹೊಂದಿರುವದು ದೇವರಲ್ಲಿ ಹೊಸ ಜೀವಿತವನ್ನು ಪ್ರಾರಂಭಿಸಲು ಸಹಾಯವಾಯಿತು; ಕೊರಿಂಥದಲ್ಲಿರುವ ಕ್ರೈಸ್ತರ ದೇವರೊಂದಿಗಿನ ಜೀವಿತ ಪಶ್ಚಾತ್ತಾಪಹೊಂದಿದ ವಿಶ್ವಾಸಿಗಳು ತಮ್ಮ ಪಾಪಗಳಿಗಾಗಿ ನೀರಿನಲ್ಲಿ ಮುಳುಗುವಾಗ ಪ್ರಾರಂಭವಾಯಿತು (ಅ.ಕೃ. 2:38; 22:16). ದೇವರು ದೀಕ್ಷಾಸ್ನಾನದ ಮೂಲಕ ರಕ್ಷಿಸಲು ಕಾರ್ಯತತ್ಪರನಾದನು.

ದೀಕ್ಷಾಸ್ನಾನದೊಂದಿಗೆ, ದೇವರು ಸಭೆಗೆ ಕರ್ತನಭೋಜನವನ್ನು ಸಹ ನೀಡಿದ್ದಾನೆ. ಇದರ ಮೂಲಕ ಆತನು ಕ್ರೈಸ್ತರಿಗೆ ನಂಬಿಕೆಯಿಂದ ಜೀವಿಸುವ ಬಲವನ್ನು ನೀಡುತ್ತಾನೆ. ಅರಣ್ಯದಲ್ಲಿ ಇಸ್ರಾಯೇಲ್ಯರು ಒಂದು ವಿಧದ ದೀಕ್ಷಾಸ್ನಾನವನ್ನು ಅನುಭವಿಸಿದ ಹಾಗೆ, ಅವರು ಒಂದು ವಿಧದ ಕರ್ತನ ಭೋಜನವನ್ನು ಸಹ ಅನುಭವಿಸಿದರು. ಕೆಂಪು ಸಮುದ್ರವನ್ನು ದಾಟಿಬಂದ **ಎಲ್ಲರೂ ಒಂದೇ ಆತ್ಮೀಕ ಆಹಾರವನ್ನು ತಿಂದರು** ಎಂದು ಪೌಲನು ಬರೆಯುತ್ತಾನೆ. ಇಸ್ರಾಯೇಲ್ಯರು ಮನ್ನ ತಿಂದು (ವಿಮೋ. 16:4, 31) ಮತ್ತು ಬಂಡೆಯಿಂದ ದೇವರು ನೀಡಿದ ನೀರಿನಿಂದ (ವಿಮೋ. 17:6) ಬದುಕಿಕೊಂಡರು. ಅದೇ ರೀತಿ ಪೌಲನು, ದೇವರು ತನ್ನ ಸಭೆಯನ್ನು ಆತ್ಮೀಕ ರೊಟ್ಟಿ ಮತ್ತು ಪಾನೀಯದ ಮೂಲಕ ವಿಶ್ವಾಸಿಗಳನ್ನು ಕರ್ತನ ಭೋಜನದಲ್ಲಿ ಅವರು ಕ್ರೂಜೆಯು ತಮಗೆ ಏನಾಗಿದೆ ಎಂಬುದನ್ನು ಪ್ರತಿಬಿಂಬಿಸುವಾಗ ಅವರನ್ನು ಒಟ್ಟಾಗಿ ಸೇರಿಸುತ್ತದೆ ಎಂದು ಪೌಲನು ಸೂಚಿಸುತ್ತಾನೆ. ಯೋಹಾನ 6:31-51ರಲ್ಲಿ, ಯೇಸು ಅರಣ್ಯದಲ್ಲಿನ ಮನ್ನವನ್ನು ಉಲ್ಲೇಖಿಸುತ್ತಾನೆ. ಈ ವೇದಭಾಗದಲ್ಲಿರುವ ಆತನ ಭಾಷೆಯು ಕರ್ತನಭೋಜನವನ್ನು ಗೌರವಿಸಬೇಕು ಎಂಬ ಕರೆಯನ್ನು ನೀಡುತ್ತದೆ. ಮನ್ನ ಎರಡು ವಿಧವಾಗಿದೆ, ಒಂದು ಯೇಸು ಕ್ರಿಸ್ತನ ಸಂಕೇತ. ಯೋಹಾನ 6:35 ಯೇಸು ಹೇಳಿದ್ದು, "ಜೀವಕೊಡುವ ರೊಟ್ಟಿ ನಾನೇ; ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ ಮತ್ತು ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ."

**ವಚನ 4.** 10:3, 4ರಲ್ಲಿ ಮೂರು ಸಾರಿ **ಆತ್ಮೀಕ** (*πνευματικός*, *pneumatikos*) ಎಂಬ ಪದವು ಉಪಯೋಗಿಸಲಾಗಿದೆ. ಇಸ್ರಾಯೇಲ್ಯರು "ಆತ್ಮೀಕ ಆಹಾರವನ್ನು ತಿಂದರು"

ಮತ್ತು **ಆತ್ಮೀಕ ಪಾನೀಯವನ್ನು ಕುಡಿದರು** ಮತ್ತು ಅವರನ್ನು ಹಿಂಬಾಲಿಸಿದ ಬಂಡೆ "ಆತ್ಮೀಕವಾಗಿತ್ತು." ಅಪೊಸ್ತಲನು ಕ್ರಿಯಾವಿಶೇಷಣದಲ್ಲಿ ಏನನ್ನು ಅರ್ಥೈಸುತ್ತಾನೋ ಅದು ಸತ್ಯವಾಗಿದೆ. ಪೇತ್ರನು ಈ ಪದವನ್ನು "ವಾಸ್ತವವಲ್ಲದ" ಎಂಬುದಕ್ಕೆ ಉಪಯೋಗಿಸುತ್ತಾನೆ. ಕ್ರೈಸ್ತರು "ಆತ್ಮೀಕ" ಮನೆಗಳಲ್ಲಿ ಕಟ್ಟಲ್ಪಟ್ಟಿದ್ದಾರೆ ಮತ್ತು ನಿಜವಾಗಿ ಪ್ರಾಣಿಗಳ ವಧೆಮಾಡುವದಕ್ಕೆ ಬದಲಾಗಿ "ಆತ್ಮೀಕ" ಯಜ್ಞಗಳನ್ನು ಸರ್ಮಪಿಸುತ್ತಾರೆ (1 ಪೇತ್ರ 2:5).

ಪೌಲನು 1 ಕೊರಿಂಥದವರಿಗೆ ಬರೆದ ಪತ್ರಕ್ಕಿಂತ ಎಲ್ಲಾ ಪತ್ರಗಳನ್ನು ಸೇರಿಸಿ "ಆತ್ಮೀಕ" ಎಂಬುದಾಗಿ ಅನೇಕ ಸಂಗತಿಗಳನ್ನು ಗುರುತಿಸಿದ್ದಾನೆ. ಅವನು ಜನರು "ಆತ್ಮೀಕ" ರಾಗಿದ್ದಾರೆ ಎಂದು ಹೇಳಿದ್ದಾನೆ (2:15), ತನ್ನ ಭೋದನೆ ಮತ್ತು ಪಟ್ಟಣದಲ್ಲಿದ್ದ ವಿಶ್ವಾಸಿಗಳ ಮದ್ಯದಲ್ಲಿ ತನ್ನ ಸೇವೆಯೊಂದಿಗೆ (9:11). ಕೊರಿಂಥದವರು "ಆತ್ಮೀಕ" ವರಗಳನ್ನು ಹೊಂದಿದ್ದರು (12:1; 14:1), ಮತ್ತು ಅವರು ತಾವು ಮುಂದಿನ ಜೀವಿತದಲ್ಲಿ "ಆತ್ಮೀಕ" ದೇಹಗಳನ್ನು ಹೊಂದುತ್ತೇವೆ ಎಂಬುದನ್ನು ಒಪ್ಪಿಕೊಳ್ಳುತ್ತಿದ್ದರು (15:44, 46). ಸಹಜವಾಗಿ, ಅಪೊಸ್ತಲನು ದೇವರ ಉದ್ದೇಶ ನೆರವೇರುವಾಗ ಏನೋ ಒಂದು "ಆತ್ಮೀಕ" ಎಂಬುದನ್ನು ಒಪ್ಪಿಕೊಳ್ಳುತ್ತಿದ್ದನು. ಇಸ್ರಾಯೇಲ್ಯರೊಂದಿಗೆ ಅರಣ್ಯದಲ್ಲಿ ಜೊತೆಯಾಗಿದ್ದ ಆಹಾರ, ಪಾನೀಯ ಮತ್ತು ಬಂಡೆ ಸಾಮನ್ಯ ವಿಧದವುಗಳೇನಲ್ಲ. ಅವು ಕೊಡಲ್ಪಟ ವಿಧಾನ ಮತ್ತು ಅವುಗಳ ಉದ್ದೇಶ ದೈವೀಕ ಯೋಜನೆಯಲ್ಲಿ ಸರಿಹೊಂದುತ್ತವೆ. ಹ್ಯಾಗೂ, ಕೆಲವು ಸಮಯದಲ್ಲಿ ಪೌಲನು "ಆತ್ಮೀಕ" ಎಂಬ ಪದವನ್ನು ಪೇತ್ರನು ಉಪಯೋಗಿಸಿದ ವಿಧದಂತೆ "ವಾಸ್ತವವಲ್ಲದ" ಅರ್ಥದಲ್ಲಿ ಉಪಯೋಗಿಸುತ್ತಾನೆ. 15:39-50ರಲ್ಲಿ ಚರ್ಚಿಸಲಾಗ ಆತ್ಮೀಕ ದೇಹವು ವಾಸ್ತವವಲ್ಲದ್ದಾಗಿದೆ, ಅದು "ರಕ್ತ ಮತ್ತು ಮಾಂಸದಿಂದ" ಕೂಡಿದ್ದಲ್ಲ (15:50). ಅರಣ್ಯದಲ್ಲಿ ಇಸ್ರಾಯೇಲ್ಯರನ್ನು ಹಿಂಬಾಲಿಸಿದ ಆತ್ಮೀಕ ಬಂಡೆ ವಾಸ್ತವ ಬಂಡೆಯಲ್ಲ.

ಒಂದು ವೇಳೆ ಪೌಲನು "ಆತ್ಮೀಕ ಆಹಾರ" ಮತ್ತು "ಆತ್ಮೀಕ ಪಾನೀಯ" ದೊಂದಿಗೆ ನಿಲ್ಲಿಸಿದ್ದಲ್ಲಿ ನಾವು ವಿರಾಮವಿಲ್ಲದೇ ಓದುತ್ತಾ ಹೋಗುತ್ತಿದ್ದೆವು, ಆದರೆ ಆತನು **ಅವರು ತಮ್ಮನ್ನು ಹಿಂಬಾಲಿಸುತ್ತಿರುವ ಆತ್ಮೀಕ ಬಂಡೆಯೊಳಗಿಂದ ಕುಡಿಯುತ್ತಿದ್ದರು; ಆ ಬಂಡೆ ಕ್ರಿಸ್ತನೆ ಎಂದು ಸೇರಿಸುತ್ತಾನೆ.** ಈ ಹೇಳಿಕೆಯಲ್ಲಿ, ಅವನು ಸತ್ಯವೇದದ ಅರ್ಥೈಸುವಿಕೆಯ ಗುಣಲಕ್ಷಣವಲ್ಲ ವಿಧಾನವನ್ನು ಉಪಯೋಗಿಸುತ್ತಾನೆ. ಪೌಲನು ಹಳೆಒಡಂಬಡಿಕೆಯನ್ನು ಅಲಂಕಾರಿಕವಾಗಿ ಉಪಯೋಗಿಸುತ್ತಿದ್ದಾನೋ ಅಥವಾ ಬಹುಶಃ ಸಾಂಕೇತಿಕವಾಗಿ ಉಪಯೋಗಿಸುತ್ತಿದ್ದಾನೋ? ಹಳೆ ಒಡಂಬಡಿಕೆ ಅರಣ್ಯದಲ್ಲಿ ಇಸ್ರಾಯೇಲ್ಯರನ್ನು ಹಿಂಬಾಲಿಸಿದ ಬಂಡೆಯ ಕುರಿತಾಗಿ ಏನನ್ನೂ ಹೇಳುವದಿಲ್ಲ. ಅಪೊಸ್ತಲನ ದೃಢಪಡಿಸುವಿಕೆಗೆ ಮೂಲ ಯಾವುದು ಮತ್ತು "ಕ್ರಿಸ್ತನು ಬಂಡೆಯಾಗಿದ್ದಾನೆ" ಎಂದು ಏಕೆ ಹೇಳುತ್ತಾನೆ?

ಅವರು ಕೆಲವು ಸಾಧ್ಯತೆಗಳನ್ನು ಪಟ್ಟಿಮಾಡುತ್ತಾರೆ, ಬಂಡೆಯ ಕಲ್ಪನೆಯನ್ನು ಇಸ್ರಾಯೇಲ್ಯರಿಗೆ ಒದಗಿಸುವದರಲ್ಲಿ ದೇವರ ಸ್ಥಿರತೆಯನ್ನು ಹೋಲಿಸುತ್ತಾನೆ.[2] ದೇವರು ಬಂಡೆಯಿಂದ ನೀರನ್ನು ಅವರ ಪ್ರಯಾಣದಲ್ಲಿ ಮತ್ತೆ ಕೊನೆಯಲ್ಲಿ ಒದಗಿಸಿದನು (ವಿಮೋ 17:6; ಅರಣ್ಯಕಾಂಡ 20:8). ದೇವರು ತನ್ನ ಜನರೊಂದಿಗೆ ಇರುವದನ್ನು

ಮುಂದುವರೆಸಿದನು, ಬರುವಂತ ವರ್ಷಗಳುದ್ದಕ್ಕೂ ಅವರ ಅವಶ್ಯಕತೆಗಳನ್ನು ಒದಗಿಸಿದನು, ಪೌಲನು ಬಹುಶಃ ದೇವರು ಸಾಂಕೇತಿಕವಾಗಿ ಬಂಡೆಯಾಗಿದ್ದಾನೆ ಎಂದು ಸೂಚಿಸುತ್ತಿರಬಹುದು (ಧರ್ಮೋ 32:4) ನಲವತ್ತು ವರ್ಷಗಳ ವರೆಗೆ ಜನರನ್ನು ಅನುಸರಿಸಿ ಅವರಿಗೆ ಒದಗಿಸಿದ ದೇವರು. ಪೌಲನು ಮತ್ತು ಇತರ ಹೊಸ ಒಡಂಬಡಿಕೆಯ ಕ್ರೈಸ್ತರು ಯೇಸು ದೈವೀಕನಾಗಿದಾನೆ ಎಂಬುದನ್ನು ತಿಳಿದುಕೊಂಡಿದ್ದಾರೆ. ಹಳೆ ಒಡಂಬಡಿಕೆಯಲ್ಲಿ ದೇವರು ಮಾಡಿರುವದೆಲ್ಲವು ಕ್ರಿಸ್ತನ ಕಾರ್ಯಗಳನ್ನು ಒಳಗೊಂಡಿದೆ. ಯೋಹಾನನು ತನ್ನ ಸುವಾರ್ತೆಯನ್ನು ಸಹಜವಾಗಿದೆ. ಪೌಲನ ನಿರ್ಧಾರ ಹಳೆ ಒಡಂಬಡಿಕೆಯ ಕಥೆಗಳಲ್ಲಿ ಅವನು ಏನನ್ನು ಅರಿತಿದ್ದನೋ ಮತ್ತು ಯೇಸುವಿನ ವ್ಯಕ್ತಿತ್ವವನ್ನು ಅನುಸರಿಸುತ್ತದೆ. ದೈವೀಕನಾದ ಯೇಸವು ಪ್ರಾರಂಭದಲ್ಲಿ ದೇವರೊಂದಿಗೆ ಇದ್ದವನು ಎಂದು ಗುರುತಿಸುತ್ತಾ ಪ್ರಾರಂಭಿಸುತ್ತಾನೆ (ಯೋಹಾನ 1:1). ಇಸ್ರಾಯೇಲ್ಯರು ಹಿಂಬಾಲಿಸಿದ ದೇವರು ಬಂಡೆ ಎಂದು ಗುರುತಿಸಿದದಲ್ಲಿ, ಯೇಸು ಅರಣ್ಯದಲ್ಲಿ ಇಸ್ರಾಯೇಲ್ಯರು ಹಿಂಬಾಲಿಸಿದ ದೇವರಾಗಿದ್ದಾನೆ ಎಂಬುದು.

**ವಚನ 5.** ಇಸ್ರಾಯೇಲ ಜನರು ದೇವರಿಂದ ಅಗಾಧವಾದ ಆಶೀರ್ವಾದವನ್ನು ಹೊಂದಿದರು. ಅವನು ಅವರನ್ನು ತನ್ನ ಜನರೆಂದು ಆರಿಸಿಕೊಂಡನು; ಕೆಂಪು ಸಮುದ್ರದಲ್ಲಿ ಅವರು ಒಂದು ವಿಧದ ದೀಕ್ಷಾಸ್ನಾನವನ್ನು ಅನುಭವಿಸಿದರು. ದೇವರು ಅವರಿಗೆ ಆತ್ಮೀಕ ಆಹಾರ ಮತ್ತು ನೀರನ್ನು ದಯಪಾಲಿಸಿದನು, ಆದಾಗ್ಯೂ ಅವರು ದೇವರಿಂದ ದೂರ ತಿರುಗಿಕೊಂಡರು. ಆದುದರಿಂದ ದೇವರ ಕೋಪವು ಅವರ ಮೇಲೆ ಬಂತು: **ಅವರು ಅರಣ್ಯದಲ್ಲಿ ಇಡಲ್ಪಟ್ಟರು.** ವಿಗ್ರಹಾರಧನೆ ಮತ್ತು ಶಿಕ್ಷೆ ಕೊರಿಂಥದವರಿಗೆ ಎಚ್ಚರಿಕೆಯಾಗಿ ಉಪಯೋಗಿಸುತ್ತಿದ್ದಾನೆ. ಕ್ರೈಸ್ತರು ತಮ್ಮನ್ನು ತಾವು ವಿಗ್ರಹಗಳ ಸಂಪ್ರದಾಯಗಳಲ್ಲಿ ಭಾಗಿಯಾಗುವದರೊಂದಿಗೆ ಸಂಧಾನ ಮಾಡಿಕೊಳ್ಳುವಾಗ ಅವರು ದೇವರಿಂದ ದೂರ ಇಸ್ರಾಯೇಲರು ಹೇಗೆ ದೂರ ತಳ್ಳಲ್ಪಟ್ಟರೋ ಹಾಗೆಯೇ ತಳ್ಳಲ್ಪಟ್ಟರು. ಈ ವಿಷಯದಲ್ಲಿ ಇಸ್ರಾಯೇಲ್ಯರು ಮುಖ್ಯ ಉದಾಹರಣೆಯಾಗಿದ್ದಾರೆ.

ವಿಗ್ರಹಾರಾಧನೆಯಾಗಲಿ ಅಥವಾ ಬೇರೆ ಯಾವುದೇ ಪಾಪವನ್ನಾಗಲಿ ವಿಶಿಷ್ಟ ಸನ್ನಿವೇಶಗಳಲ್ಲಿ ಕ್ಷಮೆಯನ್ನು ಹೊಂದಬಹುದು. ಕಳ್ಳನು, ವ್ಯಭಿಚಾರಿಯು ಅಥವಾ ಸುಳ್ಳುಗಾರನು ಇಂಥಹ ಪರಿಸ್ಥಿತಿಯಲ್ಲಿ ಪಾಪವನ್ನು ಅರ್ಥಮಾಡಿಕೊಳ್ಳಬಹುದು. ಸಮರ್ಥಿಸಿಕೊಳ್ಳಬಹುದಾದ ಪರಿಗಣನೆಯಲ್ಲ - ತಿಳುವಳಿಕೆ, ಪ್ರೀತಿ ಅಥವಾ ಅವಶ್ಯಕತೆ - ಪಾಪಮಯ ಸ್ವಭಾವವನ್ನು ಸ್ವೀಕರಿಸಲು ಯೋಗ್ಯವಾಗಿರಬಹುದು. ಪೌಲನು ಇಸ್ರಾಯೇಲರು, ಅರಣ್ಯದಲ್ಲಿ ವಿಗ್ರಹಗಳಿಗೆ ತಿರುಗಿಕೊಳ್ಳುವಾಗ, ದೇವಾಲಯದಲ್ಲಿ ವಿಗ್ರಹಗಳಿಗೆ ನೈವೇದ ಮಾಡಿದ್ದನ್ನು ತಿನ್ನುವ ಕ್ರೈಸ್ತರಿಗಿಂತ ಹೆಚ್ಚಾಗಿ ದೇವರ ವಿರೋಧವಾಗಿ ತಿರುಗಿಬೀಳಲಿಲ್ಲ ಎಂದು ಹೇಳುತ್ತಾನೆ. ವೈಚಾರಿಕತೆಯಾಗಲಿ ಅಥವಾ ಜ್ಞಾನೋದಯದ ಹೇಳಿಕೆಯಾಗಲಿ ಈ ವಿಗ್ರಹಾರಾಧಕರ ರೂಢಿಯನ್ನು ಒಂದೇ ಆಸಕ್ತಿಯುಳ್ಳವರೊಂದಿಗೆ ಹಂಚಿಕೊಳ್ಳುವ ಈ ಭೋಜನವನ್ನು ಮುಗ್ಧತೆಯೆ ಭೋಜನವೆಂದು ಪರಿವರ್ತಿಸಲು ಸಾಧ್ಯವಿಲ್ಲ.

## “ನಮಗಾಗಿ ಉದಾಹರಣೆಗಳು” (10:6-13)

**[6]ಅವರು ಕೆಟ್ಟ ವಿಷಯಗಳನ್ನು ಆಶಿಸಿದಂತೆ ನಾವು ಆಶಿಸುವವರಾಗ ಬಾರದೆಂಬದಕ್ಕಾಗಿ ಈ ಸಂಗತಿಗಳು ನಮಗೆ ನಿದರ್ಶನಗಳಾಗಿವೆ. [7]ಅವರಲ್ಲಿ ಕೆಲವು ವಿಗ್ರಹಾರಧಕರಾಗಿದ್ದರು; ಜನರು ಉಣ್ಣುವದಕ್ಕೂ ಕುಡಿಯುವದಕ್ಕೂ ಕೂತುಕೊಂಡರು. ಕುಣಿದಾಡುವದಕ್ಕೆ ಎದ್ದರು ಎಂದು ಬರೆದಿದೆಯಲ್ಲಾ; ನೀವು ವಿಗ್ರಹಾರಾಧಕರಾಗಬೇಡಿರಿ. [8]ಅವರಲ್ಲಿ ಕೆಲವರು ಜಾರತ್ವಮಾಡಿ ಒಂದೇ ದಿನದಲ್ಲಿ ಇಪ್ಪತ್ತು ಮೂರು ಸಾವಿರ ಮಂದಿ ಸತ್ತರು; ನಾವು ಜಾರತ್ವಮಾಡದೆ ಇರೋಣ. [9]ಅವರಲ್ಲಿ ಕೆಲವರು ಕರ್ತನನ್ನು ಪರೀಕ್ಷಿಸಿ ಸರ್ಪಗಳಿಂದ ನಾಶವಾದಂತೆ; ನಾವು ಪರೀಕ್ಷಿಸದೆ ಇರೋಣ. [10]ಇದಲ್ಲದೆ ಅವರಲ್ಲಿ ಕೆಲವರು ಗುಣುಗುಟ್ಟಿ ಸಂಹಾರಕನ ಕೈಯಿಂದ ನಾಶವಾದರು; ನೀವು ಗುಣುಗುಟ್ಟಬೇಡಿರಿ. [11]ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನ ರೂಪವಾಗಿವೆ; ಮತ್ತು ಯುಗಾಂತ್ಯಕ್ಕೆ ಬಂದಿರುವದವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ. [12]ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ, [13]ಮನುಷ್ಯರು ಸಹಿಸಬಹುದಾದ ಶೋಧನೆಯೇ ಹೊರತು ಬೇರೆ ಯಾವದೂ ನಿಮಗೆ ಸಂಭವಿಸಲಿಲ್ಲ. ದೇವರು ನಂಬಿಗಸ್ಥನು ನಿಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಿಮಗೆ ಬರಗೊಡಿಸದೆ ನೀವು ಅದನ್ನು ಸಹಿಸುವದಕ್ಕೆ ಶಕ್ತರಾಗುವಂತೆ ಶೋಧನೆಯಾಗುತ್ತಲೇ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧ ಮಾಡುವನು.**

ಒಂದು ಕಾರಣಕ್ಕಾಗಿ ಇಸ್ರಾಯೇಲ್ಯರು ಮೂರ್ತಿ ಪೂಜೆಯ ಪ್ರಮಾದಕ್ಕೆ ಗುರಿಯಾದ ಕಥೆಯನ್ನು ಅಪೊಸ್ತಲನು ಪ್ರಸ್ತಾಪಿಸಿದನು. ಹಿಂದಿನ ಘಟನೆಗಳು ಬೋಧಿಸುವ ಮೌಲ್ಯಗಳಿರುವದೆಂದು ಆತನು ಎರಡು ಬಾರಿ ಓದುಗರಿಗೆ ಹೇಳಿದನು; ಅವರು ಬೋಧಪ್ರದ ಉದಾಹರಣೆಗಳನ್ನು ಮಂಡಿಸಿದರು (10:6, 11). ಸಭೆಗೆ ಪೌಲನು ನೀಡಿದ ವಿಗ್ರಹಗಳ ಕುರಿತ ಎಚ್ಚರಿಕೆ ಇತರ ವಿಷಯಗಳಿದ್ದಂತೆಯೇ ವಿಭಜನೆಗೊಳಗಾದ ಸಭೆಯನ್ನು ಸ್ಪಷ್ಟವಾಗಿ ತಿಳಿಸಿತು. ಹಲವರು ಪೌಲನ ಪಕ್ಷವಾಗಿ ಇತರರು ಅಪೊಲ್ಲೊಸ ಪಕ್ಷವಾಗಿ ಇರುವದು ಇತರ ಹಂತಗಳಲ್ಲಿ ವಿಭಜನೆಗಳಿರುವನ್ನು ಮನಸ್ಸಿಗೆ ತರುತ್ತವೆ. ಕೊರಿಂಥದಲ್ಲಿನ ಕೆಲವು ಅತ್ಯಾಧುನಿಕ ವೀಕ್ಷಕರು ಮತ್ತು ದೊಡ್ಡ ಧಾರ್ಮಿಕ ದೃಶ್ಯದಲ್ಲಿ ಭಾಗವಹಿಸುವವರು ಆಗಿದ್ದರು. ಅವರ ವಿವಿಧ ಸಂಪತ್ತು, ರಾಜಕೀಯ ಪ್ರಭಾವ, ಮತ್ತು ಶಿಕ್ಷಣವನ್ನು ಹೊಂದಿದ್ದರು. ಅವರಲ್ಲಿ ಬಹುಪಾಲು ಜನಾಂಗೀಯ ಯೆಹೂದಿಗಳಿದ್ದರು. ಹೆಚ್ಚು ವಿನಮ್ರ ಮೂಲದಿಂದ ಬಂದ ಅನ್ಯಜನರು ಇಸ್ರಾಯೇಲ್ಯರು ಕಾಡಿನಲ್ಲಿನ ಪ್ರವಾಸದ ಕುರಿತು ಕೂತುಹಲದಿಂದ ತಿಳಿದುಕೊಂಡಿರಬಹುದು, ಆದರೆ ಯೆಹೂದಿ ವಿಶ್ವಾಸಿಗಳ ಕೊರಿಂಥದಲ್ಲಿರುವ ಸಭೆಯ ನಾಯಕತ್ವವು ಯೆಹೂದಿಯ ಕೈಯಲ್ಲಿತ್ತು. ಯೆಹೂದಿಯರು ನಗರದ ಧಾರ್ಮಿಕ ಹವಾಹುಣಕ್ಕೆ ಅವಕಾಶ ಮಾಡಿಕೊಟ್ಟರು. ಕ್ರೈಸ್ತರಾಗುವ ಮೂಲಕ ತಮ್ಮ ನಗರದ ದೇವತೆಗಳು ಮತ್ತು ದೇವಾಸ್ಥಾನಗಳೊಂದಿಗಿನ ಪರಸ್ಪರ ಕ್ರಿಯೆಯಲ್ಲಿ ಯಾವುದೇ ಮಹತ್ವದ ಬದಲಾವಣೆಗಳಿಲ್ಲ ಎಂದು ಅವರು ಊಹಿಸಿದರು.

**ವಚನ 6.** ಇಸ್ರಾಯೇಲರ ವಿಗ್ರಹಾರಾಧನೆ ಕೊರಿಂಥದಲ್ಲಿರುವ ಕ್ರೈಸ್ತರಿಗೆ ಒಂದು ಪಾಠಕ್ಕಿಂತ ಹೆಚ್ಚಿನದಾಗಿದೆ. ಇಸ್ರಾಯೇಲರ ಪಾಪ ಮತ್ತು ಅದರೊಟ್ಟಿಗೆ ಬಂದಿರುವ ಕಷ್ಟಾನುಭವ ಮುಂದಿನ ಸಂತತಿಗಳಿಗೆ ಒಂದು ಉದಾಹರಣೆಯಾಗಿದೆ. ಇದೇ ರೀತಿಯ

ವಿಗ್ರಹಾರಾಧಕರ ಮಾರ್ಗದಲ್ಲಿ ನಾವು ಸಹ ಬೀಳಬಾರದು ಎಂಬುದಕ್ಕೆ ಒಂದು ಉದಾಹರಣೆಯಾಗಿದೆ.

ಅಪೊಸ್ತಲನು, **ಈ ಸಂಗತಿಗಳು ನಿಮಗೆ ಉದಾಹರಣೆಗಳಾಗಿವೆ** ಎಂದು ಬರೆಯುತ್ತಾನೆ. ಅರಣ್ಯದಲ್ಲಿ ದೇವರ ಜನರ ನಡತೆ ಮತ್ತು ಕೊರಿಂಥದ ಸಭೆಯಲ್ಲಿ ಜನರ ನಡತೆ ಸಮಾನಾಂತರದಲ್ಲಿ ಇಲ್ಲದೇ ಹೋದರು, ಇಸ್ರಾಯೇಲ್ಯರ ಉದಾಹರಣೆಯನ್ನು ಎಚ್ಚರಿಕೆಯಾಗಿ ಅಪೊಸ್ತಲನು ಉಪಯೋಗಿಸಲು ಸಾಕಷ್ಟು ಹೋಲಿಕೆಯನ್ನು ಹೊಂದಿವೆ. **ಕೆಟ್ಟ ಸಂಗತಿಗಳು** ಅವರ ವಿಗ್ರಹಾರಾಧನೆ ಮತ್ತು ಅವರ ಅವಿಧೇಯತೆಯ ಪರಿಣಾಮ ಎರಡನ್ನೂ ಒಳಗೊಂಡಿವೆ.

**ವಚನಗಳು 7, 8.** ಪೌಲನು ಹಳೆ ಒಡಂಬಡಿಕೆಯ ಸಂಗತಿಗಳನ್ನು ಕ್ರೈಸ್ತರಿಗೆ ದೀಕ್ಷಾಸ್ನಾನ ಮತ್ತು ಕರ್ತನಭೋಜನದ ವೈಶಿಷ್ಟತೆಯನ್ನು ನೋಡಲು ಸಹಾಯಮಾಡುವದಕ್ಕಾಗಿ ಉಪಯೋಗಿಸುತ್ತಾನೆ.[3] ತಕ್ಷಣದ ಅವನ ಕಳಕಳಿ ಏನಂದರೆ ತನ್ನ ಓದುಗರು ವಿಗ್ರಹಾರಾಧನೆಯ ಅಪಾಯವನ್ನು ತಿಳುದುಕೊಳ್ಳಬೇಕು ಎಂಬುದಾಗಿದೆ (8:1 ನೋಡಿರಿ). **ನಿಮ್ಮಲ್ಲಿ ಕೆಲವರಂತೆ, ವಿಗ್ರಹಾರಾಧಕರಾಗಬೇಡಿರಿ**, ಎಂದು ಅವನು ಕೇಳಿಕೊಳ್ಳುತ್ತಾನೆ. ಅಪೊಸ್ತಲನು εἰδωλολάτραι (*eidōlolatrai*) ತಾವೇ "ವಿಗ್ರಹಾರಾಧಕರು" ಮತ್ತು εἰδωλόθυτον (*eidōlothuton*; 10:19) ἱερόθυτον (*hierothuton;* 10:28), ವಿಗ್ರಹಗಳಿಗೆ ನೈವೇದ್ಯಮಾಡಿದ್ದನ್ನು ತಿನ್ನುವವರು ಇವರ ಮಧ್ಯದಲ್ಲಿ ವ್ಯತ್ಯಾಸವನ್ನು ತೋರಿಸುತ್ತಾನೆ. ಮೊದಲನೆಯ ಪದವು, ಇಸ್ರಾಯೇಲರನ್ನಾಗಲಿ ಅಥವಾ ಕೊರಿಂಥದವರನ್ನಾಗಲಿ ಗುರುತಿಸುತ್ತಿರಬಹುದು, ಇದು ಯಾರು ವಿಗ್ರಹಾರಾಧಕರಾಗಿದ್ದಾರೋ ಅವರು ಎಂದರ್ಥ. ಇನ್ನುಳಿದ ಎರಡು ಪದಗಳು ದೇವರುಗಳಿಗೆ ಯಜ್ಞವರ್ಪಿಸಿದ ಪಶುಗಳ ಮಾಂಸವಾಗಿದೆ. ಈ ಎರಡೂ ಪದಗಳು ಮಾಂಸವು ಅಶುದ್ಧವಾಗಿದೆ ಎಂದು ಸೂಚಿಸುವದಿಲ್ಲ ಯಾಕಂದರೆ ಧಾರ್ಮಿಕ ಸೇವೆಗಾಗಿ ಅದನ್ನು ಉಪಯೋಗಿಸುವದರಿಂದ. ಅವರು ಮಾಂಸದಿಂದ ಏನು ಮಾಡಿದರು ಎಂಬುದರೆಡೆಗೆ ತೋರಿಸುತ್ತಾರೆ.

ಇಸ್ರಾಯೇಲರು ವಿಗ್ರಹಾರಾಧನೆಯ ಕುರಿತು ಯಾವ ನಟನೆಯನ್ನು ಮಾಡಲಿಲ್ಲ. **ಅವರು ತಿನ್ನುವದಕ್ಕಾಗಿ ಮತ್ತು ಕುಡಿಯುವದಕ್ಕಾಗಿ ಕುಳಿತುಕೊಂಡರು**, ಮತ್ತು ತೋರಿಸುವದಕ್ಕಾಗಿ ನಿಂತುಕೊಂಡರು. ಇದಕ್ಕೆ ವ್ಯತ್ಯಾಸವಾಗಿ, ಕೊರಿಂಥದವರು ವಿಗ್ರಹಾರಾಧನೆ ಮತ್ತು ಅವರು ವಿಗ್ರಹಗಳಿಗೆ ಹೇಗೆ ಬಲಿಯನ್ನು ಅರ್ಪಿಸುತ್ತಾರೆ ಎಂಬುದರ ಮಧ್ಯದಲ್ಲಿ ವ್ಯತ್ಯಾಸವನ್ನು ಕಂಡುಕೊಳ್ಳಲು ಪ್ರಯತ್ನಿಸಿದರು. ಯಾರು ವಿಗ್ರಹಗಳಲ್ಲಿ ನಂಬಿಕೆಯನ್ನಿಡುತ್ತಾರೋ ಅವರು ಮಾತ್ರ ವಿಗ್ರಹಾರಾಧಕರು ಎಂದು ಅವರು ವಾದಿಸಿದರು. ಇದರ ಪರಿಣಾಮವಾಗಿ, ಅವರು ಬದಲಾವಣೆಗೆ ಅವಶ್ಯವಿರುವ ಯಾವುದನ್ನಾಗಲಿ ಅಲ್ಲಗಳೆದರು. ಪಶ್ಚಾತ್ತಾಪ ಅವರಿಂದ ದೂರವಾಗಿತ್ತು ಯಾಕಂದರೆ ಅವರು ದೇವರ ವಿರುದ್ಧವಾಗಿ ಮಾಡಿದ ಯಾವುದೇ ಅಪರಾಧವನ್ನು ಅಥವಾ ತಮ್ಮ ಜೀವಿತದಿಂದ ಈ ಪಾಪಗಳನ್ನು ತೆಗೆದುಹಾಕುಲು ಇರುವ ಯಾವ ಅವಶ್ಯಕತೆಯನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ.

ಪೌಲನು ವಿಮೋಚನಕಾಂಡ 32:6 ಈ ಭಾಗವನ್ನು, ಸಂಕ್ಷಿಪ್ತಗೊಳಿಸುತ್ತಿದ್ದಾನೆ, ಇದು

ಜನರ ವಿಗ್ರಹಾರಾಧನೆಯ ಕುರಿತು ಮಾತನಾಡುತ್ತದೆ ಮತ್ತು ಅದು ಹೇಳುತ್ತದೆ ಅವರು "ಉಣ್ಣುವದಕ್ಕೂ ಕುಡಿಯುವದಕ್ಕೂ ಕೂತುಕೊಂಡರು; ಆಮೇಲೆ ಎದ್ದು ಕುಣಿದಾಡಿದರು." ವಿಗ್ರಹಾರಾಧನೆ ಮತ್ತು ಅನೈತಿಕತೆ ಜೊತೆಯಾಗಿ ನಡೆಯುತ್ತವೆ, ದೇವತೆಗಳು ಐಗುಪ್ತ್ಯರಾಗಲಿ, ಕಾನಾನ್ಯರಾಗಲಿ ಅಥವಾ ಗ್ರೀಕರಾಗಲಿ, ಮೋವಾಬ್ಯರಾಗಲಿ, ಅಮೋನ್ಯರಾಗಲಿ, ಅಮೋರ್ಯರಾಗಲಿ ಮತ್ತು ಇತರ ಕಾನಾನ್ಯರು ತಮ್ಮ ದೇವತೆಗಳಿಗೆ ಬೇರೆ ಬೇರೆ ಹೆಸರುಗಳನ್ನು ನೀಡಿದ್ದರು; ಆದರೆ ಫಲವತ್ತತೆಯ ದೇವರುಗಳು ಮೂಲತಃ ಇಟ್ಟುಕೊಂಡಿರುವ ಹೆಸರುಗಳನ್ನು ಹೊರತುಪಡಿಸಿ. ಇಸ್ರಾಯೇಲ್ಯರ ಸುತ್ತಲೂ ಇರುವ ಜನರ ದೇವರುಗಳು ಹೆಚ್ಚಾಗಿ ಸೃಷ್ಟಿಯೊಂದಿಗೆ ಸಂಬಂಧ ಹೊಂದಿದ್ದವು. ವಿಗ್ರಹಗಳ ದೇವತೆಗಳು ಕೇವಲ ಮಳೆಬೀಳುವದಕ್ಕು ಮತ್ತು ಮಿಂಚು ಹೊಳೆಯುದಕ್ಕೂ ಮಾತ್ರ ಕಾರಣರಲ್ಲ; ಅವರೇ ಮಳೆ ಮತ್ತು ಮಿಂಚಾಗಿದ್ದರು. ಬೆಳೆಯ ಸುಗ್ಗಿ ಮತ್ತು ಹಿಂಡುಗಳ ಉತ್ಪಾದನೆ ದೇವರುಗಳಲ್ಲಿ ಜನರ ನಂಬಿಕೆಯೊಂದಿಗೆ ಹೆಣೆದುಕೊಂಡಿದ್ದವು. ಅನೈತಿಕತೆ ಮತ್ತು ವಿಗ್ರಹಾರಾಧನೆ ಕೊರಿಂಥದ ಗ್ರೀಕ್ ಪಟ್ಟಣದಲ್ಲಿ ಒಟ್ಟಾಗಿ ನಡೆಯುತ್ತಿದ್ದವು, ಐಗುಪ್ತ ಮತ್ತು ಕಾನಾನಿನಲ್ಲಿ ಇದ್ದಂತೆ. ಮೋಶೆಯು ಇಸ್ರಾಯೇಲರನ್ನು ಪರಿಶುದ್ಧ ಜನರು ಎಂದು ಗುರುತಿಸಲು ಧರ್ಮಶಾಸ್ತ್ರವನ್ನು ಪಡೆದುಕೊಳ್ಳಲು ಬೆಟ್ಟದ ಮೇಲೆ ಇರುವಾಗಲೂ ಸಹ, ಜನರು ತಮ್ಮನ್ನು ತಾವು ವಿಗ್ರಹಾರಾಧನೆ ಅದರೊಟ್ಟಿಗೆ ಅನೈತಿಕತೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ಅಪೊಸ್ತಲನು ಐಗುಪ್ತದಿಂದ ಇಸ್ರಾಯೇಲರು ತಪ್ಪಿಸಿಕೊಂಡು ಬಂದ ತಕ್ಷಣ ಸಿನಾಯನಲ್ಲಿ ವಿಗ್ರಹಾರಾಧನೆಯ ದೃಶ್ಯದಿಂದ ಸ್ವಲ್ಪ ಮಟ್ಟಿಗೆ ವಿಷಯವನ್ನು ಮೋವಾಬನಲ್ಲಿ ವಿಗ್ರಹಾರಾದನೆಗೆ ಬದಲಾಯಿಸುತ್ತಿದ್ದಾನೆ, ಅರಣ್ಯದಲ್ಲಿ ಅಲೆಯುತ್ತಿರುವ ಕೊನೆಯಲ್ಲಿ (ಅರಣ್ಯಕಾಂಡ 25). ಯಾಕಂದರೆ ಸಂದರ್ಭದಲ್ಲಿ ಅವರ ವಿಗ್ರಹಾರಾಧನೆ ಮತ್ತು ಅನೈತಿಕತೆಯಿಂದಾಗಿ ದೇವರು ಅವರ ಮೇಲೆ ರೋಗವನ್ನು ಬರಮಾಡಿದನು. ಸುಮಾರು 23,000[4] ಇಸ್ರಾಯೇಲರು **ಒಂದೇ ದಿನದಲ್ಲಿ** ನಾಶವಾದರು.

**ವಚನ 9.** ಇಸ್ರಾಯೇಲರು ಅರಣ್ಯದಲ್ಲಿ **ಕರ್ತನನ್ನು ಪರೀಕ್ಷಿಸಲು** ಏನೇ ಮಾಡಿದ್ದರೂ, ಕೆಲವು ಕೊರಿಂಥದವರು ಅದೇ ರೀತಿಯಲ್ಲಿ ಕರ್ತನಾದ ಯೇಸುವನ್ನು ಪರೀಕ್ಷಿಸುವವರಾಗಿದ್ದಾರೆ. ಕ್ರೈಸ್ತರು ದೇವಾಲಯದಲ್ಲಿ ವಿಗ್ರಹಕ್ಕೆ ಅರ್ಪಿಸಿದ ಮಾಂಸವನ್ನು ತಿನ್ನುವಾಗ, ಅವರು ಯೇಸುವನ್ನು ಪರೀಕ್ಷೆಗೆ ಗುರಿಮಾಡುತ್ತಾರೆ. ಅರಣ್ಯದಲ್ಲಿ ಶೋಧಕನಿಂದ ಎದುರಿಸಲ್ಪಟ್ಟಾಗ, ಯೇಸು ಧರ್ಮೋಪದೇಶಕಾಂಡ 6:16 ಉಲ್ಲೇಖಿಸುತ್ತಾನೆ: "ನಿನ್ನ ದೇವರಾಗಿರುವ ಕರ್ತನನ್ನು ಪರೀಕ್ಷಿಸಬಾರದು" (ಮತ್ತಾಯ 4:7). ಅನನೀಯನು ಮತ್ತು ಸಫೈರಳು ಸತ್ತು ಬಿದ್ದರು ಯಾಕಂದರೆ "ಇಬ್ಬರೂ ಕರ್ತನ ಆತ್ಮನನ್ನು ಪರೀಕ್ಷಿಸುವದಕ್ಕೆ ಒಡಂಬಟ್ಟರು" (ಅ.ಕೃ. 5:9).

ಪೌಲನು ಇಸ್ರಾಯೇಲರ ಇತಿಹಾಸದಲ್ಲಿ ಅನೇಕ ಕ್ರಾಂತಿಕಾರಿ ಘಟನೆಗಳನ್ನು ಉಲ್ಲೇಖಿಸುತ್ತಾನೆ. ಸಿನಾಯಿ ಬೆಟ್ಟದಲ್ಲಿ, ಜನರು "ಕುಣಿದಾಡುವದಕ್ಕಾಗಿ ಎದ್ದು ನಿಂತರು" (ವಿಮೋ. 32:6). Peor ಬಾಳನ ಮುಂದೆ ಅವರು "ಅನೈತಿಕವಾಗಿ ವರ್ತಿಸಿದರು . . . ಮತ್ತು ಇಪ್ಪತ್ತ ಮೂರು ಸಾವಿರ ಜನರು ಒಂದೇ ದಿನದಲ್ಲಿ ಹತರಾದರು" (1 ಕೊರಿಂಥ 10:8; ನೋಡಿರಿ ಅರಣ್ಯಕಾಂಡ 25:9). ಇಸ್ರಾಯೇಲರ ನಂಬಿಕೆಯ ಕೊರತೆ ಅನೇಕ

ಸಂದರ್ಭಗಳಲ್ಲಿ ಕ್ರಾಂತಿಕಾರಿ ವರ್ತನೆಗೆ ನಡೆಸಿತು. ಇವೆಲ್ಲವುಗಳು ವಿಗ್ರಹಾರಾಧನೆಯನ್ನು ಒಳಗೊಂಡಿರಲಿಲ್ಲ. ಕಾನಾನ್ಯರ ಆರಾದ್ ಪಟ್ಟಣದ ಅರಸನಿಂದ ಅನುಭವಿಸಿದ ಸೋಲಿನಿಂದಾಗಿ, ಜನರು ಗುಣುಗುಟ್ಟತೊಡಗಿದರು ಮತ್ತು **ಉರಿಮಂಡಲಗಳಿಂದ ನಾಶವಾದರು** (ನೋಡಿರಿ ಅರಣ್ಯಕಾಂಡ 21:6). ಖಂಡಿತವಾಗಿ, ಪೌಲನು ಕೊರಿಂಥದಲ್ಲಿರುವ ತನ್ನ ಓದುಗರಿಗೆ ಹೃದಯಪೂರ್ವಕವಾಗಿ ವಿಧೇಯರಾಗಲು ಕರೆನೀಡುತ್ತಿದ್ದಾನೆ. ಆತನನ್ನು ಪರೀಕ್ಷಿಸಿವುದೆಂದರೆ ನಾಶನವನ್ನು ಬರಮಾಡಿಕೊಂಡ ಹಾಗೆ.

**ವಚನ 10.** ಕೊರಿಂಥದವರು ದೇವರನ್ನು ಮತ್ತು ದೇವರೊಬ್ಬನನ್ನೇ ಸೇವಿಸಬೇಕೆಂದು ಅಲ್ಲ ಆದರೆ ಅವರು ದೇವರು ವಿರುದ್ಧವಾಗಿ **ಗುಣಗುಟ್ಟಲೂ** ಬಾರದು. ಗುಣುಗುಟ್ಟುವದು (γογγύζω, *gonguzō*) ಎಂಬ ಪದಕ್ಕೆ 1 ಕೊರಿಥಧಲ್ಲಿ ಮಾತ್ರ ಬೇರೆಲ್ಲಿಯೂ ಉಪಯೋಗಿಸಲಾಗಿಲ್ಲ. ಕೊನೆಯಿಲ್ಲದ ಗುಣುಗುಟ್ಟುವಿಕೆ ಇಸ್ರಾಯೇಲ್ಯರನ್ನು ಅರಣ್ಯದಲ್ಲಿ ಉಳಿಯುವಂತೆ ಮಾಡಿತು (ವಿಮೋ. 15:24; ಅರಣ್ಯಕಾಂಡ 14:36; 16:41). ದೂರುವದು ಅಷ್ಟೊಂದು ಭಯಕರವಾದ ಹವ್ಯಾಸವಾಗಿದೆಯೋ? ಇಸ್ರಾಯೇಲರು ಮರಭೂಮಿಯಲ್ಲಿ ಮಾಡಿದ ಎಲ್ಲಾ ಪಾಪಗಳಲ್ಲಿ. ಇದು ಸಂಬೋಧಿಸಿದ ಪಾಪಗಳ ಪಟ್ಟಿಯ ಆದ್ಯತೆಯಲ್ಲಿ ಅತ್ಯಂತ ಕೆಳಗೆ ಕಂಡುಬರುತ್ತದೆ. ಬಹುಶಃ ಪೌಲನು ಇದನ್ನು ಉಲ್ಲೇಖಿಸಲು ಕಾರಣ ಯಾರು ವಿಗ್ರಹಗಳ ದೇವಾಲಯದಲ್ಲಿ ಭೋಜನವನ್ನು ಮಾಡಲು ಬಯಸುತ್ತಿದ್ದರೋ ಅವರು ಆತನ ವಿರುದ್ಧವಾಗಿ ಗುಣುಗುಟ್ಟಿದರು. ಇನ್ನೊಂದು ಸಾಧ್ಯತೆ ಏನಂದರೆ ಅವನು ಕೊರಿಂಥದ ಸಭೆಯಲ್ಲಿ ವಿಭಜನೆಗೆ ಸಂಭಂಧಿಸಿದ ವಿಷಯಕ್ಕೆ ಸಾಮಾನ್ಯವಾಗಿ ಗುಣುಗುಟ್ಟುವ ವರದಿಯನ್ನು ಆತನು ಆಲಿಸಿದ್ದನು.

ಅರಣ್ಯದಲ್ಲಿ ಗುಣುಗುಟ್ಟಿದವರು, ಮತ್ತು ಬಹುಶಃ ಕೊರಿಂಥದಲ್ಲಿ ಇದನ್ನೇ ಮಾಡಿದವರು, ಅವರು ಸಹ **ನಾಶಕನಿಂದ ನಾಶನಕ್ಕೆ ಒಳಗಾಗುತ್ತಾರೆ** ಎಂಬ ಎಚ್ಚರಿಕೆಯಾಗಿದೆ. ಅಪೊಸ್ತಲನು ಮುಂದಕ್ಕೆ "ನಾಶಕನನ್ನು" ಗುರುತಿಸಲಿಲ್ಲ. ಐಗುಪ್ತ್ಯರ ಮೇಲೆ ಹತ್ತನೇಯ ಉಪದ್ರವ ಬರುವದಕ್ಕಿಂದ ಪೂರ್ವದಲ್ಲಿ ದೇವರು ಇಸ್ರಾಯೇಲರಿಗೆ ರಕ್ತವನ್ನು ತಮ್ಮ ಮನೆ ಬಾಗಿಲಿಗೆ ಮತ್ತು ಬಾಗಿಲಿನ ನಿಲುವು ಪಟ್ಟಿಗೆ ಹಚ್ಚಬೇಕು ಎಂದು ಹೇಳಿದನು ದೇವರು ಇಸ್ರಾಯೇಲ್ಯರನ್ನು ನಾಶಮಾಡುವಾಗ ಅವನು ರಕ್ತದ ಗುರುತಿರುವ ಮನೆಗಳಲ್ಲಿ "ನಾಶಕನನ್ನು ಅನುಮತಿಸುವದಿಲ್ಲ" (ವಿಮೋ. 12:23). "ನಾಶಕನು" ಐಗುಪ್ತ್ಯದ ಮೇಲೆ ಬರುವ ನಾಶನಕ್ಕೆ ರೂಪಕವಾಗಿದ್ದಾನೆ. ಕೀರ್ತನೆ 78:49ರಲ್ಲಿ ಐಗುಪ್ತ್ಯರ ಮೇಲೆ ದೇವರ ಕೋಪದ ತೀರ್ಪು "ಸಂಹಾರಕದೂತಗಣವನ್ನೋ ಎಂಬಂತೆ ಕಳುಹಿಸಿದನು" ಎಂಬುದಕ್ಕೆ ಸಮನಾಗಿದೆ. ಪೌಲನು "ನಾಶಕನನ್ನು" ದೇವರಿಂದ ಪ್ರತ್ಯೇಕಿಸಲ್ಪಟ್ಟ ವ್ಯಕ್ತಿಯಾಗಿ ನೋಡುವದಿಲ್ಲ; ಪದವು ಮತ್ತೆ ದೇವರ ನೀತಿವಂತಿಕೆಯ ರೌದ್ರದ ರೂಪಕವಾಗಿದೆ. ಅದನ್ನು ಆತನು ವಿಗ್ರಹಾರಾಧಕರ, ಅನೈತಿಕತೆಯ, ಗುಣುಗುಟ್ಟುವವರ ಮತ್ತು ದಂಗೆ ಏಳುವವರ ಮೇಲೆ ಸುರಿಸಲು ಸಿದ್ಧನಾಗಿದ್ದಾನೆ.

**ವಚನ 11.** ಮೊದಲನೆಯ ಸತ್ಯವೇದ ಹಳೆ ಒಡಂಬಡಿಕೆಯಾಗಿದೆ, ಮತ್ತು ಇದು ಯೆಹೂದ್ಯ ವಿಶ್ವಾಸಿಗಳಿಂದ ಯೆಹೂದೇತರ ಕ್ರೈಸ್ತರಿಗೆ ಪರಿಚಯಿಸಲಾಯಿತು. ಅಪೊಸ್ತಲನು ಎರಡನೆಯ ಸಾರಿ ಹಳೆ ಒಡಂಬಡಿಕೆಯಲ್ಲಿ ದಾಖಲಿಸಲಾದ ಸಂಗತಿಗಳು

ಕ್ರೈಸ್ತರಿಗೆ **ಉದಾಹರಣೆಯಾಗಿವೆ** ಎಂದು ಸೂಚಿಸುವಾಗ ಯೆಹೂದ್ಯರಿಂದಾಗಲಿ ಅನ್ಯ ಓದುಗರಿಂದಾಗಲಿ ಯಾವುದೇ ಹೋರಾಟವನ್ನು ನಿರೀಕ್ಷಿಸಿರಲಿಲ್ಲ. ಅವನು ಈ ಸಂಗತಿಗಳು ಕ್ರೈಸ್ತ ನಂಬಿಕೆ ಮತ್ತು ಅಭ್ಯಾಸಕ್ಕೆ **ಸೂಚನೆಗಳಾಗಿ** ದಾಖಲಿಸಲಾಗಿವೆ ಎಂದು ಹೇಳುತ್ತಾನೆ (ನೋಡಿರಿ 10:6).

ಕ್ರಿಸ್ತನು ಬರುವವರೆಗೆ, ಹಳೆ ಒಡಂಬಡಿಕೆ ರಹಸ್ಯವಾದ ಲಕೋಟೆಯಲ್ಲಿತ್ತು; ಆದರೆ ಈಗ, **ಕಾಲದ ಸಮಾಪ್ತಿಯಲ್ಲಿ,** ಸಭೆಯು ದೇವರ ಪ್ರಕಟನೆಯ ಸಂಪೂರ್ಣ ಲಾಭವನ್ನು ಹೊಂದಬಹುದು. ಯೇಸು ಮತ್ತು ಆತನ ಅಪೊಸ್ತಲರು ವೇದವಾಕ್ಯದ ಅರ್ಥದ ಜ್ಞಾನೋದಯವನ್ನು ತಂದರು ದೇವರ ಆಶೀರ್ವಾದದ ಸಂಪೂರ್ಣತೆ ಕೊರಿಂಥದವರಿಗೆ ಸಂಬಂಧಿಸದ್ದಾಗಿದೆ. ದೇವರ ಎಲ್ಲಾ ಉದ್ದೇಶ ಅವರ ಆನಂದಿಸುತ್ತಿರುವ ಆಶೀರ್ವಾದದಲ್ಲಿ ತಿಳಿದುಬರುತ್ತದೆ. ಮತ್ತು ಈ ಆಶೀರ್ವಾದಗಳು ದೊಡ್ಡ ಜವಾಬ್ದಾರಿಯೊಂದಿಗೆ ಬರುತ್ತವೆ.

> ಕ್ರಿಸ್ತನ ಪುನರುತ್ಥಾನದಿಂದಾಗಿ ಮತ್ತು ಪ್ರಸ್ತುತ ದೇವರ ಬಲಗಡೆಯಲ್ಲಿ ಆತನ ಆಳ್ವಿಕೆಯಿಂದಾಗಿ ಪೌಲನು ಕ್ರೈಸ್ತರು ಮಾನವ ಇತಿಹಾಸದ ಕೊನೆಯ ಅವಧಿಯಲ್ಲಿ ಜೀವಿಸುತ್ತಿದ್ದಾರೆ ಎಂದು ಹೇಳುತ್ತಾನೆ, ಈ ಅವಧಿಯಲ್ಲಿ ಅದರ ಮೇರೆಗಳು ಆತನ ಪುನರುತ್ಥಾನ ಮತ್ತು ದಿವಾರೋಹಣದ ಮೂಲಕ ಕ್ರಿಸ್ತನು ಒಂದು ಕೊನೆಯಲ್ಲಿ ಮತ್ತು ಆತನ ಎರಡನೆಯ ಬರೋಣ ಇನ್ನೊಂದು ಕಡೆಯಲ್ಲಿ ನಿರ್ಧಾರವಾಗಿವೆ. ದೇವರ ಮಾನವ ಕುಲದೊಂದಿಗೆ ಎಲ್ಲಾ ಮೊದಲಿನ ವ್ಯವಹಾರಗಳು, ಎಲ್ಲವೂ ಆತನ ಸಾಮಾನ್ಯ ಪ್ರಕಟನೆ ಮತ್ತು ಆತನು ಆರಿಸಿಕೊಂಡ ಜನರ ಮೂಲಕ ಆತನ ಪ್ರಕಟನೆ, ಕ್ರಿಸ್ತನ ಆಳ್ವಿಕೆಯ ಗುಣಲಕ್ಷಣಗಳೆಡೆಗೆ ಸೂಚಿಸುತ್ತವೆ, ಪೌಲನು ಮೆಸ್ಸಿಯನ ಯುಗದಲ್ಲಿ ಜೀವಿಸುತ್ತಿರುವವರಿಗೆ ಮೊದಲಿನ ಎಲ್ಲಾ ವೇದವಾಕ್ಯಗಳನ್ನು ತನ್ನ ಸೂಚನೆಗಳಿಗೆ ಮತ್ತು ಬೋಧನೆಗಳಿಗೆ ಅಂತಿಮ ಗುರಿಯನ್ನಾಗಿ ದೃಢೀಕರಿಸುತ್ತಾನೆ.[5]

**ವಚನ 12.** ಪೌಲನು ಆದುದರಿಂದ **ನಿಂತಿದ್ದೇನೆ ಎಂದು ತಿಳಿದವನು ಬೀಳದಂತೆ ಎಚ್ಚರವಾಗಿರಲಿ** . . . ಹೀಗೆ ಹೇಳುವಾಗ ಕೆಲವು ವಿಶ್ವಾಸಿಗಳನ್ನು ಸಂಬೋಧಿಸುತ್ತಿದ್ದಾನೆ ಎನ್ನುವದರಲ್ಲಿ ಸಂದೇಹವಿಲ್ಲ, ಅದೇ ಸಮಯದಲ್ಲಿ ಎಲ್ಲಾ ಕ್ರೈಸ್ತರು ಸ್ವ-ಪರೀಕ್ಷೆಯಿಂದ ಪ್ರಯೋಜನವನ್ನು ಹೊಂದಬಹುದು, ಅಪೊಸ್ತಲನು ತನ್ನ ವೀಕ್ಷಣೆಯನ್ನು ಈ ಪ್ರಸಂಗದ ಪೂರ್ವದಲ್ಲಿ ವಿಸ್ತರಿಸುತ್ತಿದ್ದಾನೆ: "ಜ್ಞಾನವು ಉಬ್ಬಿಸುತ್ತದೆ, ಪ್ರೀತಿಯು ಭಕ್ತಿವೃದ್ಧಿಯನ್ನುಂಟುಮಾಡುತ್ತದೆ" (8:1). ವಿಗ್ರಹಗಳ ಅನುಪಸ್ತಿತಿಯ ಕುರಿತಾದ ತಮ್ಮ ತಿಳುವಳಿಕೆಯು ತಮ್ಮನ್ನು ವಿಗ್ರಹಾರಾಧಕರ ಔತಣದಲ್ಲಿ ಪಾಲುತೆಗೆದುಕೊಳ್ಳಲು ಶಕ್ತರನ್ನಾಗಿಸಿತು (8:4) ಎಂದು ಭಾವಿಸುವವರಿಗೆ ಅವರು ಕೃಪೆಯಿಂದ ಬಿದ್ದುಹೋಗುವ ಸಾಧ್ಯತೆಯಿದೆ (ನೋಡಿರಿ ಗಲಾತ್ಯ 5:4) ಎಂಬ ಎಚ್ಚರಿಕೆಯ ಅವಶ್ಯಕತೆಯಿದೆ. ಅವರು ಬಹುಶಃ ಊಹಿಸಿಕೊಂಡಿರಬಹುದು, ಯಾಕೆಂದರೆ ಅವರು ದೀಕ್ಷಾಸ್ನಾನ ಹೊಂದಿದ್ದರು ಮತ್ತು ಕರ್ತನ ಭೋಜನದಲ್ಲಿ ಕ್ರಮಪ್ರಕಾರವಾಗಿ ಪಾಲು ತೆಗೆದುಕೊಳ್ಳುತ್ತಿದ್ದರು. ದೇವರೊಂದಿಗೆ ಉತ್ತಮವಾದ ನಿಲುವನ್ನು ಹೊಂದಿದ್ದೇವೆ ಎಂಬ ಭರವಸೆಯನ್ನು ಹೊಂದಿದ್ದರು ಮತ್ತು ನಿತ್ಯತ್ವದ ಸುರಕ್ಷಿತತೆ ಇದೆ. ಇದಕ್ಕೆ ವ್ಯತಿರಿಕ್ತವಾಗಿ, ಪೌಲನು ಇಸ್ರಾಯೇಲ್ಯರು ದೇವರಿಂದ ಅನೇಕ ಆಶೀರ್ವಾದಗಳನ್ನು ಅನುಭವಿಸಿದ್ದಾಗ್ಯೂ "ಅರಣ್ಯದಲ್ಲಿ ನಾಶವಾದರು" ಎಂಬುದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು (1 ಕೊರಿಂಥ

10:5). ವಿಗ್ರಹಗಳ ದೇವಾಲಯದ ಸಂಪ್ರದಾಯಗಳಲ್ಲಿ ಪಾಲು ತೆಗೆದುಕೊಳ್ಳುವವರು ತಮ್ಮ ರಕ್ಷಣೆಯನ್ನು ಅಪಾಯಕ್ಕೆ ಇಡುಮಾಡುತ್ತಾರೆ.

ಕೊರಿಂಥದಲ್ಲಿದ್ದ ಸ್ವ_ಭರವಸೆಯನ್ನು ಹೊಂದಿರುವ ಜ್ಞಾನಿಗಳು ಇಸ್ರಾಯೇಲರ ಉದಾಹರಣೆಯಲ್ಲಿ ನೀಡಿದ ಎಚ್ಚರಿಕೆಗಳನ್ನು ಗಂಭೀರವಾಗಿ ಪರಿಗಣಿಸುವದು ಅವಶ್ಯವಾಗಿದೆ. ಅವರು ವಿಗ್ರಹಾರಾಧನೆಯನ್ನು ತ್ಯಜಿಸಬೇಕು, ಆದರೆ ಅವರು ನಿರಾಶರಾಗಬೇಕಿಲ್ಲ. ಅವರು ಅದೇ ವಿಧದವಾದ ಶರೀರದ ಶೋಧನೆಗಳು ಯಾವಾಗಲೂ ಮಾನವಕುಲಕ್ಕೆ ಸಮಸ್ಯೆಯನ್ನು ತಂದವು. ಇತರ ಜನರು ತಮ್ಮ ಪಾಪಗಳಿಗಿಂತ ಮೇಲಕ್ಕೆ ಬಂದರು ಮತ್ತು ದೇವರ ಕೃಪೆಯಿಂದ, ತಮ್ಮ ಜೀವಿತವನ್ನು ಬದಲಾಯಿಸಿಕೊಂಡರು. ಕೊರಿಂಥದವರು ಸಹ. ಅಪೊಸ್ತಲರು ಈ ವಿಷಯದಲ್ಲಿ ದೈವೀಕ ಅಧಿಕಾರವನ್ನು ದೃಢಪಡಿಸಿದರು. ದೇವರು ಅವರ ಮೂಲಕ ಮಾತನಾಡುತ್ತಾನೆ (2:13).

**ವಚನ 13.** ಮೋಶೆಯು ಸ್ಪಷ್ಟವಾಗಿ ನಂತರ ಇಸ್ರಾಯೇಲರಿಗೆ ದೇವರು ಅವರನ್ನು ಅರಣ್ಯದಲ್ಲಿ ಪರೀಕ್ಷಿಸುತ್ತಿದಾನೆ ಎಂಬುದನ್ನು ವಿವರಿಸುತ್ತಾನೆ (ಧರ್ಮೋ. 8:2, 16). ಪ್ರಕ್ರಿಯೆಯಲ್ಲಿ, ಕೆಲವರು ಬಿದ್ದುಹೋದರು ಅದೇ ಸಮಯದಲ್ಲಿ ಇತರರು ಬಲಿಷ್ಟರಾದರು. ಕೊರಿಂಥದವರು ದೇವರು ಅವರು ಸಹಿಸಿಕೊಳ್ಳಲು ಸಾಧ್ಯವಿರುವದರಿಂದಾಚೆಗೆ ಅವರನ್ನು ಪರೀಕ್ಷಿಸುವದಿಲ್ಲ ಎಂಬ ಭರವಸೆಯನ್ನು ಹೊಂದಿಕೊಳ್ಳುವದು ಅವಶ್ಯವಾಗಿದೆ. ಅವರು ನಂಬಿಕೆಯಲ್ಲಿ ಬಲವಾಗಬೇಕಾಗಿದೆ. ಶೋಧನೆ ಗಂಭೀರವಾಗಿರಬಹುದು, ಆದರೆ ದೇವರು ತನ್ನ ಜನರನ್ನು ರಕ್ಷಿಸಲು ಶಕ್ತನಾಗಿದ್ದಾನೆ; ಅವನು **ನಂಬಿಗಸ್ತನಾಗಿದ್ದಾನೆ**. ದೇವರು ಕೊರಿಂಥಲ್ಲಿದ್ದ ತನ್ನ ಜನರನ್ನು ಪ್ರೀತಿಸುತ್ತಾನೆ ಮತ್ತು ಅವರಿಗೆ ತಾಳಿಕೊಳ್ಳುವ ಶಕ್ತಿ ಇದೆಯೋ ಇಲ್ಲವೋ ಪರೀಕ್ಷಿಸುತ್ತಾನೆ. ಅವರ ಮೇಲೆ ಯಾವುದೇ ಶೋಧನೆ ಬರಲಿ; ಅವನು ನಂಬಿಗಸ್ತ ಕ್ರೈಸ್ತರಿಗೆ ಧಿಗ್ಭ್ರಮೆಗೊಳ್ಳಲು ಬಿಡುವದಿಲ್ಲ. ಕ್ರಿಸ್ತನ ಜನನದ ಪೂರ್ವದಲ್ಲಿ ಸುಮಾರು ಎರಡು ನೂರು ವರ್ಷಗಳ ಹಿಂದೆ ಇದ್ದ Ben Sirach ಒಬ್ಬ ಯೆಹೂದ್ಯ ಸನ್ಯಾಸಿ, ಹೀಗೆ ವೀಕ್ಷಿಸುತ್ತಾನೆ, "ಕರ್ತನಲ್ಲಿ ಭಯಪಡುವವರಿಗೆ ಯಾವುದೇ ಕೆಡಕು ಬರುವದಿಲ್ಲ, ಆದರೆ ಶೋಧನೆಯಲ್ಲಿ ಅವನು ಮತ್ತೇ ಮತ್ತೇ ನಮ್ಮನ್ನು ಬಿಡುಗಡೆಮಾಡುತ್ತಾನೆ."[6]

## ವಿಗ್ರಹಾರಾಧನೆಯಿಂದ ಓಡಿರಿ (10:14-22).

**[14]ಆದುದರಿಂದ ಪ್ರಿಯ ಸಹೋದರರೇ, ವಿಗ್ರಹಾರಾಧನೆಯ ಗೊಡವೆಯನ್ನು ಸಂಪೂರ್ಣವಾಗಿ ತೊರೆದು ಬಿಡಿರಿ. [15]ನೀವು ವಿವೇಕಿಗಳೆಂದು ಇದನ್ನು ಹೇಳುತ್ತೇನೆ, ನಾನು ಹೇಳುವದನ್ನು ನೀವೇ ಯೋಚಿಸಿರಿ. [16]ನಾವು ದೇವಸ್ತೋತ್ರಮಾಡಿ ಪಾತ್ರೆಯಲ್ಲಿ ಪಾನ ಮಾಡುವದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತ್ತದಲ್ಲವೇ, ನಾವು ರೊಟ್ಟಿಯನ್ನು ಮುರಿದು ತಿನ್ನುವದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತ್ತದಲ್ಲವೇ. [17]ರೊಟ್ಟಿಯು ಒಂದೇಯಾಗಿರುವದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ; ಯಾಕಂದರೆ ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲುತಕ್ಕೊಂಡು ತಿನ್ನುತ್ತೇವೆ. [18]ವಂಶಕ್ರಮದಿಂದ ಇಸ್ರಾಯೇಲ್ಯರಾಗಿರುವವರನ್ನು ಯೋಚಿಸಿರಿ, ಯಜ್ಞಮಾಡಿದ್ದನ್ನು ತಿನ್ನುವವರು ಯಜ್ಞವೇದಿಯೊಡನೆ**

**ಭಾಗಿಗಳಾಗಿದ್ದಾರಲ್ಲವೇ. [19]ಹೀಗೆ ಹೇಳುವದರಿಂದ ಏನು ಹೇಳಿದ ಹಾಗಾಯಿತು? ವಿಗ್ರಹಕ್ಕೆ ನೈವೇದ್ಯ ಮಾಡಿದ ಪದಾರ್ಥವು ವಾಸ್ತವವೆಂದು ಅಥವಾ ವಿಗ್ರಹವು ವಾಸ್ತವವೆಂದು ನನ್ನ ಆಬಿಪ್ರಾಯವೋ? ಅಲ್ಲ. [20]ಆದರೆ ಅನ್ಯಜನರು ತಾವು ಅರ್ಪಿಸುವ ಬಲಿಗಳನ್ನು ದೇವರಿಗಲ್ಲ ದೆವ್ವಗಳಿಗೆ ಅರ್ಪಿಸುತ್ತಾರೆಂದು ನನ್ನ ಅಭಿಪ್ರಾಯವು. ನೀವು ದೆವ್ವಗಳೊಡನೆ ಭಾಗಿಗಳಾಗಿರಬೇಕೆಂಬದು ನನ್ನ ಇಷ್ಟವಲ್ಲ. [21]ನೀವು ಕರ್ತನ ಪಾತ್ರೆ ಮತ್ತು ದೆವ್ವಗಳ ಪಾತ್ರೆ ಇವುಗಳೊಳಗೆ ಒಂದರಲ್ಲಿಯೇ ಹೊರತು ಎರಡರಲ್ಲಿಯೂ ಕುಡಿಯಲಾರಿರಿ; ಕರ್ತನ ಪಂಕ್ತಿ ಮತ್ತು ದೆವ್ವಗಳ ಪಂಕ್ತಿ ಇವುಗಳೊಳಗೆ ಒಂದರಲ್ಲಿಯೇ ಹೊರತು ಎರಡರಲ್ಲಿಯೂ ಊಟಮಾಡಲಾರಿರಿ, [22]ಕರ್ತನನ್ನು ರೇಗಿಸಬೇಕೆಂದಿದ್ದೇವೋ? ಆತನಿಗಿಂತಲೂ ನಾವು ಬಲಿಷ್ಠರೇನು?**

10:1-13ರಲ್ಲಿ ಪೌಲನು ನೀಡುವ ಕಾರಣಗಳು 8:1ರಲ್ಲಿ ಪ್ರಾರಂಭವಾದ ಚರ್ಚೆಯನ್ನು ಮುಕ್ತಾಯ ಮಾಡುತ್ತವೆ. ಇದು ವಿಗ್ರಹಗಳಿಗೆ ಅರ್ಪಿಸಿದ ಮಾಂಸದ ವಿಷಯವಾಗಿ ಅವನು ಓಡಿಹೋಗಿರಿ ಎಂದು ಹೇಳುತ್ತಿಲ್ಲ, ಆದರೆ ವಿಗ್ರಹಾರಧನೆಯಿಂದ (10:14). ಪೌಲನು ಅನೇಕಾವರ್ತಿ ತನ್ನ ಓದುಗರನ್ನು "ಸಹೋದರೇ" ಎಂದು ಸಂಭೋಧಿಸುತ್ತಾನೆ, 10:14ಬದಲ್ಲಿ ಅವನು ಹೆಚ್ಚು ಒಲುಮೆಯ ವ್ಯಾಕ್ಯಾಂಗ "ನನ್ನ ಪ್ರಿಯರೇ" ಉಪಯೋಗಿಸುತ್ತಾನೆ. ಅವನ ಉದ್ದೇಶ ಬಯ್ಯಬೇಕು ಎಂಬುದಾಗಿ ಅಲ್ಲ, ಆದರೆ ಸಹ ಕ್ರೈಸ್ತರಿಗೆ ಮಾರ್ಗದರ್ಶನ ನೀಡುವದು ಮತ್ತು ಅವರನ್ನು ಎಚ್ಚರಿಸುವದಾಗಿದೆ.

**ವಚನ 14.** ಇಸ್ರಾಯೇಲರ ಉದಾಹರಣೆಯನ್ನು ಅವರ ಮುಂದೆ ಇಡುವದರೊಂದಿಗೆ, ಸಭೆಯಲ್ಲಿರುವವು ಸಭೆಯಲ್ಲಿರುವವರು ವಿಗ್ರಹಾರಾಧನೆಯೊಂದಿಗೆ ಏನನ್ನೂ ಬಯಸುತ್ತಿದ್ದಿಲ್ಲ. ವಿಗ್ರಹಗಳಿಗೆ ಅರ್ಪಿಸಿದ ಮಾಂಸವನ್ನು ತಿನ್ನುವದು ಪಾಪದಲ್ಲಿ ಸಿಲುಕಿಕೊಂಡ ಹಾಗೆ, ವಿಗ್ರಹಗಳಿಗೆ ಅರ್ಪಿಸದ್ದನ್ನು ತಿನ್ನುವದು ಸಹಿಸಲಸಾಧ್ಯವಾಗಿದೆ. ಕ್ರಿಸ್ತನ ಹಿಂಬಾಲಕರು ತಮ್ಮನ್ನು ತಾವು ವಿಗ್ರಹಾರಾಧನೆಗೆ ಹೋಲಿಕೆಯಾಗಿರುವ ಯಾವುದೇ ಆಗಿರಲಿ ಎಚ್ಚರಿಕೆಯಾಗಿರಬೇಕು (ನೋಡಿರಿ 1 ಯೋಹಾನ 5:21). ಪೌಲನು 1 ಕೊರಿಂಥ 8ರಲ್ಲಿ ಒಬ್ಬನೇ ದೇವರು ಇದ್ದಾನೆ ಎಂಬ ಮೂಲ ಸತ್ಯಕ್ಕೆ ಈಗಾಗಲೇ ಒತ್ತುನೀಡಿದ್ದಾನೆ (ಮತ್ತು ಅವನು 10:23-30ರಲ್ಲಿ ತಿರುಗಿ ಒತ್ತುನೀಡಲಿಕ್ಕಿದ್ದಾನೆ). ದೇವರು ತನ್ನ ಜನರು ತನ್ನನ್ನೊಬ್ಬನನ್ನೇ ಆರಾಧಿಸಬೇಕು ಎಂದು ಬಯಸುತ್ತಾನೆ. ವಿಗ್ರಹಗಳಿಗೆ ಸಲ್ಲಿಸಬಹುದಾದ ಯಾವುದೇ ಸೇವೆ ದೇವರಿಗೆ ಬೆನ್ನು ತಿರುಗಿಸಿದ ಹಾಗಾಗುತ್ತದೆ.

**ಆದುದರಿಂದ** ಬಲವಾದ ಜೋಡಿಸುವ ಪದವು ಇದನ್ನು ಅನುವಾದಿಸುತ್ತದೆ. ಇದು ಪೌಲನು ತಾನು ನೀಡಿದ ವಿವೇಚನೆಯ ಆಧಾರದ ಮೇಲೆ ನಿರ್ಧಾರಕ್ಕೆ ಬರುತ್ತಿದ್ದಾನೆ ಎಂಬುದನ್ನು ಸೂಚಿಸುತ್ತದೆ. ಪದದ ಅರ್ಥವನ್ನು "ಹಾಗಿದ್ದಲ್ಲಿ ಎಲ್ಲಾ ರೀತಿಯಿಂದ" (διόπερ, *dioper*) ಎಂಬ ಪದದಿಂದ ಉತ್ತಮವಾಗಿ ಸೆರೆಹಿಡಿಯಬಹುದು. ಕೊರಿಂಥದಲ್ಲಿರುವ ಜ್ಞಾನಿಗಳು ತಮ್ಮ ಪ್ರಭಾವವನ್ನು ದೃಷ್ಟಿಯಲ್ಲಿಟ್ಟುಕೊಂಡು ತಮ್ಮ ಕೆಲವು ಅಭ್ಯಾಸಗಳನ್ನು ಮೌಲ್ಯಮಾಪನ ಮಾಡಬೇಕು. ವಿಗ್ರಹಾರಾಧನೆಗೆ ಸಂಬಂಧಿಸಿದಂತೆ, ಪೌಲನ ತೀರ್ಪು ನೀಡಲಾಗಿದೆ: **ನನ್ನ ಪ್ರಿಯರೇ, ವಿಗ್ರಹಾರಾಧನೆಯನ್ನು ತೊರೆದುಬಿಡಿರಿ.** ಅರಣ್ಯದಲ್ಲಿ ಅಲೆದಾಡುತ್ತಿರುವದರಿಂದ ಹಿಡಿದು ಕಾನಾನಿನ ಫಲವತ್ತತೆಯ ದೇವರುಗಳವರೆಗೆ, ಇಸ್ರಾಯೇಲ್ಯರಿಗೆ ವಿಗ್ರಹಗಳು

ನಿರಂತರವಾದ ಸಮಸ್ಯೆಯಾಗಿದ್ದವು. ದೇವರು ತನ್ನ ಮಹಿಮೆಯನ್ನು ವಿಗ್ರಹಗಳೊಂದಿಗೆ ಹಂಚಿಕೊಳ್ಳುವದಿಲ್ಲ. ಸಂಧಾನದ ಪ್ರಶ್ನೆಯೇ ಇಲ್ಲ. ವಿಗ್ರಹಗಳು ಶಕ್ತಿಹೀನವಾಗಿ ತಮ್ಮ ಸ್ಥಳದಲ್ಲಿ ಕುಳಿತಿರುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ ಕೀರ್ತನೆಗಾರನು ಬರೆಯುತ್ತಾನೆ, ಯೆಹೋವನು ಭೂಮಿಯಲ್ಲಿಯೂ ಆಕಾಶದಲ್ಲಿಯೂ ಸಮುದ್ರಗಳಲ್ಲಿಯೂ ಬೇರೆ ಎಲ್ಲಾ ಜಲರಾಶಿಗಳಲ್ಲಿಯೂ ತನಗೆ ಬೇಕಾದದ್ದನ್ನು ಮಾಡುತ್ತಾನೆ (ಕೀರ್ತನೆ 135:6). ವಿಗ್ರಹಾರಾಧನೆಯನ್ನು ತೊರೆದುಬಿಡುವದು ತನ್ನ ಓದುಗರಿಗೆ ಪೌಲನು ನೀಡುವ ಮೊದಲನೆಯ ಆದ್ಯತೆಯಾಗಿದೆ.

**ವಚನ 15.** ಜ್ಞಾನಿಯಾದ ಬೋಧಕನಾಗಿ, ಪೌಲನು ತನ್ನ ಓದುಗರಿಗೆ ತಮ್ಮಷ್ಟಕ್ಕೆ ವಿಷಯದ ಕುರಿತಾಗಿ ಯೋಚಿಸಬೇಕು ಎಂದು ಹೇಳುತ್ತಿದ್ದಾನೆ. **ನಾನು ಹೇಳಿದ್ದನ್ನು ನೀವು ತೀರ್ಮಾನ ಮಾಡಿಕೊಳ್ಳಿರಿ**, ಅವನು ಸವಾಲನ್ನು ನೀಡುತ್ತಾನೆ. ಕೊರಿಂಥದ ಜನರು ಗ್ರಹಿಸಿಕೊಳ್ಳುವ ಜನರು ಎಂದು ಒಪ್ಪಿಕೊಳ್ಳುತ್ತಾನೆ ಆದರೆ ಅವನು ಆಯ್ಕೆ ಮಾಡಿದ ಪದಗಳಲ್ಲಿ ಹಾಸ್ಯದ ಚುಟುಕು ಅಡಕವಾಗಿದೆ. ಅವನು ಅವರನ್ನು **ಜ್ಞಾನಿಗಳು** ಎಂದು ಸಂಬೋಧಿಸುತ್ತಾನೆ (φρόνιμοι, *phronimoi*; "sensible people"; NRSV; ESV). ಅವನ ಪತ್ರದಲ್ಲಿ[7] ಈ ಪದವು ಕೇವಲ ಇನ್ನೂ ಇತರ ನಾಲ್ಕು ಸಂದರ್ಭದಲ್ಲಿ ಕಂಡುಬರುತ್ತದೆ. ಪ್ರತಿಯೊಂದು ಸಂದರ್ಭದಲ್ಲಿ ಪೌಲನು ಈ ಪದವನ್ನು ಸ್ವಲ್ಪ ಹಾಸ್ಯದೊಂದಿಗೆ ಉಪಯೋಗಿಸುತ್ತಾನೆ. ಸ್ವ-ಪ್ರಕಟಿಸಿದ ಜ್ಞಾನಿ ಎಂಬ ಪದವು ಯಾವಾಗಲೂ ಪ್ರಾಯೋಗಿಕವಲ್ಲ. "ಜ್ಞಾನಿ" (σοφός, *sophos*) ಎಂದು ಅನುವಾದಿಸಿದ ಪದವು ಹೆಚ್ಚು ಸಾಮಾನ್ಯವಾಗಿ ಅವನ ಪತ್ರದಲ್ಲಿ ಹದಿನಾಲ್ಕು ಬಾರಿ ಕಾಣಿಸಿಕೊಂಡಿದೆ (ಒಂಬತ್ತು ಸಾರಿ 1 ಕೊರಿಂಥದಲ್ಲಿ), ಕೆಲವೊಮ್ಮೆ ಸಕಾರಾತ್ಮಕವಾದ ಅರ್ಥದಲ್ಲಿ ಮತ್ತು ಕೆಲವೊಮ್ಮೆ ಇಲ್ಲ.

ಪೌಲನು ತನ್ನ ಪತ್ರವು ಕೊರಿಂಥ ಸಭೆಯ ಎದುರಿನಲ್ಲಿ ಓದಲ್ಪಡುವಾಗ ತನ್ನ ಓದುಗರು ಗ್ರಹಿಸಿರುವದನ್ನು ಉಪಯೋಗಿಸುತ್ತಾರೆ ಎಂದು ವಿಶ್ವಾಸಿಸುತ್ತಾನೆ. ಅಲ್ಲಿ ಪ್ರತಿಯೊಬ್ಬ ಕ್ರೈಸ್ತರು ವಿಗ್ರಹಗಳಿಗೆ ಅರ್ಪಿಸಿದ ನೈವೇದ್ಯದಿಂದ ಆಕರ್ಷಿತರಾಗಿರಲಿಲ್ಲ. ಬಡ ಕೆಲಸಗಾಗರು ಅಥವಾ ಗುಲಾಮರು ಈ ಊಟವನ್ನು ಬಡಿಸುತ್ತಿದ್ದರು, ಆದರೆ ಅವರು ದೇವಾಲಯದ ಭೋಜನ ಕೊಠಡಿಗಳಲ್ಲಿ ಕೂತುಕೊಳ್ಳುತ್ತಿರಲಿಲ್ಲ ಮತ್ತು ವಿಗ್ರಹಾರಾಧಕರ ಆಚಾರದಲ್ಲಿ ಭಾಗಿಗಳಾಗುತ್ತಿರಲಿಲ್ಲ. ಇದು ಸಮೃದ್ಧಿಯ ಸಂಪ್ರದಾಯವಾಗಿತ್ತು. ಶ್ರೀಮಂತರ ಮತ್ತು ಕೊರಿಂಥದಲ್ಲಿ ಅವಶ್ಯಕತೆಯಿರುವವರನ್ನು ಅಲಕ್ಷಿಸಬಾರದು ಎಂಬುದರ ಮಧ್ಯದಲ್ಲಿ ಇರುವ ಸಾಮಾಜಿಕ ವಿಭಾಗಗಳು. ಸಭೆಯಲ್ಲಿ ಹೆಚ್ಚು ಸಮೃದ್ಧಿಯಲ್ಲಿರುವ ಜನರು ಹೆಚ್ಚಾಗಿ ಯೆಹೂದಿ ಹಿನ್ನೆಲೆಯಲ್ಲಿರುವವರೊಂದಿಗೆ ವ್ಯಾಪಾರವನ್ನು ಮಾಡುತ್ತಿದ್ದರು, ಪೌಲನು "ನಮ್ಮ ಪಿತೃಗಳು" (10:1) ಎಂದು ಉಲ್ಲೇಖಿಸುತ್ತಿರುವ ಹಾಗೆ ಇದನ್ನು ಸೂಚಿಸುತ್ತಿರಬಹುದು.

**ವಚನ 16.** ಅಪೊಸ್ತಲನು ಅಧ್ಯಾಯ 8ರಲ್ಲಿ ಪ್ರಾರಂಭವಾದ ವಿಗ್ರಹಗಳ ಔತಣದಲ್ಲಿ ಪಾಲು ತೆಗೆದುಕೊಳ್ಳುವದರ ಕುರಿತಾದ ಚರ್ಚೆಗೆ ಮರಳುತ್ತಾನೆ. ಕೇವಲ ವಿಗ್ರಹಗಳಿಗೆ ಅರ್ಪಿತವಾದ ಮಾಂಸವನ್ನು ತಿನ್ನುವದು ದೇವರ ವಿರುದ್ಧವಾಗಿ ಯಾವ ಅಪರಾಧವನ್ನು ಒಳಗೊಂಡಿರುವದಿಲ್ಲ (ನೋಡಿರಿ 8:8; 10:25); ಆದರೆ ವಿಗ್ರಹಗಳಿಗೆ ಅರ್ಪಿತವಾದ

ಮಾಂಸವನ್ನು ವಿಗ್ರಹಗಳ ಆಲಯದಲ್ಲಿ ದೇವರುಗಳಿಗೆ ಅರ್ಪಿಸಿದ ಪ್ರಾರ್ಥನೆ ಮತ್ತು ಯಾಗಗಳೊಂದಿಗೆ ತಿನ್ನುವದು, ಆ ದೇವರನ್ನು ಆರಾಧಿಸಿದ ಹಾಗೆ ಆಗುತ್ತದೆ. ಕೆಲವು ಕ್ರೈಸ್ತರು, ವಿಗ್ರಹಗಳು ಏನೂ ಅಲ್ಲ ಎಂದು ತಿಳಿದಿರುತ್ತಾರೆ, ತಾವು ವಿಗ್ರಹಾರಾಧನೆಯ ಭೋಜನದಲ್ಲಿ ಪಾಲು ತೆಗೆದುಕೊಳ್ಳುವದರಿಂದ ಅಭ್ಯಂತರವಿಲ್ಲ ಎಂದು ನಿರ್ಧರಿಸುತ್ತಾರೆ. ಪೌಲನು ವಿಗ್ರಹಾರಾಧನೆಯ ಯಾವುದೇ ಸಂಪ್ರದಾಯಗಳಲ್ಲಿ ತೊಡಗಿಸಿಕೊಳ್ಳುವದನ್ನು ಅಷ್ಟು ಸುಲುಭವಾಗಿ ಬಿಟ್ಟುಬಿಡಲು ಆಗುವದಿಲ್ಲ. ಅವನು ಕ್ರೈಸ್ತರು ಕರ್ತನ ಭೋಜನದಲ್ಲಿ ಪಾಲುತೆಗೆದುಕೊಳ್ಳುವಾಗ ಹಂಚಿಕೊಳ್ಳುವ ಮೇಜಿನೆಡೆಗೆ ಅವರ ಗಮನವನ್ನು ಸೆಳೆಯುತ್ತಾನೆ. **ಆಶೀರ್ವಾದದ ಪಾತ್ರೆಯಲ್ಲಿ** ಪಾಲು ತೆಗೆದುಕೊಳ್ಳುವಾಗ **ಕ್ರಿಸ್ತನ ರಕ್ತದಲ್ಲಿ** ಪಾಲು ತೆಗೆದುಕೊಂಡ ಹಾಗೆ ಮತ್ತು **ರೊಟ್ಟಿಯನ್ನು** ಮುರಿಯುವದರಲ್ಲಿ ಭಾಗತೆಗೆದುಕೊಳ್ಳುವಾಗ ಕ್ರಿಸ್ತನ **ದೇಹವನ್ನು** ಜ್ಞಾಪಕ ಮಾಡಿಕೊಂಡ ಹಾಗೆ ಎಂದು ಹೇಳುತ್ತಾನೆ (ನೋಡಿರಿ 11:24, 25).

**ಹಂಚಿಕೊಳ್ಳುವಾಗ** ("ಭಾಗವಹಿಸುವದು"; NIV), ಪೌಲನು ಸಹಜವಾಗಿ ಕ್ರೈಸ್ತರು ಅರ್ಥೈಸಿಕೊಳ್ಳಲು ಬಯಸುತ್ತಾನೆ (1) ಕ್ರಿಸ್ತನ ನೀಡಿದ ಆಶೀರ್ವಾದದಲ್ಲಿ ಭಾಗಿಗಳಾಗುವದು. (2) ಆತನ ದೈವತ್ವದಲ್ಲಿ ತಮ್ಮ ನಂಬಿಕೆಯನ್ನು ಅರಿಕೆಮಾಡುವದು ಮತ್ತು ಕ್ರೂಜೆಯ ಮೇಲೆ ಆತನ ಮರಣದ ಪರಿಣಾಮ (3) ಕ್ರಿಸ್ತನ ದೇಹದ ಸಹೋದರ ಮತ್ತು ಸಹೋದರಿಯರೊಂದಿಗೆ ಒಂದೇ ರೀತಿಯ ಅರಿಕೆಯನ್ನು ದೃಢಪಡಿಸುವದು. ಇದು ಸತ್ಯವಾಗಿರುವದರಿಂದ ವಿಗ್ರಹಗಳ ಆಲಯದ ಮೇಜಿನಲ್ಲಿ ಭಾಗವಹಿಸುವದು ಊಟಮಾಡುವದಕ್ಕಿಂತ ಹೆಚ್ಚಾದದ್ದನ್ನು ಒಳಗೊಂಡಿದೆ ಎಂಬ ಅರ್ಥವನ್ನು ನೀಡುತ್ತದಲ್ಲವೇ? ಪೌಲನು ಇಂಥಹ ಬಲವಾದ ಹೇಳಿಕೆಯನ್ನು ವಿಗ್ರಹಗಳ ಆಲಯದಲ್ಲಿ ಊಟಮಾಡುವದರ ವಿರುದ್ಧವಾಗಿ ಹೇಳಿರುವದರಲ್ಲಿ ಆಶ್ಚರ್ಯವೇನಿಲ್ಲ (8:10-13)!

ರೊಟ್ಟಿಗಿಂತ ಪೂರ್ವದಲ್ಲಿ ಪಾತ್ರೆಯ ವಿಷಯದಲ್ಲಿ ಉಲ್ಲೇಖಿಸಿರುವದು ಏನಾದರು ವೈಶಿಷ್ಟತೆಯನ್ನು ಹೊಂದಿದೆಯೋ? ಬಹುಶಃ ಇಲ್ಲ, ಆದರೆ ಪೌಲನು ಕ್ರಿಸ್ತನು ಪಾಪಗಳ ಪರಿಹಾರಕ್ಕಾಗಿ ತನ್ನ ರಕ್ತವನ್ನು ಸುರಿಸಿದ್ದರ ಕುರಿತು ಪ್ರಾಮುಖ್ಯವಾಗಿ ಯೋಚಿಸುತ್ತಿದ್ದಾನೆ ಎಂಬುದು ಅಸಾಧ್ಯವಾಗಿದೆ. ರಕ್ತದ ಕಲ್ಪನೆ ಶೋಭಾಯಮಾನವಾಗಿದೆ, ಮತ್ತು ಪಶುಗಳ ಯಜ್ಞವು ಬಹಳ ಮಟ್ಟಿಗೆ ಅಪೊಸ್ತಲನು ಮುರಿದ ದೇಹವನ್ನು ಜ್ಞಾಪಿಸಿಕೊಳ್ಳುವ ಪೂರ್ವದಲ್ಲಿ ಪಾತ್ರೆಯನ್ನು ಮನಸ್ಸಿನಲ್ಲಿ ತಂದಿರಬಹುದು. 11:23-26ರಲ್ಲಿ ಕರ್ತನ ಭೋಜನದ ಕುರಿತು ಪೌಲನ ವಿಮರ್ಶೆ ಮತ್ತಾಯ 26:26-35ರಲ್ಲಿ ಅಥವಾ ಮಾರ್ಕ 14:17-25ರಲ್ಲಿ ಕೊಟ್ಟಿರುವ ಹೇಳಿಕೆಗಿಂತ ಲೂಕ 22:14-20ರಲ್ಲಿ ಕೊಟ್ಟಿರುವ ಹೇಳಿಕೆಗೆ ಸಮೀಪವಾಗಿದೆ. ಭೋಜನದ ಸಂಸ್ಕಾರದಲ್ಲಿ ಲೂಕನ ದಾಖಲೆಯಲ್ಲಿ, ಯೇಸು ಮೊದಲು ಪಾತ್ರೆಯ ವಿಷಯದಲ್ಲಿ ಮಾತನಾಡುತ್ತಾನೆ (ಲೂಕ 22:17-19). ಆದಾಗ್ಯೂ, ಅಪೊಸ್ತಲನು ಆಚರಣೆಯ ಸಂಗತಿಯನ್ನು ಸಂಪೂರ್ಣವಾಗಿ ಯೋಚಿಸುತ್ತಿದ್ದಾನೆ; ಅವನು ರೊಟ್ಟಿ ಮತ್ತು ಪಾತ್ರೆಯ ಕ್ರಮದ ಕುರಿತು ಹೇಳಿದ ಕ್ರಮವು ಬಹಳ ಮಟ್ಟಿಗೆ ವಿಶಿಷ್ಟವಾಗಿಲ್ಲ.

**ವಚನ 17.** ಕರ್ತನ ಭೋಜನದಲ್ಲಿ ಭಾಗತೆಗೆದುಕೊಳ್ಳುವದು ವಿಶ್ವಾಸಿಗಳನ್ನು ಪರಸ್ಪರರೊಂದಿಗೆ ಕರ್ತನಲ್ಲಿ ಐಕ್ಯತೆಗೆ ತರುತ್ತದೆ. **ಒಂದೇ ರೊಟ್ಟಿ ಇರುವದರಿಂದ, ಅನೇಕರಾದ ನಾವು ಒಂದೇ ದೇಹವಾಗುತ್ತೇವೆ; ಯಾಕಂದರೆ ನಾವು ಒಂದೇ ರೊಟ್ಟಿಯಲ್ಲಿ**

**ಪಾಲು ತೆಗೆದುಕೊಳ್ಳುತ್ತೇವೆ.** ತರ್ಕಬದ್ದವಾಗಿ, ಭೋಜನದಲ್ಲಿ ಪಾಲುತೆಗೆದುಕೊಳ್ಳುವದು ವಿಗ್ರಹಾರಾಧನೆಗೆ ಸಂಬಂಧಿಸಿದೆಯಲ್ಲವೆ ಅಲ್ಲದೇ ಭಾಗವಹಿಸುವವರನ್ನು ಪರಸ್ಪರ ಮತ್ತು ವಿಗ್ರಹಗಳೊಂದಿಗೆ ಐಕ್ಯವಾಗಿಸುತ್ತದಲ್ಲವೇ?

ಇದನ್ನು ನೀಡುವಾಗ ಪೌಲನು ಸಭೆಗೆ ಕರ್ತನ ಭೋಜನದ ವೈಶಿಷ್ಟತೆಯ ಅಂತರಜ್ಞಾನವನ್ನು ನೀಡುತ್ತಾನಲ್ಲವೆ. ರೊಟ್ಟಿ ಮತ್ತು ಪಾತ್ರೆ ಜ್ಞಾಪಕಾರ್ಥಕ್ಕಾಗಿ, ಆದರೆ ಭೋಜನವು ಎಂದಿಗೂ ಅಲ್ಲ. ಅದು ಅನ್ಯೋನ್ಯತೆ ಮತ್ತು ಸಹಭೋಗವಾಗಿದೆ. ಕೂಡಿ ಬಂದ ಸಭೆಯು ರೊಟ್ಟಿಯನ್ನು ಮುರಿಯುತ್ತದೆ ಮತ್ತು ಪಾತ್ರೆಯಲ್ಲಿ ಕುಡಿಯುತ್ತದೆ. ವಯಕ್ತಿಕವಾಗಿ ಭಾಗಿಯಾಗುವ ಒಂದೇ ನಂಬಿಕೆಯನ್ನು ಅರಿಕೆಮಾಡುವವರು ಜೀವಕರವಾದ ರೊಟ್ಟಿಯಲ್ಲಿ ಹಂಚಿಕೊಳ್ಳುವರು.

ಕ್ರೈಸ್ತರು ರೊಟ್ಟಿಯನ್ನು ಮುರಿಯುವಾಗ ಮತ್ತು ಪಾತ್ರೆಯಲ್ಲಿ ಪಾನಮಾಡುವಾಗ ತಮ್ಮನ್ನೇ ತಾವು ತಮ್ಮ ಜನ್ಮಸಿದ್ಧ ಹಕ್ಕನ್ನು ಕೇವಲ ಸಂಪ್ರದಾಯ ಮತ್ತು ಆಚರಣೆಗಾಗಿ ಕಸಿದುಕೊಳ್ಳುತ್ತಾರೆ. ಯಾರು ಕರ್ತನ ದಿನದಲ್ಲಿ ಸಭೆಯಾಗಿ ಕೂಡಿ ಬರುವದಿಲ್ಲವೋ ಅವರು ಶೋಚನೀಯವಾಗಿ ಆತ್ಮೀಕ ನಷ್ಟವನ್ನು ಅನುಭವಿಸುತ್ತಾರೆ. ಕೂಡಿ ಬಂದಂಥ ಜನರಿಗೆ ಭೋಜನವು ಪ್ರಾಮುಖ್ಯ ಸಂಗತಿಯಾಗಿರುವಾಗ, ದೇಹದಿಂದ ಪ್ರತ್ಯೇಕಿಸಿ ರೊಟ್ಟಿಯು ಮುರಿಯಲ್ಪಡುವಾಗ ಅದರ ಅರ್ಥವು ಮೂಲತಃ ಬದಲಾಗುತ್ತದೆ.

**ವಚನ 18.** NASBಯ ಅನುವಾದಕರು Ἰσραὴλ κατὰ σάρκα (*Israēl kata sarka* literally, “Israel according to the flesh”) ಎಂದು ತಿಳಿದುಕೊಂಡಿದ್ದಾರೆ. **ಇಸ್ರಾಯೇಲ ಜನಾಂಗವನ್ನು** ಅರ್ಥೈಸುವದಕ್ಕಾಗಿ. ಒಂದುವೇಳೆ ಅದು ಸರಿಯಾಗಿದ್ದಲ್ಲಿ, ಪೌಲನು ಕ್ರಿಸ್ತನ ದೇಹವಾದ, ದೈಹೀಕ, ಐತಿಹಾಸಿಕ ಇಸ್ರಾಯೇಲ ಮತ್ತು ಆತ್ಮೀಕ ಇಸ್ರಾಯೇಲಿನ ಮಧ್ಯದಲ್ಲಿ ವ್ಯತ್ಯಾಸವನ್ನು ತೋರಿಸುತ್ತಿದ್ದಾನೆ, ಮೋಶೆಯ ಧರ್ಮಶಾಸ್ತ್ರದ ಅಡಿಯಲ್ಲಿ ಜೀವಿಸಿದ ಯಾಜಕರು ಯಜ್ಞಕ್ಕೆ ಅರ್ಪಿಸಿದ್ದನ್ನು ತಿನ್ನುತ್ತಿದ್ದರು ಆದುದರಿಂದ ಅವರು ವೇದಿಯನ್ನು ಹಂಚಿಕೊಳ್ಳುತ್ತಿದ್ದರು. ಕೊರಿಂಥದ ಸಭೆಯಲ್ಲಿರುವ ಮತ್ತು ಎಲ್ಲಾ ಕಡೆಯಲ್ಲಿ ಇರುವ, ಆತ್ಮೀಕ ಇಸ್ರಾಯೇಲರಿಗೆ ಇಂಥಹ ಭೌತಿಕ ವೇದಿಗಳಿರಲಿಲ್ಲ; ಆದರೆ ಪೌಲನು ವಿಶೇಷವಾಗಿ ಯೆಹೂದ್ಯ ಜನಾಂಗೀಯ ಮೂಲವನ್ನು ಹೊಂದಿದವರು ಕ್ರೈಸ್ತರು ಸ್ವಲ್ಪ ಮಟ್ಟಿಗೆ ರಿಯಾಯತಿಯನ್ನು ಹೊಂದಲಿ ಎಂದು ಬಯಸಿದ್ದನು.

Garland ಅವರು 10:1-11 ನ್ನು ತಿರುಗಿ ಉಲ್ಲೇಖಿಸುತ್ತಾರೆ ಮತ್ತು “ಶರೀರಾಧೀನ ಸ್ವಭಾವಕ್ಕೆ ಅನುಸಾರವಾಗಿ” ಎಂಬ ವಾಕ್ಯಾಂಗವನ್ನು ನಿರ್ವಹಿಸುತ್ತಾರೆ. ಇದು ಅರಣ್ಯದಲ್ಲಿ[8] ಇಸ್ರಾಯೇಲರ ವಿಗ್ರಹಾರಾಧನೆಗೆ ಸಮನಾಗಿದೆ. ಹಾಗೂ, “ವೇದಿಯಲ್ಲಿ ಹಂಚಿಕೊಳ್ಳುವವರು” ಕುರಿತಾದ ಉಲ್ಲೇಖ ಸಾಮಾನ್ಯವಾಗಿ ಯೆಹೂದ್ಯ ಧರ್ಮಕ್ಕೆ ಅನ್ವಯಿಸುತ್ತದೆ, ವಿಶಿಷ್ಟವಾಗಿ ಅರಣ್ಯದ ಅನುಭವಕ್ಕಲ್ಲ. “ಶರೀರಾಧೀನ ಸ್ವಭಾವಕ್ಕೆ ಅನುಸಾರವಾಗಿ” ಇಸ್ರಾಯೇಲರ ಆರಾಧನೆ ಮತ್ತು ವಿಗ್ರಹಾರಾಧಕರ ಆರಾಧನೆ ಎಲ್ಲಾ ವಿಧದಲ್ಲಿ ಹೋಲಿಕೆಯಾಗಿವೆ: ಎರಡಕ್ಕೂ, ವೇದಿಯ ಬಳಿಯಲ್ಲಿ ಯಜ್ಞವನ್ನು ಅರ್ಪಿಸುವ ಸೇವೆಯನ್ನು ಮಾಡುವವರು ಯಾಜಕರು ಮತ್ತು ಆರಾಧಕರು ತಿನ್ನುವ ಮಾಂಸವು ದೇವರುಗಳಿಗೆ ಅರ್ಪಿಸಿದ ಯಜ್ಞಯಾಗದೊಂದಿಗೆ ಪ್ರತ್ಯೇಕಿಸಲಾರದ ಸಂಬಂಧವನ್ನು ಹೊಂದಿತ್ತು.

**ವಚನ 19.** ವಿಗ್ರಹಗಳ ಆಲಯದಲ್ಲಿ ಅರ್ಪಿಸಿದ ಯಜ್ಞಗಳನ್ನು ಯೆರೂಸಲೇಮಿನ ದೇವಾಲಯದಲ್ಲಿ ಅರ್ಪಿಸಿದ ಯಜ್ಞಗಳಿಗೆ ಹೋಲಿಸಿದಾಗ, ಪೌಲನು ವಿಗ್ರಹಾರಾಧನೆಗೆ ಯಾವುದೇ ರೀತಿಯ ಅರ್ಹತೆಯನ್ನು ನೀಡುವದಿಲ್ಲ. ಆತನು ಬೇಗನೆ ತನ್ನ ಓದುಗರಿಗೆ ವಿಗ್ರಹಗಳಿಗೆ ಸಮರ್ಪಿಸಿದ **ವಸ್ತುಗಳನ್ನು ಕುರಿತು ಯೋಚಿಸಬೇಡಿರಿ ಅಲ್ಲದೇ ವಿಗ್ರಹವು ತಾನೇ ಏನೂ ಅಲ್ಲ** ಎಂದು ಜ್ಞಾಪಿಸುತ್ತಾನೆ (ನೋಡಿರಿ 8:4). ತಮ್ಮ ದೇವರುಗಳ ವೇದಿಯ ಬಳಿಯಲ್ಲಿ ವಿಗ್ರಹಾರಾಧಕ ಯಾಜಕರ ಅಭ್ಯಾಸ ಯೆಹೂದ್ಯ ಯಾಜಕರರೊಂದಿಗೆ ಹೊರಗಿನ ತೋರಿಕೆಯಲ್ಲಿ ಸ್ವಲ್ಪಮಟ್ಟಿಗೆ ಹೋಲಿಕೆಯನ್ನು ಹೊಂದಿತ್ತು ಆದರೆ ಯೆಹೂದ್ಯರು ಸೇವಿಸು ದೇವರ ನೈಜ್ಯತೆ ಒಟ್ಟಾರೆ ವಿಭಿನ್ನವಾಗಿತ್ತು.

**ವಚನ 20.** ಒಂದು ಅರ್ಥದಲ್ಲಿ, ವಿಗ್ರಹವೂ ಏನೂ ಅಲ್ಲ (8:4), ವಿಗ್ರಹಗಳಿಗೆ ಬಲವಿಲ್ಲದೆ ಇರುವದರಿಂದ. ಇನ್ನೂ, ಪೌಲನು ವಿಗ್ರಹಾರಾಧನೆಯು ಪೈಶಾಚಿಕವಾಗಿದೆ ಎಂದು ದೃಢಪಡಿಸುತ್ತಾನೆ. ಅವನು ವಿಗ್ರಹಗಳನ್ನು ದೆವ್ವಗಳಿಗೆ ಸಮ ಮಾಡುವದಿಲ್ಲ; ಬದಲಾಗಿ, ಲೋಕದಲ್ಲಿರುವ ಇತರರಂತೆ ದುರಾತ್ಮನ ಶಕ್ತಿ ವಿಗ್ರಹಗಳು ಸೈತಾನನಿಂದ ಪ್ರೇರೇಪಿತವಾದವುಗಳು ಎಂಬ ರೂಪಕಾಲಂಕಾರವನ್ನು ನೀಡುತ್ತಾನೆ. ಪ್ರವಾದಿಯಾದ ಚಿದ್ಕೀಯನು ಮತ್ತು ಇತರರ ಮಾತುಗಳನ್ನು ಆರೋಪಿಸಿ ಅಸತ್ಯವನ್ನಾಡುವ ಆತ್ಮನನ್ನಾಗಿ ಮಾಡಿದ ಮಿಕಾಯೇಹುವಿಗಿಂತ ಹೆಚ್ಚಿನದೇನು ಮಾಡಲಿಲ್ಲ (1 ಅರಸುಗಳು 22:22, 23). ಬಹಳ ಹಿಂದಕ್ಕೆ ಕನಿಷ್ಠ ಪ್ರಮಾಣಿತ ಗ್ರಂಥಗಳ "ಬಾರೂಕ" ನೆಂದು ಹೆಸರಾದ (c. 175 B.C.)ಯ ವಿಗ್ರಹಗಳನ್ನು ದೆವ್ವಗಳಿಗೆ ಸಂಭಂದಿಸಿದವುಗಳು, "ದೇವರುಗಳಲ್ಲ"[9] ಎಂದು ಹೇಳಲಾಗುತಿತ್ತು. ಪೌಲನ ಸಮಯದ ಸಂಪ್ರದಾಯದಲ್ಲಿ ದೆವ್ವಗಳನ್ನು ಸುಳ್ಳು ದೇವರುಗಳಿಗೆ ಜೋಡಿಸಲಾಗುತಿತ್ತು.

ವಿಗ್ರಹಗಳನ್ನು ಆರಾಧಿಸುವವರು ಎಲ್ಲಿ ದೆವ್ವಗಳ ಆಡಳಿತವಿರುತ್ತದೋ ಅಲ್ಲಿರುವ ಮೇಜಿನೊಂದಿಗೆ ಹಂಚಿಕೊಳ್ಳುತ್ತಿದ್ದರು. ಇಸ್ರಾಯೇಲರು ವಿಗ್ರಹಾರಾಧನೆಯ ಪಾಪವನ್ನು ಮಾಡುವಾಗ, ಅವರಿಗೆ ಸಹ ಇಸ್ರಾಯೇಲರ ದೇವರುಗಳನ್ನು ಹೊರತು ಪಡಿಸಿ ಇತರ ಯಾವುದೇ ದೇವರು ಸರಳವಾಗಿ ಅಸ್ತಿತ್ವ ಇಲ್ಲದವುಗಳಾಗಿದ್ದವು. "ಅವರ ವಿಗ್ರಹಗಳು . . . ಮನುಷ್ಯರ ಕೈಕೆಲಸಗಳಷ್ಟೇ," ಎಂದು ಕೀರ್ತನೆಗಾರನು ಬರೆಯುತ್ತಾನೆ (ಕೀರ್ತನೆ 115:4). ದೇವ ಜನರು ಕೇವಲ ವಿಗ್ರಹಗಳು "ತಿಳಿಯಲಾರವು, ಕಾಣಲಾರವು ಮತ್ತು . . . ಗ್ರಹಿಸಲಾರವು . . ." ಎಂದು ಹೇಳುತ್ತಾರೆ (ಯೆಶಾಯ 44:18-20). ವಿಗ್ರಹಗಳು ದೇವರನ್ನು ವಿರೋಧಿಸುವ ಕೆಡುಕನ ಬಲವಾಗಿರುವದರಿಂದ, ಪೌಲನು ನಿಜವಾಗಿ ಅಸ್ತಿತ್ವದಲ್ಲಿರುವದು ವಿಗ್ರಹ ಯಜ್ಞಗಳಲ್ಲಿ ಮತ್ತು ಆಚರಣೆಯಲ್ಲಿ ಗೌರವಿಸಲ್ಪಡುತ್ತದೆ ಎಂಬ ತೃಪ್ತಿಯನ್ನು ಹೊಂದಿದ್ದನು. ಕಲ್ಪನೆಗಳು ಕೆಡುಕನಿಗೆ ಅಧೀನವಾಗಿರುವ ವಿಗ್ರಹಾರಾಧಕರಿಗೆ ದೃಶ್ಯ ಸಾಕ್ಷಿಗಳಾಗಿದ್ದವು. Garland ಅವರ ಪ್ರಕಾರ "ಒಂದುವೇಳೆ ಮೌಲ್ಯ ವ್ಯವಸ್ಥೆಯು ದೇವರೊಂದಿಗೆ ನೇರವಾಗಿ ಸ್ಪರ್ಧಿಸುತ್ತಿದ್ದಲ್ಲಿ ವಿಗ್ರಹಗಳು ಕೇವಲ ಮೂಕ ವಸ್ತುಗಳಾಗಿದ್ದಾಗಲು ಮತ್ತು ಜೀವವಿಲ್ಲದ ವಸ್ತುವಿನಿಂದ ನಿರ್ಮಿಸಿದ್ದಾಗಲು, ಅವು ಇನ್ನೂ ನೈಜ್ಯತೆಯನ್ನು ಪ್ರತಿನಿಧಿಸುತ್ತವೆ ಎಂದು ಪೌಲನ ವಾದವು ಉಹಿಸುತ್ತದೆ."[10]

ಕ್ರೈಸ್ತರು ವಿಗ್ರಹಗಳಿಗೆ ಸಮರ್ಪಿತವಾಗಿರುವ ಆಲಯದಲ್ಲಿ ಕೂತುಕೊಳ್ಳುವಾಗ, ವಿಗ್ರಹಗಳಿಗೆ ಅರ್ಪಿತವಾದ ಆಹಾರವನ್ನು ತಿನ್ನುವಾಗ ತನ್ನ ಉಪಸ್ಥಿತಿಯನ್ನು

ಒಪ್ಪಿಕೊಳ್ಳುವದರಿಂದ ವಿಗ್ರಹಗಳ ಹೆಸರಿಗೆ ಮೊರೆಯಿಡುತ್ತಿದ್ದಲ್ಲಿ, ಆ ಮಟ್ಟದಲ್ಲಿ ಅವನು ದೆವ್ವಗಳೊಂದಿಗೆ ಸಹಭಾಗಿಯಾಗಿದ್ದಾನೆ. ಯಾವುದೇ ರೀತಿಯ ಮಾನಸಿಕ ಕಾಯ್ದಿರಿಸುವಿಕೆ ಶ್ರೇಷ್ಠವಾದ ತಿಳುವಳಿಕೆ ಅವನು ಮಾಡುತ್ತಿರುವ ಕಾರ್ಯವನ್ನು ಬದಲಾಯಿಸಲಾರದು ಎಂದು ನಿವೇದಿಸುತ್ತಿದ್ದಾನೆ. ಪೌಲನ ಮಾತುಗಳು ಖಚಿತವಾಗಿವೆ. ಅನ್ಯಜನರು ಅರ್ಪಿಸುವ ಕಾಣಿಕೆ, ಅವರು ದೆವ್ವಗಳಿಗೆ ಅರ್ಪಿಸುತ್ತಾರೆ ಮತ್ತು ದೇವರಿಗೆ ಅಲ್ಲ. ಯಾರು ಅನ್ಯಜನರ ಇಂಥಹ ಸಂಪ್ರದಾಯದಲ್ಲಿ ಪಾಲುಗಾರರಾಗುತ್ತಾರೆ. ಪೌಲನು ಸೇರಿಸುತ್ತಾನೆ, ನೀವು ದೆವ್ವಗಳಲ್ಲಿ ಪಾಲುಗಾರರಾಗುವದನ್ನು ನಾನು ಬಯಸುವಿದಲ್ಲ. ಪೌಲನಂತೆ, ವಿಗ್ರಹಾರಾಧಕ ಲೋಕದ ಜನರಿಗೆ ಸೂಚಿಸುತ್ತಾನೆ ಯಾಕಂದರೆ ಅವರು "ತಾವೇ ಮಾಡಿಕೊಂಡ ವಿಗ್ರಹಗಳನ್ನು ಬಿಟ್ಟು, ದೇವರ ಕಡೆಗೆ ತಿರುಗಲಿಲ್ಲ; ಅವರು ದೆವ್ವಗಳ ಪೂಜೆಯನ್ನೂ ಬಂಗಾರದ ಬೆಳ್ಳಿ ತಾಮ್ರ ಕಲ್ಲು ಮರ ಇವೇ ಮುಂತಾದವುಗಳಿಂದ ಮಾಡಲ್ಪಟ್ಟು, ನೋಡಲಾರದೆ ಕೇಳಲಾರದೆ ನಡೆಯಲಾರದೆ ಇರುವ ವಿಗ್ರಹಗಳ ಪೂಜೆಯನ್ನೂ ಬಿಡಲಿಲ್ಲ" (ಪ್ರಕಟನೆ 9:20).

**ವಚನ 21.** ಹೆಚ್ಚು ವಿವೇಚನೆಯ ನಂತರ, ಪೌಲನು ಒಂದು ನಿರ್ಧಾರಕ್ಕೆ ಕರೆ ನೀಡುವದರೊಂದಿಗೆ ಈ ವಿಷಯವನ್ನು ಮುಕ್ತಾಯಗೊಳಿಸುತ್ತಾನೆ: ಒಬ್ಬನು ಕರ್ತನ ಭೋಜನದ ಮೂಲಕ ಕ್ರಿಸ್ತನಲ್ಲಿ ಹಂಚಿಕೊಳ್ಳುವದು ಮತ್ತು ದೆವ್ವಗಳಿಂದ ಪ್ರೇರಿತವಾದ ಆರಾಧನೆಯಲ್ಲಿ ಹಂಚಿಕೊಳ್ಳುವದು ಎರಡರಲ್ಲಿ ಆಯ್ಕೆಯನ್ನು ಮಾಡಬೇಕು. ಈ ಆಜ್ಞೆಯು ಸ್ಪಷ್ಟ ಮತ್ತು ನಿರ್ಧಾರಯುತವಾಗಿದೆ. ಯಾವುದೇ ರೀತಿಯ ಸಂಧಾನ ಸಾಧ್ಯವಿಲ್ಲ: **ನೀವು ಕರ್ತನ ಪಾತ್ರೆಯಲ್ಲಿ ಕುಡಿಯುವದು ಮತ್ತು ದೆವ್ವಗಳ ಪಾತ್ರೆಯಲ್ಲಿ ಕುಡಿಯುವದು ಸಾಧ್ಯವಿಲ್ಲ.**

ಪೌಲ "ನಮ್ಮ ಪಿತೃಗಳಿಗೆ" ಮೇಘದ ನೆರಳಿನಲ್ಲಿದ್ದವರು (10:1) ಮತ್ತು ಇಸ್ರಾಯೇಲರು ಅರಣ್ಯದಲ್ಲಿದ್ದಾಗಿನ ಉದಾಹರಣೆಯನ್ನು (10:7-10) ನಿವೇದಿಸುತ್ತಾನೆ ಇದು ಕ್ರಿಸ್ತನಿಗೆ ಪರಿವರ್ತಿತರಾದ ಯೆಹೂದ್ಯರು ವಿಗ್ರಹಗಳ ಆಲಯದಲ್ಲಿ ಊಟಮಾಡುವದನ್ನು ಒಂದು ಆರ್ಥಿಕ ಅವಶ್ಯಕತೆಯಾಗಿದೆ ಎಂದು ವೈಚಾರಿಕವಾಗಿ ವಿವರಿಸುತ್ತಾರೆ ಯೆಹೂದ್ಯರು ಯಾವಾಗಲೂ ವಿಗ್ರಹಗಳು ಏನೂ ಅಲ್ಲ ಎಂದು ಗುರುತಿಸುತ್ತಿದ್ದರು. ಅವರು ಕ್ರೈಸ್ತರಾಗುವಾಗ, ಯಾವುದೇ ರೀತಿಯಲ್ಲಿ ಬದಲಾವಣೆಯಾಗಲಿಲ್ಲ. ಅವರು, ಜೀವನ ಮಾಡುವದಕ್ಕಾಗಿ, ಕೊರಿಂಥದಲ್ಲಿರುವ ವ್ಯಾಪಾರಿ ಕೇಂದ್ರಗಳಲ್ಲಿ ಚಟುವಟಿಕೆಯಿಂದ ಭಾಗವಹಿಸುವದು ಅವಶ್ಯವಾಗಿತ್ತು ಎಂದು ಅವರು ವಾದಿಸುತ್ತಾರೆ ಅದು ಬದಲಾಗಿ, ವ್ಯವಹಾರವು ನಡೆಯುವ ಕೇಂದ್ರದಲ್ಲಿ ಚರ್ಚಿಸಲು ಮತ್ತು ಕ್ರಿಯೆಗಳಿಗೆ ಚಾಲನೆಯನ್ನು ಸ್ಥಾಪಿಸಲು ಆಲಯದ ಭೋಜನದಲ್ಲಿ ಅವರ ಉಪಸ್ಥಿತಿಯು ಅವಶ್ಯವಾಗಿತ್ತು.

ಒಂದುವೇಳೆ ಇದು ಸತ್ಯವಾದಲ್ಲಿ ಕೊರಿಂಥದ ಸಭೆ ತನ್ನ ಸಂಖ್ಯೆಯನ್ನು ವಿವಿಧ ಸಮಾಜಿಕ ಆರ್ಥಿಕ ಸ್ಥಾನವಿರುವ ಅಡ್ಡ ವಿಭಾಗದ ಜನರಿಂದ, ಉನ್ನತ ಸ್ಥಾನದ ಜನರು ಬಹಳ ಮಟ್ಟಿಗೆ ಆರ್ಥಿಕ ಪ್ರೇರೆಪಣೆಯಿಂದ ವಿಗ್ರಹಗಳಿಗೆ ಅರ್ಪಿತವಾದ ಮಾಂಸವನ್ನು ತಿನ್ನುವದನ್ನು ಕೆಳ ಅಂತಸ್ತಿನ ಜನರೊಂದಿಗೆ ಔಪಚಾರಿಕವಾಗಿ ಮಾನ್ಯ ಮಾಡುತ್ತಿದ್ದರು. Wayne A. Meeks ಅವರು ವೀಕ್ಷಿಸುತ್ತಾರೆ,

ಹೆಚ್ಚು ಸಮೃದ್ಧಿಯಾಗಿರುವ ಜನರು, "ಬಲಿಷ್ಠರು;" ಯಾರ ವ್ಯಾಪಾರವು ಮತ್ತು

ಸಾಮಾಜಿಕ ಸಂಬಂಧಗಳು ಹರಿತವಾಗಿ ತುಂಡರಿಸುತ್ತಾವೋ ಅವರು ಒಂದುವೇಳೆ "ವಿಗ್ರಹಗಳಿಗೆ ಅರ್ಪಿತವಾದ ಮಾಂಸವನ್ನು" ನಿಷೇಧಿಸಿದ್ದಲ್ಲಿ ಅವರನ್ನು ಒತ್ತಾಯಪಡಿಸುವದರಿಂದ; ಬಡ ವರ್ಗದವರು ಸ್ವಲ್ಪ ಮಟ್ಟಿಗೆ ಪರಿಣಾಮವನ್ನು ಹೊಂದುತ್ತಾರೆ. ಅದಕ್ಕೂ ಹೆಚ್ಚಾಗಿ, ಬಡ ಜನರು ವಿರಳವಾಗಿ ಮಾಂಸವನ್ನು ತಿನ್ನುತ್ತಿದ್ದರು ಆದುದರಿಂದ ಅವರು ಈ ವಿಗ್ರಹಗಳಿಗೆ ಸಂಬಂಧಿಸಿದ ಸಂದರ್ಭ ಮತ್ತು ಸನ್ನಿವೇಶಗಳೊಂದಿಗೆ ಹೊಂದಿಕೆಯಾಗುವ ಪ್ರವೃತ್ತಿಯನ್ನು ಹೊಂದಿದ್ದರು.[11]

"ಹೆಚ್ಚು ಶ್ರೀಮಂತ" ನಾದ ಕ್ರಿಸ್ತನಂತ ಯೆಹೂದ್ಯನು (ಅ.ಕೃ. 18:8) ಮತ್ತು ಸೋಸ್ತೇನ (ಅ.ಕೃ. 18:17; 1 ಕೊರಿಂಥ 1:1) ಇವರನ್ನು ಯೆಹೂದ್ಯ ಧರ್ಮದ ಗಂಭೀರತೆಯೊಂದಿಗೆ ಹೋಲಿಸುವಾಗ ಕ್ರೈಸ್ತ ಸಂದೇಶದಲ್ಲಿ ಬಹಳ ಮಟ್ಟಿಗೆ ಕೆಲವು ವಿಷಯದಲ್ಲಿ ವಿಮೋಚನೆಯ ಸ್ವರವನ್ನು ಕಂಡುಕೊಂಡಿರಹುದು. ಆದರೆ ವಿಗ್ರಹಗಳ ಸೇವೆಯನ್ನು ಮಾಡುವ ವಿಷಯದಲ್ಲಿ ಪೌಲನ ಸ್ಥಾನವು ಹೆಚ್ಚು ಬಿಗಿಯಾಗಿದೆ ಎಂದು ಕಂಡುಕೊಂಡಿರಬಹುದು. "ಹೆಚ್ಚು ಶ್ರೀಮಂತರಾದ" ಅನ್ಯಜನರು, ಹೋಲಿಕೆಯಲ್ಲಿ, ಆಲಯದೊಂದಿಗೆ ಸಂಬಂಧವನ್ನು ವಿಷೇಧಿಸುವ ನಿವೇದನೆಯನ್ನು ಕಂಡುಕೊಂಡಿರಲಿಕ್ಕಿಲ್ಲ.

**ವಚನ 22.** ಬಹುಶಃ ಕೊರಿಂಥದವರು ದೀಕ್ಷಾಸ್ನಾನದಲ್ಲಿ ಕ್ರಿಸ್ತನನ್ನು ಧರಿಸಿದ ಪ್ರಥಮ ಪರಿವರ್ತನೆಯನ್ನು ಹೊಂದಿದ ನಂತರ ನಾಲ್ಕು ವರ್ಷಗಳು ಗತಿಸಿರಬಹುದು (ಅ.ಕೃ. 18:8).[12] ಅನ್ಯವಿಶ್ವಾಸಿಗಳು ಹಳೆ ಒಡಂಬಡಿಕೆಯಲ್ಲಿ ಶಿಕ್ಷಿತರಾಗಿರಬಹುದು. ಪಾಪಿರಸ್ ಸುರುಳಿಗಳ ಅಥವಾ ಇತರ ಬರವಣಿಗೆಯ ಸಾಧನಗಳು ಅಧಿಕ ವೆಚ್ಚದಿಂದಾಗಿ ವಿರಳವಾಗಿ ದೊರೆಯುವದರಿಂದ ಅನ್ಯ ಕ್ರೈಸ್ತರು ಇಬ್ರಿಯ ವೇದವಾಕ್ಯದಲ್ಲಿ ಪರಿಣಿತರಾಗಿದ್ದರು, ಅಥವಾ ಪ್ರಾಚೀನ ಇಸ್ರಾಯೇಲರ ವಿಚಾರಶೀಲ ಲೋಕದಲ್ಲಿ. ಯಾರ ಜನಾಂಗೀಯ ಬೇರುಗಳು ಯೆಹೂದ್ಯ ಧರ್ಮದಲ್ಲಿದ್ದವೋ ಅವರು, ಒಂದು ರೀತಿಯಲ್ಲಿ, **ಕರ್ತನಿಗೆ ಹೊಟ್ಟೆಕಿಚ್ಚನ್ನು ಎಬ್ಬಿಸುವದು** ಎಂದರೆ ಏನು ಅರ್ಥ ಎಂಬುವದನ್ನು ಉತ್ತಮವಾಗಿ ತಿಳಿದವರಾಗಿದ್ದರು.

ಈ ವಚನದಲ್ಲಿ ಪೌಲನು ತನ್ನ ಓದುಗರಿಗೆ ಹಾಕಿದ ರೂಪಕಾಲಂಕಾರದ ಪ್ರಶ್ನೆಗಳು ನಕಾರಾತ್ಮಕ ಉತ್ತರವನ್ನು ಬಯಸುತ್ತಿದ್ದವು. ಖಂಡಿತವಾಗಿ, ನಾವು "ಹೊಟ್ಟೆಕಿಚ್ಚಿನ ಕರ್ತನನ್ನು ಉತ್ತೇಜಿಸಬಾರದು" (ನೋಡಿರಿ ಧರ್ಮೋ. 32:16, 21); ಮತ್ತು, **ನಾವು ಆತನಿಗಿಂತ ಬಲವಾಗಿಲ್ಲದೇ ಇರುವಾಗಲು ಸಹ** (ನೋಡಿರಿ ಯೋಬ 37:23; ಯೆಹೆ 22:14). ಹಳೆ ಒಡಂಬಡಿಕೆಯ ಉದ್ದಕ್ಕೂ, ವಿಗ್ರಹಾರಾಧನೆಯು ದೇವರನ್ನು ಹೊಟ್ಟೆಕಿಚ್ಚಿಗೂ ಮತ್ತು ಕೋಪಕ್ಕೂ ಉತ್ತೇಜಿಸಿದ.

## ನ್ಯಾಯಬದ್ಧವಾಗಿದೆ ಮತ್ತು ಲಾಭದಾಯಕವಾಗಿದೆ (10:23-30)

**23ಎಲ್ಲಾ ಕಾರ್ಯಗಳನ್ನು ಮಾಡುವದಕ್ಕೆ ಸ್ವಾತಂತ್ರ್ಯವುಂಟು, ಆದರೆ ಎಲ್ಲವೂ ವಿಹಿತವಾಗಿರುವದಿಲ್ಲ. ಎಲ್ಲಾ ಕಾರ್ಯಗಳನ್ನು ಮಾಡುವದಕ್ಕೆ ಸ್ವಾತಂತ್ರ್ಯವುಂಟು, ಆದರೆ ಎಲ್ಲವೂ ಭಕ್ತಿಯನ್ನು ಬೆಳೆಸುವದಿಲ್ಲ. 24ಪ್ರತಿಯೊಬ್ಬನು ತನ್ನ ಹಿತವನ್ನು ಚಿಂತಿಸದೆ ಪರಹಿತವನ್ನು ಚಿಂತಿಸಲಿ. 25ಕಟುಕರ ಅಂಗಡಿಯಲ್ಲಿ ಮಾರುವಂಥದು ಏನಿದ್ದರೂ ಅದನ್ನು**

**ಮನಸ್ಸಿನಲ್ಲಿ ಸಂಶಯ ಹುಟ್ಟಿಸುವ ವಿಚಾರಣೆಮಾಡದೆ ತಿನ್ನಿರಿ. [26]ಭೂಮಿಯೂ ಅದರಲ್ಲಿರುವ ಸಮಸ್ತವೂ ಕರ್ತನದಾಗಿದೆಯಲ್ಲವೇ. [27]ಕ್ರಿಸ್ತನನ್ನು ನಂಬದವರಲ್ಲಿ ಒಬ್ಬನು ನಿಮ್ಮನ್ನು ಊಟಕ್ಕೆ ಕರೆಯುವಾಗ ಹೋಗುವದಕ್ಕೆ ನಿಮಗಿಷ್ಟವಿದ್ದರೆ ನಿಮಗೇನು ಬಡಿಸಿದರೂ ಅದನ್ನು ಮನಸ್ಸಿನಲ್ಲಿ ಸಂಶಯ ಹುಟ್ಟಿಸುವ ವಿಚಾರಣೆಮಾಡದೆ ತಿನ್ನಿರಿ. [28]ಆದರೆ ಒಬ್ಬನು ನಿಮಗೆ ಇದು ವಿಗ್ರಹಾಲಯದಲ್ಲಿ ಬಲಿಕೊಟ್ಟದ್ದು ಎಂದು ಹೇಳಿದರೆ ಈ ಸಂಗತಿಯನ್ನು ತಿಳಿಸಿದವನ ನಿಮಿತ್ತವಾಗಿಯೂ ಮನಸ್ಸಿನಲ್ಲಿ ಸಂಶಯಕ್ಕೆ ಸ್ಥಳಕೊಡಬಾರದೆಂಬ ಕಾರಣದಿಂದಲೂ ತಿನ್ನಬೇಡಿರಿ. [29]ಅದು ನಿನ್ನ ಮನಸ್ಸಿನ ಸಂಶಯವಲ್ಲ ತಿಳಿಸಿದವನ ಮನಸ್ಸಿನಲ್ಲಿರುವ ಸಂಶಯವೇ ಮತ್ತೊಬ್ಬನ ಮನಸ್ಸಿನಲ್ಲಿರುವ ಸಂಶಯದಿಂದ ನನ್ನ ಸ್ವಾತಂತ್ರ್ಯಕ್ಕೆ ಯಾಕೆ ತೀರ್ಪಾಗಬೇಕು? ನಾನು ಕೃತಜ್ಞತೆಯೊಡನೆ ಊಟಮಾಡಿ ದೇವರನ್ನು ಸ್ತುತಿಸಿದ ಮೇಲೆ ಆ ಪದಾರ್ಥಗಳ ನಿಮಿತ್ತ ನನಗೆ ಯಾಕೆ ದೂಷಣೆಯಾಗಬೇಕು?**

ಪೌಲನು ದೇವಾಲಯದ ವಿಗ್ರಹಕ್ಕೆ ಅರ್ಪಿಸಿದ ಭೋಜನದಲ್ಲಿ ಪಾಲು ತೆಗೆದುಕೊಳ್ಳುವದು ವಿಗ್ರಹಾರಾಧನೆಯಾಗಿದೆ ಮತ್ತು ಕರ್ತನಿಗೆ ಹೊಟ್ಟೆಕಿಚ್ಚನ್ನು ಹುಟ್ಟಿಸುತ್ತದೆ. ಅವನ ಪಾಪವು ಕೇವಲ ಮಾಂಸವನ್ನು ತಿನ್ನುವದರಲ್ಲಿ ಅಲ್ಲ, ಆದರೆ ಭೋಜನ ಸಂಪೂರ್ಣ ಹಿನ್ನೆಯಲ್ಲಿ ಭಾಗಿಯಾಗುವದಾಗಿದೆ ಎಂಬುದನ್ನು ತಿಳಿಸುತ್ತಾನೆ.

ಅಪೊಸ್ತಲನಿಗೆ ಎರಡನೆಯ ಕಾರಣವಿರುವದರಿಂದ ಇದನ್ನು ಬರೆದಿದ್ದಾನೆ. ಒಬ್ಬನ ನಡತೆಯು ಬಲಹೀನ ಸಹೋದರರ ನಂಬಿಕೆಯ ಮೇಲೆ ಪ್ರಭಾವಬೀರುತ್ತದೆ ಎಂಬ ಕಳಕಳಿಯನ್ನು ಹೊಂದಿದ್ದಾನೆ ಅದು ವಿಗ್ರಹಕ್ಕೆ ಅರ್ಪಿಸಿದ ಮಾಂಸವನ್ನು ಒಬ್ಬನು ಎಲ್ಲಿ ತಿನ್ನುತ್ತಾನೆ ಎಂಬುದು ಪರಿಗಣಿಸಲ್ಪಡುವದಿಲ್ಲ.

**ವಚನ 23.** ಇಲ್ಲಿ ಪ್ರಾಮುಖ್ಯವಾದ ವಚನವು **ನ್ಯಾಯಸಮ್ಮತವಾಗಿದೆ** (ἔξεστιν, *exestin*). ಕ್ರಿಸ್ತನು ತನ್ನ ಜನರಿಗೆ ಏನನ್ನು ಮಾಡಲು ಅಧಿಕಾರವನ್ನು ನೀಡಿದ್ದಾನೆ? ಕ್ರೈಸ್ತರ ಸ್ವೀಕಾರಾರ್ಹವಾದ ನಡತೆಯಾವುದು? ಪ್ರತಿಯೊಂದು ಸಂಗತಿಯನ್ನು ಸ್ವಚ್ಛವಾದ ವಿಂಗಡನೆಯಲ್ಲಿ "ಸರಿ" ಅಥವಾ "ತಪ್ಪು" ಎಂದು ಗುರುತಿಸಿ ಇಡುವದು ಎಷ್ಟು ನೆಮ್ಮದಿಯನ್ನು ತರುವ ವಿಷಯವಾಗಿದೆ, ಕ್ರೈಸ್ತ ಜೀವಿತ ಇದಕ್ಕಿಂತ ಹೆಚ್ಚು ಜಟಿಲವಾಗುತ್ತದೆ. ನೀಡಿರುವಂಥಹ ಅಭ್ಯಾಸವು ಒಂದು ಸನ್ನಿವೇಶದಲ್ಲಿ ಮುಗ್ದವಾಗಿರಬಹುದು ಮತ್ತು ಇನ್ನೊಂದರಲ್ಲಿ ಅಪರಾಧಿ ಮನೋಭಾವದಿಂದ ತುಂಬಿರಬಹುದು. ಪರಿಸ್ಥಿತಿಗಳು ಪ್ರಾಮುಖ್ಯವಾಗಿವೆ. ವಿಗ್ರಹಕ್ಕೆ ಅರ್ಪಿತವಾದ ಮಾಂಸವನ್ನು ತಿನ್ನುವದು ಸಹ ಇಂಥಹದ್ದೇ ವಿಷಯವಾಗಿದೆ.

**ಎಲ್ಲಾ ಸಂಗತಿಗಳನ್ನು ನ್ಯಾಯಸಮ್ಮತವಾಗಿವೆ** ಎನ್ನುವದು **ಎಲ್ಲಾ ಸಂಗತಿಗಳು ಲಾಭದಾಯಕವಾಗಿವೆ ಎಂದಲ್ಲ**. ತನ್ನ ಸಹೋದರರರನ್ನು ಮತ್ತು ಸಹೋದರಿಯರನ್ನು ಪ್ರೀತಿಸುವ ಕ್ರೈಸ್ತರು ತಮ್ಮ ನಡತೆಯು ಅವರ ಮೇಲೆ ಯಾವ ರೀತಿಯ ಪ್ರಭಾವವನ್ನು ಬೀರುತ್ತದೆ ಎಂಬುದನ್ನು ಪರಿಗಣಿಸುತ್ತಾರೆ. ಕೊಟ್ಟಿರುವಂತ ನಡತೆಯು ಮುಗ್ದತೆಯಾಗಿರಬಹುದು. ಆದಾಗ್ಯೂ ಅದು ಬಲಹೀನ ಮನಸಾಕ್ಷಿಯುಳ್ಳವರಿಗೆ ಬೇಸರಹುಟ್ಟಿಸಬಹುದು. ಬಲಿಷ್ಟರಾದ ಕ್ರೈಸ್ತರು ದೇವ ಜನರನ್ನು ಕಟ್ಟಲು ಬಯಸುತ್ತಾರೆ. ಆದುದರಿಂದ, ಯಾರು ಧರ್ಮಶಾಸ್ತ್ರಕ್ಕೆ ವಿಧೇಯರಾಗುತ್ತಾರೋ ಅವರಿಗೆ ಉತ್ತರಿಸುವದಕ್ಕೆ ಕೊಟ್ಟಿರುವಂಥ ನಡತೆಯು ಸರಿಯೋ ತಪ್ಪು ಎಂಬುದನ್ನು

ನಿರ್ಧರಿಸುವದಕ್ಕೆ ಇತರ ಪ್ರಶ್ನೆಗಳು ಇರುತ್ತವೆ. ನ್ಯಾಯಸಮ್ಮತವಾಗಿದೆ ಎಂದರೆ ಕ್ರಿಯೆಯನ್ನು ಸಮಂಜಸವಾಗಿಸುತ್ತದೆ ಎಂದೇನಲ್ಲ.

ಕ್ರಿಸ್ತನಲ್ಲಿ ಪರಿವರ್ತನೆ ಹೊಂದದ ನಂತರ ತಮ್ಮ ಪಾಪಮಯ ಜೀವನ ಶೈಲಿಯನ್ನು ಬಿಟ್ಟಿರುವ ಕೆಲವರು ಇನ್ನೂ ತಾವು ಹೇಗೆ ವರ್ತಿಸಬೇಕು ಎಂಬುದನ್ನು ಕಲಿಯಬೇಕು. ಅವರು ವ್ಯಭಿಚಾರ ಮತ್ತು ಕಳ್ಳತನವನ್ನು ಬಿಟ್ಟುಬಿಟ್ಟರೆ ಸಾಲದು (ನೋಡಿರಿ 6:9-11). ಯೇಸು ತನ್ನ ಹಿಂಬಾಲಕರನ್ನು ಉನ್ನತ ಮಟ್ಟದ ಜೀವಿತಕ್ಕಾಗಿ ಕರೆನೀಡಿದ್ದಾನೆ. ನ್ಯಾಯಸ್ಥಾನದ ಮೊದಲಿನ ಸನ್ನಿವೇಶದಲ್ಲಿ, ಪೌಲನು "ಅದಕ್ಕಿಂತ ಅನ್ಯಾಯವನ್ನು ಯಾಕೆ ಸಹಿಸಬಾರದು? ಆಸ್ತಿಯ ನಷ್ಟವನ್ನು ಯಾಕೆ ತಾಳಬಾರದು" (6:7) ಎಂದು ಕೇಳುತ್ತಾನೆ. ಒಬ್ಬ ಕ್ರೈಸ್ತನಿಗೆ ಹಕ್ಕುಗಳನ್ನು ಹೊಂದಿಕೊಳ್ಳುವದು ಕರ್ತನು ಸ್ಥಾಪಿಸಿದ ಉದಾಹರಣೆಯ ತಿಳುವಳಿಕೆಯ ಕೊರತೆಯನ್ನು ಪ್ರದರ್ಶಿಸುತ್ತದೆ.

ಪ್ರಶ್ನೆಯಿಂದಾಚೆಗೆ ಯಾವುದು ನ್ಯಾಯಸಮ್ಮತವಾಗಿದೆಯೋ ಅಥವಾ ನ್ಯಾಯಸಮ್ಮತವಾಗಿಲ್ಲವೋ, ಅಪೊಸ್ತಲನು ಒಬ್ಬನು ತನ್ನ ನೆರೆಯವನ ಹಿತವನ್ನು ಚಿಂತಿಸುವ ಜವಾಬ್ದಾರಿಯನ್ನು ಸೂಚಿಸುತ್ತಾನೆ. ಒಬ್ಬನು ತನ್ನ ಹಕ್ಕಗಳನ್ನು ದೃಢಪಡಿಸುವದೆಂದರೆ (ಅಥವಾ ಬಹುಶಃ ಎಂದೆಂದಿಗೂ) ಯಾವಾಗಲೂ ವಿಶ್ವಾಸಿಗೆ ಉತ್ತಮವಾದ ವಿಧವಲ್ಲ.

**ವಚನ 24.** ಕ್ರಿಸ್ತನ ಮಹಿಮೆ ಪ್ರಶ್ನೆಯಾಗುವ ಯಾವುದೇ ಸಮಯದಲ್ಲಿ, ಕ್ರೈಸ್ತರ ನಡತೆ ಇತರ ಮೇಲೆ ಪರಿಣಾಮ ಬೀರುವ ಯಾವುದೇ ಸಮಯದಲ್ಲಿ, ಪೌಲನು ಯಾರೊಬ್ಬರು **ತಮ್ಮ ಸ್ವಂತ ಒಳಿತನ್ನು ಹುಡುಕುವದು ಬೇಡ**.[13] ವಿಶ್ವಾಸಿಗಳು "ತಮ್ಮ ಸ್ವಂತ ಒಳಿತನ್ನು" ಹುಡುಕಬಾರದು ಎಂದು ಹೇಳುವಾಗ ಅವನು ಸ್ವಾರ್ಥದ ಹವ್ಯಾಸಗಳನ್ನು ತೊರೆದುಬಿಡಬೇಕು ಎಂಬುದನ್ನು ತಮ್ಮ ಸ್ವಂತ ಪಟ್ಟಿಯಲ್ಲಿ ಸೇರಿಸುವದನ್ನು ತಮ್ಮ ಓದುಗರಿಗೆ ಬಿಟ್ಟಿದ್ದಾನೆ. ಕ್ರೈಸ್ತರ ಆದ್ಯತೆಯು ತನ್ನ ಸ್ವಂತ ಲಾಭ, ಅಂತಸ್ತು ಅಥವಾ ಸೌಲಭ್ಯಗಳಲ್ಲ, ಬದಲಾಗಿ, ಅವನು ತನ್ನ ನೆರೆಹೊರೆಯವನ ಲಾಭ, ಉತ್ತಮ-ಜೀವಿತ ಮತ್ತು ಆತ್ಮೀಕ ಬೆಳವಣಿಗೆಯನ್ನು ಹುಡುಕಬೇಕು.

**ವಚನಗಳು 25, 26.** ಪೌಲನ ಪತ್ರದ ಬೇರೆ ವಿಭಾಗ ಕೊರಿಂಥದಲ್ಲಿರುವ ಕ್ರೈಸ್ತರನ್ನು ವಿವಿಧ ಬಲದಿಂದ ಸಂಬೋಧಿಸುತ್ತದೆ. ಸಭೆಯ ಉದ್ದಕ್ಕೂ ವಿಭಜನೆಗಳು ಸಾಕ್ಷಿಯಾಗಿವೆ, ಆದರೆ ಕೆಲವರು ಇತರರೊಂದಿಗೆ ಪಂಗಡದ ಉತ್ಸಾಹದಲ್ಲಿ ಸಿಲುಕಿಕೊಂಡಿದ್ದಾರೆ. ಪ್ರತಿಯೊಬ್ಬ ಸದಸ್ಯರು ಲೌಕಿಕ ನ್ಯಾಯ ಸಭೆಗೆ ತಮ್ಮ ಗಲಭೆಗಳನ್ನು ಪರಿಹರಿಸಲು ಯೋಚಿಸುತ್ತಿಲ್ಲ ಮತ್ತು ಸಹೋದರರು ಗೌರವಯುತವಾದ ಆತ್ಮೀಕ ವರಗಳಿಗೆ ಸರಿಸಮಾನವಾಗಿ ದಾಹವುಳ್ಳವರಾಗಿಲ್ಲ. ಅದರಂತೆ, ಎಲ್ಲಾ ವಿಶ್ವಾಸಿಗಳು ವಿಗ್ರಹಗಳ ಆಲಯದಲ್ಲಿ ಮಾಂಸವನ್ನು ತಿನ್ನುವದನ್ನು ಅದೇ ಆಸಕ್ತಿಯಿಂದ ಸಮರ್ಥಿಸುತ್ತಿಲ್ಲ. ಆ ವಿಷಯಕ್ಕೆ ಸಂಬಂಧಿಸಿದಂತೆ, ಮೂಲತಃ ಕ್ರೈಸ್ತರಾಗಿರುವವರು ತಮ್ಮ ವ್ಯಾಪಾರಿ ಕೇಂದ್ರಗಳಲ್ಲಿ ತಮ್ಮ ವೃತ್ತಿಯನ್ನು ಮುಂದುರೆಸಲು ಭಾಗವಹಿಸುವ ಧನವಂತರಾದ ಯೆಹೂದ್ಯರನ್ನು ಕುಶಲಕರ್ಮಿಗಳನ್ನು ಮತ್ತು ವ್ಯಾಪಾರಿಗಳನ್ನು ಬಹಳ ಮಟ್ಟಿಗೆ ಪೌಲನು ಎದುರಿಸುತ್ತಿದ್ದಾನೆ. ಪೌಲನು ಅವರ ವರ್ತನೆಯ ಕುರಿತು ಯಾವುದೇ ಟೀಕೆಯನ್ನು ನೀಡಿದ್ದಾಗ್ಯೂ ಅವರು ಕ್ರಿಸ್ತನಲ್ಲಿ ತಮ್ಮ ಪರಿವರ್ತನೆಯ ಪೂರ್ವದಲ್ಲಿ ತಮ್ಮ ಸಹ

ಯೆಹೂದ್ಯರಿಂದ ಎದುರಿಸಿದ್ದಕ್ಕಿಂತ ಕೆಟ್ಟದ್ದಾಗಿರಲಿಲ್ಲ. ಅವರು ಆತನ ವಿರೋಧವನ್ನು ಅವರು ಮಹಾದೇವಾಲಯದ ಸದಸ್ಯರಾಗಿರುವಾಗ ಇರುವ ದೃಢತೆಯನ್ನು ಅದೇ ಸಾಮರ್ಥ್ಯವನ್ನು ಉಪಯೋಗಿಸಿದರು.

ಪೌಲನಿಗೆ ಮಂಡಿಸಿದ ವಾದವು “ವಿಗ್ರಹವು ಏನೂ ಅಲ್ಲ” ಎಂಬುದರ ದೃಢೀಕೃತವಾಗಿದೆ. ಈ ಕ್ರೈಸ್ತರು ಆ ದೇವರುಗಳು ಅಸ್ತಿತ್ವದಲ್ಲಿ ಇಲ್ಲ ಎಂಬುದನ್ನು ಬಲ್ಲವರಾಗಿದ್ದದರಿಂದ, ತಾವು ವಿಗ್ರಹಗಳ ಆಲಯದಲ್ಲಿ ನಡೆಯುವ ಭೋಜನದಲ್ಲಿ ಭಾಗಿಯಾಗುವಾಗ ಅವರು ತಮ್ಮನ್ನು ತಾವು ವಿಗ್ರಹಾರಾಧನೆಯ ಅಪರಾಧಿಗಳು ಎಂದು ಪರಿಗಣಿಸಲಿಲ್ಲ. ಪೌಲನು ಗ್ರೀಕ್ ದೇವರುಗಳ ವೇದಿಯ ಮೇಲೆ ಅರ್ಪಿಸಿದ್ದು ದೇವರಿಗೆ ಸಂಬಂಧಿಸಿದ್ದಲ್ಲ ವಾದಿಸಬಾರದು ಎಂಬುದರಲ್ಲಿ ಎಚ್ಚರಿಕೆಯಾಗಿದ್ದನು. ಅವನು ದೇವರುಗಳು ಏನೂ ಅಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಿದ್ದನು. ಏನೂ ಅಲ್ಲದವುಗಳಿಗೆ ಒಬ್ಬನು ಯಜ್ಞಯಾಗಾದಿಗಳನ್ನು ಸಲ್ಲಿಸುವದು ಸಾಧ್ಯವಿಲ್ಲ; ಒಬ್ಬನು ಸ್ತುತಿಸಲು ಮತ್ತು ಭಿನ್ನಹಗಳನ್ನು ಏನೂ ಅಲ್ಲದವುಗಳಿಗೆ ಸಲ್ಲಿಸುವದು ಸಾಧ್ಯವಿಲ್ಲ. ಆದುದರಿಂದ, ಒಂದುವೇಳೆ, ಕ್ರೈಸ್ತರು ವ್ಯಾಪಾರದ ಸ್ಥಳಕ್ಕೆ ಹೋಗಿ ವಿಗ್ರಹಗಳ ವೇದಿಯಲ್ಲಿ ಅರ್ಪಿಸಿದ ಮಾಂಸವನ್ನು ಖರೀದಿಸಿದರೆ, ಅವನು ಯಾವ ಅಪರಾಧಿ ಮನೋಭಾವವಿಲ್ಲದೆ ಅದನ್ನು ತಿನ್ನಬೇಕು. ಹಾಗೂ, ವಿಗ್ರಹಗಳ ಆಲಯದಲ್ಲಿ ತಿನ್ನಬಾರದು. ಎಂದು ಪೌಲನು ಹೇಳುತ್ತಾನೆ ಈ ಅಭ್ಯಾಸವು ಒಬ್ಬ ನಂಬಿಕೆಯಲ್ಲಿ ಬಲಹೀನನಾಗಿರುವ ಕ್ರೈಸ್ತನ ಅಸಮರ್ಥತೆಯನ್ನು ಅಥವಾ ಇಚ್ಛೆಯಿಲ್ಲದಿರುವದನ್ನು ಪರಿಪೂರ್ಣ ವ್ಯತ್ಯಾಸವನ್ನು ಕಂಡುಕೊಳ್ಳದಂತೆ ಮಾಡುತ್ತದೆ.

ಅಪೊಸ್ತಲನು ಜನಾಂಗದ ಅನೇಕ ಯೆಹೂದ್ಯರಿಗಿಂತ ವಿಗ್ರಹಗಳ ವಿಷಯದಲ್ಲಿ ವ್ಯಾಖ್ಯಾನಿಸಲು ಹೆಚ್ಚು ಬಿಗಿಯಾಗಿದ್ದಾನೆ, ಆದರೆ ಅವನು ತನ್ನ ಯೆಹೂದ್ಯ ಸಹಭಾಗಿಗಳಿಗಿಂತ ಹೆಚ್ಚು ಉದಾತ್ತವಾಗಿದ್ದಾನೆ? **ಮಾಂಸದ ಮಾರುಕಟ್ಟೆಯಲ್ಲಿ ಪ್ರಶ್ನಿಸದೇ ಗಟ್ಟಿಯಾದ ಏನನ್ನಾದರೂ ತಿನ್ನುವದು** (10:25) ಮತ್ತು “. . . ವಿಗ್ರಹಗಳಿಗೆ ಅರ್ಪಿಸಿರುವ ಸಂಗತಿಗಳನ್ನು ವರ್ಜಿಸುವದು” (ಅ.ಕೃ. 15:29) ಸಾಕ್ಷಿಯಾಗಿದೆ. ಹಾಗೂ, ಯೆರೂಸಲೇಮ ಸಮಿತಿಯು ನಿಷೇಧಿಸಿರುವ ಸನ್ನಿವೇಶ ಈ ಗಲಭೆಯನ್ನು ಪರಿಹರಿಸಲು ಸಹಾಯಕವಾಗಿದೆ. ಒಂದು ವೇಳೆ ಅಂತಿಯೋಕ್ಯದಲ್ಲಿರುವ ಯೆಹೂದ್ಯ ವಿಶ್ವಾಸಿಗಳು ಒಂದೇ ಸಭೆಯವರಾಗಿದ್ದಲ್ಲಿ ಮೇಜಿನ ಅನ್ಯೋನ್ಯತೆ ಅವಶ್ಯಕತೆಯಾಗಿದೆ. ಹಿಂದಿನ ದಿನಗಳಲ್ಲಿ, ಸಮಸ್ಯೆಯಿರಲಿಲ್ಲ (ಗಲಾತ್ಯ 2:12); ಆದರೆ ಯೆರೂಸಲೇಮಿನ ಸಭೆಯ ಆಗಂತುಕರು ವಿಗ್ರಹಗಳಿಗೆ ಅರ್ಪಿಸಿದ ಮಾಂಸದ ಪ್ರಶ್ನೆಯನ್ನು ಯೆಹೂದ್ಯ ವಿಶ್ವಾಸಿಗಳ ಗಮನಕ್ಕೆ ತಂದರು. ಪೇತ್ರನು ಮತ್ತು ಇತರರು ಅಶುದ್ಧವಾದ ಆಹಾರವನ್ನು ತಿನ್ನುವದರಿಂದ ದೂರವಿರಲು ತಮ್ಮನ್ನು ತಾವು ಯೆಹೂದ್ಯರ ಮೇಜಿನ ಅನ್ಯೋನ್ಯತೆಯಿಂದ ದೂರ ಮಾಡಿಕೊಂಡರು. ಪೌಲನು ಈ ವಿಷಯದಲ್ಲಿ ಪೇತ್ರನ ವಿರೋಧವಾಗಿ ನಿಂತುಕೊಂಡನು, ಆದರೆ ಅಂತಿಯೋಕ್ಯದಲ್ಲಿರುವ ಯೆಹೂದ್ಯ ಮತ್ತು ಅನ್ಯ ಕ್ರೈಸ್ತರು ಒಂದುವೇಳೆ ಎಲ್ಲರೂ ಒಂದೇ ಮೇಜಿನ ಅನ್ಯೋನ್ಯತೆಯಲ್ಲಿ ಭಾಗಿಗಳಾಗಿದ್ದಲ್ಲಿ ವಿಗ್ರಹಗಳಿಗೆ ಅರ್ಪಿತವಾದದ್ದನ್ನು ತಿನ್ನುವದನ್ನು ದೂರವಿರಿಸುವದು ಉತ್ತಮವೆಂದು ಒಪ್ಪಿಕೊಂಡನು.

ಪೌಲನು ಯೆರೂಸಲೇಮಿನ ಸಭೆಯ ನಿಯಮವನ್ನು ಅನುಮತಿಸಿದನು (ನೋಡಿರಿ 15:30; 16:4) ಯೆಹೂದ್ಯ ಮತ್ತು ಅನ್ಯ ಕ್ರೈಸ್ತರ ಮಧ್ಯದಲ್ಲಿ ಅನ್ಯೋನ್ಯತೆಗಾಗಿ ಹೀಗೆ ಮಾಡಿದನು (ನೋಡಿರಿ ಪ್ರಕಟನೆ 2:14, 20); ಆದರೆ ಈ ವಿಷಯದ ಅನುಪಸ್ತಿತಿಯಲ್ಲಿ, ಒಂದುವೇಳೆ ಮಾಂಸವು ವಿಗ್ರಹಗಳ ವೇದಿಯ ಮೇಲೆ ಅರ್ಪಿಸಿದ್ದಾಗಿದ್ದರೂ ಅಪೊಸ್ತಲನಿಗೆ ಮಾಂಸವನ್ನು ವ್ಯಾಪಾರಸ್ಥಳಗಳಲ್ಲಿ ಕೊಂಡುಕೊಳ್ಳುವಲ್ಲಿ ಯಾವ ಸಮಸ್ಯೆಯು ಇರಲಿಲ್ಲ. ಇಲ್ಲಿ ಕೊರಿಂಥದಲ್ಲಿ ಇರುವ ಸಮಸ್ಯೆ ಯೆಹೂದ್ಯ ಮತ್ತು ಕ್ರೈಸ್ತ ವಿಶ್ವಾಸಿಗಳ ಮಧ್ಯದಲ್ಲಿರುವ ಅನ್ಯೋನ್ಯತೆಯ ಪ್ರಶ್ನೆಯಲ್ಲ; ನಂಬಿಕೆಯಲ್ಲಿ ಬಲಹೀನರಾಗಿರುವವರಿಗೆ ಬೇಸರ ಹುಟ್ಟಿಸುತ್ತದೆ.

"ವ್ಯಾಪಾರದ ಸ್ಥಳ" (μάκελλον, *makellon*) ಎಂದು ಅನುವಾದಿಸಲಾದ ಪದವು ಹೊಸ ಒಡಂಬಡಿಕೆಯಲ್ಲಿ ಒಂದೇ ಬಾರಿ ಮಾತ್ರ ಕಾಣಿಸಿಕೊಳ್ಳುತ್ತದೆ, ಆದರೆ ಅದನ್ನು ಕ್ರಿ.ಪೂ. c. 400 ರಷ್ಟು ಹಿಂದೆ ಗ್ರೀಕ ಶಿಲಾಶಾಸನಗಳಲ್ಲಿ ಕಾಣಬಹುದು ಪದದ ಲ್ಯಾಟಿನ್ ಅವತರಣಿಕೆ, *macellum* ನ್ನು ವ್ಯಾಪಾರದ ಸ್ಥಳ Lechaeumದ ಉತ್ತರಕ್ಕಿರುವ ಅಪೂರ್ಣವಾದ ಶಿಲಾಶಾಸನಕ್ಕೆ ಸಂಬಂಧಿಸಿದ ಕೊರಿಂಥದ ರಸ್ತೆಯಲ್ಲಿದೆ. ಮಾಂಸದ ಮಾರುಕಟ್ಟೆಯಲ್ಲಿ ಮಾರುವ ಹೆಚ್ಚಾದ ಮಾಂಸವು ವಿವಿಧ ದೇವತೆಗಳಿಗೆ ಅರ್ಪಿಸಿದ ಯಜ್ಞದ ಪಶುಗಳಿಂದ ಬಂದದ್ದಾಗಿರುತ್ತದೆ.[14] ಹೆಚ್ಚಾದ ಮಾಂಸವನ್ನು ಆರಾಧಕರು ಅಥವಾ ದೇವಾಲಯದ ತಿನ್ನುವದಿಲ್ಲ ಅದನ್ನು ಸಾರ್ವಜನಿಕರಿಗೆ ಮಾರಲಾಗುತ್ತದೆ. ವಿಶ್ವಾಸಿಗಳು ವಿಗ್ರಹಗಳಿಗೆ ಅರ್ಪಿತವಾದ ಮಾಂಸವನ್ನು ಕೊಂಡುಕೊಳ್ಳುವಾಗ, ಆದಾಯದ ಸ್ವಲ್ಪ ಭಾಗವು ವಿಗ್ರಹಗಳ ದೇವಾಲಯಕ್ಕೆ ವಿನಿಯೋಗಿಸಲು ಹೋಗುತ್ತದೆ. ಕೊಂಡುಕೊಳ್ಳುವ ಆರ್ಥಿಕ ವ್ಯವಸ್ಥೆಯ ಕುರಿತು ಪೌಲನಿಗೆ ಕಳಕಳಿಯಿರಲಿಲ್ಲ. ಒಬ್ಬ ವಿಶ್ವಾಸಿಯು ತನ್ನ ವ್ಯವಹಾರದ ಪ್ರತಿಯೊಂದು ಸಂಗತಿಗಳಿಗೆ ಉತ್ತರಿಸುವ ಅಗತ್ಯತೆಯಿಲ್ಲ.

ವ್ಯಾಪಾರದ ಸ್ಥಳದಲ್ಲಿ ಇಟ್ಟಿರುವ ಯಾವುದೇ ಮಾಂಸವು ದೇವರ ಸೃಷ್ಟಿಯ ಭಾಗವಾಗಿದೆ ಹೀಗಿದ್ದ ಮೇಲೆ ಅದು ಉತ್ತಮವಾಗಿದೆ. ಲೌಕಿಕ ಸಂಗತಿಗಳು ಅನುವಂಶಿಕವಾದ ಯಾವ ಕೆಡುಕನ್ನು ಹೊಂದಿರುವದಿಲ್ಲ. ಮಾಂಸದ ತುಂಡಿನ ಮೇಲೆ ಸಂಶೋಧನೆಯನ್ನು ಮಾಡುವದರಿಂದ ಯಾವನು ಪರಿಶುದ್ಧನಾಗುವದಿಲ್ಲ. **ಭೂಮಿಯು ಅದರಲ್ಲಿರುವ ಸಮಸ್ತವೂ ಕರ್ತನದು** (10:26; ನೋಡಿರಿ ಕೀರ್ತನೆ 24:1).

**ವಚನ 27.** ಪೌಲನು ನಂತರ ಎರಡನೆಯ ವಿಷಯಕ್ಕೆ ತಿರುಗುತ್ತಾನೆ. ಸಾರ್ವಜನಿಕ ಮಾರುಕಟ್ಟೆಯಲ್ಲಿ ಮಾಂಸವನ್ನು ಖರೀದಿಸುವದು **ಅವಿಶ್ವಾಸಿಯ** ಮನೆಯಲ್ಲಿ ನೀಡಿದ ಮಾಂಸವನ್ನು ತಿನ್ನುವದು ಸಹ ನಿಜ. ಪ್ರತ್ಯೇಕವಾಗಿ, ಅದು ವಿಗ್ರಹಕ್ಕೆ ಅರ್ಪಿಸಿದ ಮಾಂಸವಾಗಿದೆಯೋ ಅಲ್ಲವೋ, ಮಾಂಸವನ್ನು ತಿನ್ನುವದು ಅಶುದ್ಧವಲ್ಲ. ಪೌಲನು ಹೇಳುತ್ತಾನೆ, ನಿಮ್ಮ ಮುಂದೆ ಏನು ಇಡಲ್ಪಡುತ್ತದೆಯೋ ಅದನ್ನು ತಿನ್ನಿರಿ, ಆದರೆ ಅದನ್ನು ಯಾವ ಅಪರಾಧ ಅಥವಾ ತಪ್ಪುಮಾಡುತ್ತಿದ್ದೇವೆ ಎಂಬ ಮನೋಭಾವನೆಯಿಲ್ಲದೆ ತಿನ್ನಬೇಕು ಎಂದು ಸೂಚಿಸುತ್ತಾನೆ. ಅವನು ಗ್ರೀಕ್ ಮಾತನಾಡುವವರ ಲೋಕದಲ್ಲಿ ವಿರಕ್ತ ಎಂದು ಹೇಳುವದರ ಭಾಗವಾಗಿಲ್ಲ. ಒಬ್ಬನು ನೈತೀಕವಾಗಿ ಪಕ್ಷಪಾತವಿಲ್ಲದ ಆಹಾರಗಳು ಅಥವಾ ಚಟುವಟಿಕೆಗಳಿಂದ ದೂರವಿರುವದರಿಂದ ಪರಿಶುದ್ಧನಾಗುವದಿಲ್ಲ. ಕೇವಲ ಮಾಂಸವನ್ನು ತಿನ್ನುವ ಕ್ರಿಯೆಯಿಂದ ಒಬ್ಬ ಕ್ರೈಸ್ತನು ವಿಗ್ರಹಗಳಿಗೆ ಯಾಗವನ್ನು

ಮಾಡುವದಿಲ್ಲ.

ಇದನ್ನು ಪೌಲನು ಮತ್ತು ಅವನ ವಿರೋಧಿಗಳು ಹೆಚ್ಚಾಗಿ ಒಪ್ಪಿಕೊಳ್ಳುತ್ತಾರೆ, ವಿಗ್ರಹಾರಾಧನೆ ಮನಸ್ಸಿನ ಮತ್ತು ಹೃದಯದ ಕ್ರಿಯೆಯಾಗಿದೆ. ಅವರು ಅದರಲ್ಲಿ ವ್ಯತ್ಯಾಸವುಳ್ಳವರಾಗಿರುತ್ತಾರೆ, ಒಬ್ಬನು ವಿಗ್ರಹಗಳಿಗಾಗಿರುವ ಆರಾಧನೆಯ ಸಾರ್ವಜನಿಕ ಕ್ರಿಯೆಗಳಲ್ಲಿ ಉಪಸ್ಥಿತನಿರುವದರ ಮೂಲಕ ತೊಡಗಿಸಿಕೊಳ್ಳುವಾಗ, ಒಂದು ಹಂತದಲ್ಲಿ ವಿಗ್ರಹಾರಾಧನೆ ಮತ್ತು ವಿಗ್ರಹಾರಾಧನೆಯ ಕ್ರಿಯೆ ಅವನಲ್ಲಿ ಸೇರಿಕೊಳ್ಳುತ್ತದೆ. ಒಂದುವೇಳೆ ವಿಗ್ರಹಾರಾಧನೆ ಕೇವಲ ಮಾಂಸವನ್ನು ತಿನ್ನುವ ಯಾಂತ್ರಿಕ ಕ್ರಿಯೆಯಾಗಿರದಿದ್ದಲ್ಲಿ ಅಥವಾ ಅದು ಸಾರ್ವಜನಿಕವಾಗಿ ಪ್ರದರ್ಶಿತವಾಗುವದರಿಂದ ವರ್ಜಿಸಿರುತ್ತದೆ. ಕ್ರೈಸ್ತನು ವಿಗ್ರಹಗಳ ದೇವಾಲಯದಲ್ಲಿ ಧಾರ್ಮಿಕ ಸಂಪ್ರದಾಯಗಳಲ್ಲಿ ಭಾಗವಹಿಸಿದ್ದಲ್ಲಿ, ಅವನು ಸ್ವಂತ ಮನೆಯಲ್ಲಿ ಮಾಂಸವನ್ನು ಊಟವನ್ನು ಮಾಡುವದಕ್ಕಿಂತ ಇನ್ನೂ ಹೆಚ್ಚಾಗಿ ಮುಂದುವರೆದಿದ್ದಾನೆಂದು ಅರ್ಥ.

ಪೌಲನು ವಿಶ್ವಾಸಿಗಳ **ವಿವೇಚನಾಶಕ್ತಿಗೆ** (διὰ τὴν συνείδησιν, *dia tēn suneidēsin*) ಪ್ರಶ್ನೆಗಳನ್ನು ಕೇಳದೆ ಊಟಮಾಡಿರಿ ಎಂದು ಹೇಳುತ್ತಾನೆ. ಅವನು ಬಹಳ ಮಟ್ಟಿಗೆ ತನ್ನ ಓದುಗರಿಗೆ ಹೇಳುವದೇನಂದರೆ ಒಬ್ಬ ವಿಶ್ವಾಸಿಯು ಧೈರ್ಯವಾಗಿ, ಒಂದುವೇಳೆ ಅದು ವಿಗ್ರಹಗಳಿಗೆ ಅರ್ಪಿತವಾದ ಮಾಂಸವಾಗಿದ್ದರೂ ತಿನ್ನುವದಕ್ಕೆ ನನಗೆ ಯಾವ ಕಾರಣವೂ ಇಲ್ಲ ಎಂದು ಹೇಳಿರುವಾಗ, ಅವಿಶ್ವಾಸಿಗಳು ಮಾಂಸವನ್ನು ತಿನ್ನುವದರ ಕುರಿತಾಗಿ ನಮ್ಮನ್ನು ಹಗೆಮಾಡುತ್ತಾರೆ ಎಂಬ ಭಯ ನಮ್ಮಲ್ಲಿ ಬೇಡ.

ವಿವೇಚನಾಶಕ್ತಿಯ (συνείδησις, *suneidēsis*) ಕುರಿತು ಅಪೊಸ್ತಲರ ಕೃತ್ಯಗಳಲ್ಲಿ ಎರಡು ಸಾರಿ ಮತ್ತು ಇಪ್ಪತ್ತೊಂಬತ್ತು ಸಾರಿ ಪತ್ರಿಕೆಗಳಲ್ಲಿ ಹೇಳಲಾಗಿದೆ. 1 ಕೊರಿಂಥ 8 ಮತ್ತು 10 ನೇ ಅಧ್ಯಾಯದಲ್ಲಿ ಈ ಪದವು ಎಂಟು ಸಾರಿ ಕಾಣಿಸಿಕೊಳ್ಳುತ್ತದೆ, ಅದರಲ್ಲಿ 5 ಸಂಧರ್ಭಗಳು 10:25-29ರಲ್ಲಿ ಕಂಡುಬರುತ್ತವೆ. ಗ್ರೀಕ್ ಲೋಕದಲ್ಲಿ, ನಾಚಿಕೆ ಮತ್ತು ಗೌರವದಂತ "ವಿವೇಚನೆ" ಎಂಬ ಪದಗಳು ಇತರರ ದೃಷ್ಟಿಯಲ್ಲಿ ಒಬ್ಬನಿಗೆ ಇರುವ ಸ್ವಪ್ರತಿಷ್ಟೆಯ ಗ್ರಹಿಸುವಿಕೆಯಾಗಿದೆ. "ಉತ್ತಮವಾದ ವಿವೇಚನೆ" ಒಬ್ಬನ ನೆರೆಹೊರೆಯ ಮುಂದೆ ನಾಚಿಕೆಪಟ್ಟಿಕೊಳ್ಳಬಾರದು. ಪ್ರಥಮ ಕ್ರೈಸ್ತ ಶತಮಾನದಲ್ಲಿ "ವಿವೇಚನೆ" ಎಂಬ ಪದವು ಬೆಳವಣಿಗೆಯಲ್ಲಿರುವ ಪದವಾಗಿತ್ತು, ಮತ್ತು ಈ ಸನ್ನಿವೇಶದಲ್ಲಿ ಪೌಲನ ಈ ಪದದ ಉಪಯೋಗ ಈ ಪತ್ರದ ಕುರಿತು ಅತ್ಯಂತ ಕಠಿಣವಾದ ಅರ್ಥೈಸುವ ಪ್ರಶ್ನೆಯನ್ನು ತರುತ್ತದೆ.

**ವಚನ 28.** ಮೂರನೆಯ ವಿಷಯವು ಕ್ರೈಸ್ತರು ಅವಿಶ್ವಾಸಿಗಳ ಮನೆಯಲ್ಲಿ ಬಡಿಸಿದ ಮಾಂಸವನ್ನು ತಿನ್ನುವದರ ಕುರಿತು ಮುಂದುವರೆಸುತ್ತಾನೆ. ಪೌಲನು ಇದರ ಕುರಿತು ಅವಿಶ್ವಾಸಿಗಳ ಸಂಸ್ಕೃತಿ ಮತ್ತು ಕ್ರೈಸ್ತ ಸಮುದಾಯದ ಮಧ್ಯದಲ್ಲಿರುವ ಸಂಬಂಧ ಮೇಲೆ ವಿಪತ್ತನ್ನು ಕಲ್ಪಿಸುತ್ತಾನೆ. ಒಬ್ಬ ವಿಗ್ರಹಾರಾಧಕನು ತನ್ನ ಇತರ ಅತಿಥಿಗಳ ಮನೋರಂಜನೆಗಾಗಿ ಒಬ್ಬ ಕ್ರೈಸ್ತನನ್ನು ಅವಮಾನಿಸುವದಕ್ಕಾಗಿ ತನ್ನ ಮನೆಯಲ್ಲಿ ಔತಣಕ್ಕಾಗಿ ಕರೆಯಬಹುದು. ಒಂದುವೇಳೆ **ಯಾರೋ ಒಬ್ಬನು** ಅವನಿಗೆ **ಈ ಮಾಂಸವು ವಿಗ್ರಹಕ್ಕೆ ಅರ್ಪಿಸಿದ್ದು** ಎಂದು ಹೇಳುವಾಗ ಏನು ಮಾಡಬೇಕು ಎಂಬುದನ್ನು ಪೌಲನು ಹೇಳುತ್ತಾನೆ. ಇಲ್ಲಿ "ಯಾರಾದರು" ಎಂದರೆ 10:27ರಲ್ಲಿ ಹೇಳಿದಂತೆ ಬಹಳಮಟ್ಟಿಗೆ

ಅವನನ್ನು ಔತಣದ ಅತಿಥಿಯಾಗಿ ಕರೆದ “ಅವಿಶ್ವಾಸಿಗಳು” ಎಂದರ್ಥ.[15] ಅವಕಾಶದೊರೆತ ಸಮಯದಲ್ಲಿ, ಇತರ ಅತಿಥಿಗಳ ಉಪಸ್ಥಿತಿಯಲ್ಲಿ ಅತಿಥೇಯನು ಕ್ರೈಸ್ತನಿಗೆ, “ಇದು ವಿಗ್ರಹಕ್ಕೆ ಅರ್ಪಿಸಿದ ಮಾಂಸವಾಗಿದೆ” ಎಂದು ಹೇಳಬಹುದು.[16] ತನ್ನ ವಯಕ್ತಿಕ ಪ್ರಾಮಾಣಿಕತೆಗಾಗಿ ಮತ್ತು ತಾನು ಪ್ರತಿನಿಧಿಸುವ ನಂಬಿಕೆಗಾಗಿ, ಒಮ್ಮೆ ವಿಶ್ವಾಸಿಯು ತಾನು ವಿಗ್ರಹಗಳಿಗೆ ನೈವೇದ್ಯವಾಗಿ ಅರ್ಪಿಸಿದ ಮಾಂಸವನ್ನು ತಿನ್ನುವದಿಲ್ಲ ಎಂದು ಹೇಳಿರಬಹುದು, ಇದಕ್ಕಿಂತ ಹೆಚ್ಚಿನದೇನನ್ನು ಮಾಡಿರಲಿಕ್ಕಿಲ್ಲ.

ಇಂಥಹ ಸಂದರ್ಭದಲ್ಲಿ ಕ್ರೈಸ್ತನು ತನ್ನನ್ನು ತಾನು ಅವಮಾನಕರ ಸನ್ನಿವೇಶವನ್ನು ತಂದುಕೊಳ್ಳುತ್ತಾನೆ. ಒಮ್ಮೆ ಅವನಿಗೆ ಮಾಂಸವು ವಿಗ್ರಹಗಳಿಗೆ ಅರ್ಪಿತವಾದದ್ದು ಎಂದು ತಿಳಿದಮೇಲೆ, ಅದನ್ನು ತಿನ್ನುವದರಿಂದ ಅವನು ಇನ್ನೊಬ್ಬ ದೇವರನ್ನು ಒಪ್ಪಿಕೊಳ್ಳುತ್ತಿದ್ದಾನೆ ಎಂದು ಅರ್ಥೈಸುವ ತಂತ್ರವಾಗಿದೆ. ಪೌಲನು ಕ್ರೈಸ್ತರಿಗೆ ಒತ್ತಾಯ ಪಡಿಸಿದಂತೆ ತಮ್ಮ ಪರಿಶುದ್ಧವಾದ ಏಕದೇವರ ಆರಾಧನೆಯನ್ನು ಸಂಧಾನಮಾಡಿಕೊಳ್ಳಬಾರದು. ಅವನು ತಿರುಗಿದಲ್ಲಿ (10:28ಬ) “ವಿವೇಚನೆಯನ್ನು” ತಿರುಗಿ ತರುತ್ತಾನೆ. ಕ್ರೈಸ್ತನು “ತನಗೆ ತಿಳಿಸಿದವನಿಗಾಗಿ” ಊಟಮಾಡಬಾರದು. ವಿಶ್ವಾಸಿಯ ನಿರಾಕರಣೆ ಅತಿಥೇಯನಿಗೆ ಬಾಧಿಸಬೇಕು?

**ವಚನ 29.** ಪೌಲನು ಸ್ಪಷ್ಟೀಕರಿಸುತ್ತಾನೆ (ವ್ಯಕ್ತಪಡಿಸುವಿಕೆಯಲ್ಲಿ ಕಂಡುಬರುವ ಹಾಗೆ **ನನ್ನ ಅರ್ಥ**) ಕ್ರೈಸ್ತನು ತನ್ನನ್ನು ಔತಣಕ್ಕೆ ಆಮಂತ್ರಿಸಿ ನಂತರ ಮಾಂಸದ ಮೂಲವನ್ನು ಪಕಟಿಸಿದ ಅವಿಶ್ವಾಸಿಯ ವಿವೇಚನೆಗಾಗಿ ತಿನ್ನುಬಾರದು.

ಪೌಲನು ಅವಿಶ್ವಾಸಿಯು ಒಬ್ಬ ಕ್ರೈಸ್ತನನ್ನು ತನ್ನೊಂದಿಗೆ ಊಟಮಾಡುವದಕ್ಕಾಗಿ ಹೊಸ ಕ್ರೈಸ್ತ ಧರ್ಮದ ಮೇಲಿರುವ ಹಗೆತನ ಅಥವಾ ಜಿಗುಪ್ಸೆಯಿಂದಾಗಿ ಆಮಂತ್ರಿಸಿರಬಹದು ಎಂದು ಊಹಿಸುತ್ತಾನೆ. ಅವನ ಆಮಂತ್ರಣದ ಉದ್ದೇಶ ಕ್ರೈಸ್ತನನ್ನು ಸಾರ್ವಜನಿಕ ಮನೋರಂಜನೆಯ ವಸ್ತುವಾಗಿಸುವ ಉದ್ದೇಶವನ್ನು ಹೊಂದಿರಬಹುದು ಎಂದು ಕಲ್ಪಿಸಿಕೊಳ್ಳುತ್ತಾನೆ. ಅವಿಶ್ವಾಸಿಯ “ವಿವೇಚನೆ” - ಒಂದುವೇಳೆ ತಿಳಿದೂ ತಿಳಿದು ವಿಶ್ವಾಸಿಯು ವಿಗ್ರಹಗಳಿಗೆ ಅರ್ಪಿಸಿದ ಮಾಂಸವನ್ನು ತಿಂದರೆ ಇತರರು ಅವನ ಕುರಿತಾಗಿ ಗ್ರಹಿಸಿರುವ ಸ್ವಪ್ರತಿಷ್ಟೆ - ಬೆಳೆಯುತ್ತದೆ ಎಂದು ತಿಳಿದುಕೊಂಡಿರುತ್ತಾನೆ.

ಅತಿಥೇಯನು ಕ್ರೈಸ್ತನು ತನ್ನನ್ನು ತಾನು ಸಂಧಾನ ಮಾಡಿಕೊಳ್ಳುತ್ತಾನೆ ಮತ್ತು ಮಾಂಸವನ್ನು ತಿನ್ನುವದನ್ನು ಮುಂದುವರೆಸುತ್ತಾನೆ ಎಂದು ನಿರೀಕ್ಷಿಸಿರಬಹುದು. ಪೌಲನು ಅವನಿಗೆ ಇದರ ವಿರುದ್ಧವಾಗಿ ಮಾಡಲು ಸಲಹೆಯನ್ನು ನೀಡುತ್ತಾನೆ: ತನ್ನ ವಿಶ್ವಾಸದ ಮೇಲೆ ನಿಂತುಕೊಳ್ಳಲು, ಔತಣದಿಂದ ಎದ್ದುಹೋಗಬೇಕು, ಮತ್ತು ತನ್ನ ವಿಗ್ರಹಾರಾಧನೆಯನ್ನು ಉಪೇಕ್ಷಿಸಿರುವದನ್ನು ಸ್ಪಷ್ಟಪಡಿಸಬೇಕು. ಒಂದುವೇಳೆ ಕ್ರೈಸ್ತನು ತಾನು ಪ್ರಾಮಾಣಿಕನಾದ ಮನುಷ್ಯನು ಎಂದು ತೋರಿಸದಿದ್ದಲ್ಲಿ, ಮಾಹಿತಿ ನೀಡಿದವನು ಅದರ ಬದಲಾಗಿ ಅವಮಾನಕ್ಕೆ ಒಳಗಾಗುತ್ತಾನೆ. ಆ ಮನುಷ್ಯನ ಸಂಗಾತಿಗಳು ಅವನ ಕ್ರೂರ ತಂತ್ರಗಳನ್ನು ಕಂಡುಕೊಳ್ಳುತ್ತಾರೆ, ಅವನ ಅಹಂಗೆ ದಕ್ಕೆಯಾಗುತ್ತದೆ, ಮತ್ತು ಅವನು ಕೆಟ್ಟ “ವಿವೇಚನೆಯನ್ನು” ಹೊಂದಿದವನಾಗಿದ್ದಾನೆ.

ಅಪನಂಬಿಕೆಯನ್ನು ಸಾಕ್ಷಿಕರಿಸುವದರ ಕುರಿತು (γάρ, *gar*, “for”) ಪೌಲನು ಮೊದಲಿನ ಎರಡು ಪ್ರಶ್ನೆಗಳನ್ನು ಕೇಳುತ್ತಾನೆ: **ನನ್ನ ಸ್ವಾತಂತ್ರವು ಇನ್ನೊಬ್ಬರ**

**ವಿವೇಚನೆಯಿಂದ ಏಕೆ ತೀರ್ಮಾನಿಸಬೇಕು?** ತನ್ನ ಉಪೇಕ್ಷಿಸುವ ಒಬ್ಬನಿಗೆ ಉತ್ತಮವಾದ ವಿವೇಚನೆಯನ್ನು ನೀಡಲು ಪೌಲನ ಅಥವಾ ಇನ್ನೊಬ್ಬ ಕ್ರೈಸ್ತನ ಸ್ವಾತಂತ್ರ ಏಕೆ ನಿರ್ಭಂದಿಸಲ್ಪಡಬೇಕು? ಅಪೊಸ್ತಲನು ಕ್ರೈಸ್ತರಿಗೆ ತಮ್ಮ ನಂಬಿಕೆಯ ಅರಿಕೆಯನ್ನು ಅನುಸರಿಸಬೇಕು ಎಂದು ಹೇಳುತ್ತಾನೆ. ಒಬ್ಬ ಕ್ರೈಸ್ತನಿಗೆ ಪ್ರಜ್ಞೆಯಿಲ್ಲದೇ ಅತಿಥೇಯನ ಗೌರವವನ್ನು ತನ್ನ ಸ್ವಂತ ಸ್ವಾತಂತ್ರ್ಯದ ಬೆಲೆಯನ್ನು ತೆತ್ತು ರಕ್ಷಿಸುವದು ಅವನ ನಂಬಿಕೆಯನ್ನು ಸಂದಾನ ಮಾಡಿಕೊಳ್ಳುವದು ಸ್ವೀಕೃತವಲ್ಲ.

**ವಚನ 30.** ಅವನಿಗೆ ಕೃತಜ್ಞತೆಯಿಂದ ಪಾಲುತೆಗೆದುಕೊಳ್ಳುವ ಹಕ್ಕು ಇರುವಾಗ, ತನಗೆ ಬಡಿಸಿದ ಮಾಂಸವು ವಿಗ್ರಹಕ್ಕೆ ಅರ್ಪಿಸಿದ್ದು ಎಂದು ಹೇಳುವ ಒಬ್ಬ ಅವಿಶ್ವಾಸಿಯಿಂದ ಆ ಹಕ್ಕು ತೆಗೆಯಲ್ಪಡುವುದಾದರೆ **ನಾನು ಕೃತಜ್ಞತೆಯನ್ನು ಸಲ್ಲಿಸುವ ವಿಷಯದಲ್ಲಿ ನಾನು ಏಕೆ ದೂಷಣೆಗೆ ಒಳಗಾಗಬೇಕು?** ಎಂದು ಪೌಲನು ಕೇಳುತ್ತಾನೆ.

ಈ ಸನ್ನಿವೇಶದ ಕುರಿತು ಪೌಲನು ಕೇಳುವ ಅಲಂಕಾರಿಕ ಪ್ರಶ್ನೆ, ಒಂದು ರೀತಿಯಲ್ಲಿ ಪ್ರತಿರೋಧವಿದ್ದಂತೆ. ಕ್ರೈಸ್ತರ ಸ್ವಾತಂತ್ರವು ಏಕೆ ನಿರ್ಭಂಧಿಸಲ್ಪಡಬೇಕು? ದೇವರೆಡೆಗೆ ಕೃಜ್ಞತೆಯಿಂದ ಕ್ರೈಸ್ತನು ಊಟಮಾಡಲು ಭಾಗತೆಗೆದುಕೊಳ್ಳುವಾಗ ಏಕೆ ವಿಮರ್ಶೆಗೆ ಒಳಗಾಗಬೇಕು? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳು ಸ್ವಯಂ ಸಾಕ್ಷಿಯಾಗಿವೆ. ಕ್ರೈಸ್ತರ ಸ್ವಾತಂತ್ರವನ್ನು ಇನ್ನೊಬ್ಬರ ವಿವೇಚನೆಗಾಗಿ ತೀರ್ಪುಮಾಡಬಾರದು, ಮತ್ತು ಅವನು ಸ್ತೋತ್ರವನ್ನು ಸಲ್ಲಿಸಿ ಮಾಡುತ್ತಿರುವ ಊಟಕ್ಕಾಗಿ ದೂಷಣೆಗೆ ಒಳಗಾಗಬಾರದು. ಹಾಗೂ, ಪೌಲನು ಈಗಾಗಲೇ ವಿವರಿಸಿದಂತೆ, ಭೋಜನದ ಈ ಅತಿಥಿ ತನ್ನ ನಂಬಿಕೆಯ ಸಂಧಾನ ಮತ್ತು ತನ್ನ ಸ್ವಾತಂತ್ರವನ್ನು ತೊರೆಯುವದು ಈ ಎರಡರ ಮಧ್ಯದಲ್ಲಿ ಆಯ್ಕೆಯನ್ನು ಮಾಡಬೇಕಾಗಿದೆ. ಇಂಥಹ ಸನ್ನಿವೇಶದಲ್ಲಿ, ಅವನು ನಿಜವಾಗಿ ಏಕೆ ದೇವರ ಮೇಲೆ ತನಗಿರುವ ನಂಬಿಕೆಯನ್ನು ಪ್ರದರ್ಶಿಸುವದಕ್ಕಾಗಿ ಮಾಂಸವನ್ನು ತಿನ್ನುವದನ್ನು ನಿರಾಕರಿಸಬೇಕು. ಕ್ರೈಸ್ತ ಸ್ವಾತಂತ್ರ ಎಂದರೆ ಎಲ್ಲಾ ನಿರ್ಭಂದಗಳಿಂದ ಸ್ವತಂತ್ರರಾಗಿರುವದು ಎಂದಲ್ಲ.

## “ದೇವರ ಮಹಿಮೆಗಾಗಿ” (10:31-33)

**31 ಹೀಗಿರಲಾಗಿ ನೀವು ಉಂಡರೂ ಕುಡಿದರೂ ಇನ್ನೇನು ಮಾಡಿದರೂ ಎಲ್ಲವನ್ನೂ ದೇವರ ಘನತೆಗಾಗಿ ಮಾಡಿರಿ. 32 ಯೆಹೂದ್ಯರಿಗಾಗಲಿ ಗ್ರೀಕರಿಗಾಗಲಿ ದೇವರ ಸಭೆಗಾಗಲಿ ವಿಘ್ನವಾಗಬೇಡಿರಿ. 33 ನಾನಂತೂ ಸ್ವಪ್ರಯೋಜನಕ್ಕಾಗಿ ಚಿಂತಿಸದೆ ಮನುಷ್ಯರೆಲ್ಲರೂ ರಕ್ಷಣೆಹೊಂದಬೇಕೆಂದು ಅವರ ಪ್ರಯೋಜನಕ್ಕಾಗಿ ಚಿಂತಿಸಿ ಎಲ್ಲರನ್ನೂ ಎಲ್ಲಾ ವಿಷಯಗಳಲ್ಲಿ ಮೆಚ್ಚಿಸುವವನಾಗಿದ್ದೇನೆ.**

ಗ್ರೀಕೋ ರೋಮನ್ ಲೋಕದಲ್ಲಿ ಸುವಾರ್ತೆಯು ಹರಡುತ್ತಿರುವ ಹಾಗೆ, ಪೌಲನು ಕ್ರೈಸ್ತರು ನಿರಂತರವಾದ ಪರಿಶೀಲನೆಯಲ್ಲಿದ್ದಾರೆ ಎಂಬುದನ್ನು ಅರಿತುಕೊಳ್ಳುತ್ತಾನೆ. ದೂಷಣೆ ಮತ್ತು ಗಲಭೆ ಅವರನ್ನು ಸುತ್ತುವರೆದಿವೆ. ಪೌಲನ ಸೇವೆಯನ್ನು ಅನುಸರಿಸಿದ ಶತಮಾನಗಳಲ್ಲಿ, ಸಭೆಯು ಆಂತರಿಕ ವಿರೋಧ ಮತ್ತು ಭಾಹ್ಯ ಒತ್ತಡಗಳ ಮಧ್ಯದಲ್ಲಿ ಸಿಲುಕಿಕೊಂಡಿತ್ತು. ಎರಡನೇಯ ಶತಮಾನದ ಸಮೀಪದಲ್ಲಿ, Tertullian ಎಂಬ

Carthage ಊರಿನ ಒಬ್ಬ ಲೇಖಕ, ಸಮಾಜದ ಮೇಲೆ ಬರುವ ಪ್ರತಿಯೊಂದು ನಾಶನಕ್ಕೆ ಕ್ರೈಸ್ತರು ಕಾರಣರಾಗುತ್ತಾರೆ ಎಂದು ನಂಬಿದವರನ್ನು ದೂರಿದನು:

> ಒಂದುವೇಳೆ Tiber ಪರ್ವತವು ಪಟ್ಟಣದ ಎತ್ತರಕ್ಕೆ ಬೆಳೆದಲ್ಲಿ, ಒಂದುವೇಳೆ Nile ನದಿಯು ತನ್ನ ನೀರನ್ನು ಹೊಲಗಳಿಗೆ ಸರಬಾಜು ಮಾಡದೇ ಇದ್ದಲ್ಲಿ, ಒಂದುವೇಳೆ ಬರಗಾಲ ಅಥವಾ ಸಾಂಕ್ರಾಮಿಕ ರೋಗಗಳಿಲ್ಲದಿದ್ದಲ್ಲಿ, ನೇರವಾಗಿ "ಕ್ರೈಸ್ತರನ್ನು ಸಿಂಹಗಳಿಗೆ ಹಾಕಿರಿ" ಎಂಬ ಕೂಗು ಇರುತಿತ್ತು.[17]

ಇಂದು ಲೋಕದಲ್ಲಿ, ಕ್ರೈಸ್ತರಾದ ನಾವು ನಮಗೆ ಸಾಧ್ಯವಿರುವಷ್ಟು ಸತ್ಕಾರ್ಯಗಳನ್ನು ಮಾಡುತ್ತೇವೆ. ನಮಗೆ ಎಷ್ಟರ ಮಟ್ಟಿಗೆ ಸಾಧ್ಯವೋ, ನಾವು ನಮ್ಮ ನೆರೆಹೊರೆಯವರೊಂದಿಗೆ ಸಮಾಧಾನದಿಂದ (ನೋಡಿರಿ ರೋಮಾ 12:18) ದೇವರನ್ನು ಮೆಚ್ಚಿಸುವ ಹಾಗೆ ಇರುತ್ತೇವೆ.

**ವಚನ 31.** ಅಪೊಸ್ತಲನು "ವಿಗ್ರಹಗಳಿಗೆ ಅರ್ಪಿಸಿದ ವಸ್ತುಗಳ" ಕುರಿತು ತನ್ನ ಎಚ್ಚರಿಕೆಯನ್ನು ಸಂಕ್ಷಿಪ್ತಗೊಳಿಸುತ್ತಾನೆ, ಅದು 8:1ರಲ್ಲಿ ಎರಡು ಆಜ್ಞೆಗಳೊಂದಿಗೆ ಪ್ರಾರಂಭವಾಗುತ್ತದೆ. **ಅವು ದೇವರಿಗೆ ಎಲ್ಲಾ ಮಹಿಮೆಯನ್ನು** ಸಲ್ಲಿಸುವ ಹಾಗೆ ಸ್ಪಷ್ಟವಾದ ಆದ್ಯತೆಯೊಂದಿಗೆ ಉದ್ಭವಿಸುತ್ತವೆ. ದೇವರನ್ನು ಮಹಿಮೆ ಪಡಿಸುವದರ ಉದ್ದೇಶ ನಿಸ್ಸಂದೇಹವಾಗಿ ದೆವ್ವಗಳಿಗಾಗಿ ಮುಡಿಪಾಗಿಟ್ಟ ಮೇಜಿನ ಮೇಲೆ ತಿನ್ನುವದು ಮತ್ತು ಕುಡಿಯುವದಾಗಿದೆ (10:20, 21). ಮುಂದಕ್ಕೆ, ಮನುಷ್ಯನ ಹಕ್ಕುಗಳ ಮೇಲೆ ಒತ್ತಡವನ್ನು ತರುವದು ಮತ್ತು ಹೆಚ್ಚು ಜ್ಞಾನದಿಂದ ಕೂಡಿರದ ತನ್ನ ಕ್ರಿಯೆಗಳ ಪರಿಣಾಮವನ್ನು ಅಲಕ್ಷಿಸುವದು, ಅವರು ವಿಶ್ವಾಸಿಗಳಾಗಿರಲಿ ಅಥವಾ ಅವಿಶ್ವಾಸಿಗಳಾಗಿರಲಿ ಅಸಮಂಜಸವಾಗಿದೆ. ನಿಜವಾಗಿಯೂ, ಯಾರು ವಿಗ್ರಹಗಳನ್ನು ಸೇವಿಸುತ್ತಾರೋ ಕ್ರೈಸ್ತರು ತಮ್ಮ ದೇವಾಲಯದಲ್ಲಿ **ತಿನ್ನುವದನ್ನು ಕುಡಿಯುವದನ್ನು** ನಿರಾಕರಿಸುವಾಗ ಬೇಸರಕ್ಕೆ ಒಳಗಾಗುತ್ತಾರೆ. ಅಪರಾಧವನ್ನು ಯಾವಾಗಲೂ ಮರೆಮಾಡಲು ಸಾಧ್ಯವಿಲ್ಲ, ಆದರೆ ಕ್ರೈಸ್ತರು ತಮ್ಮ ಮತ್ತು ಅವಿಶ್ವಾಸಿಗಳ ಮಧ್ಯದಲ್ಲಿ ಅಡೆತಡೆಗಳನ್ನು ನಿರ್ಮಿಸುವದನ್ನು ದೂರವಿರಿಸಬೇಕು. Martin Luther ಅವರ ವೇದವಾಕ್ಯದ ಅರ್ಥೈಸುವಿಕೆ "ಕ್ರಿಸ್ತನನ್ನು ನಿವೇದಿಸುವ ಅಥವಾ ಪ್ರಗತಿಯತ್ತ ನಡೆಸುವ ಯಾವುದಾದರೂ" ಎಂದು ಸಂಕ್ಷಿಪ್ತಗೋಳಿಸುತ್ತದೆ. ವಿಶ್ವಾಸಿಗಳು "ದೇವರ ಮಹಿಮೆಗಾಗಿ ಎಲ್ಲವನ್ನು ಮಾಡಬೇಕು" ಎಂಬ ಪೌಲನ ಇಚ್ಛೆಗೆ, ಅರ್ಥವು ಸಮಾನವಾಗಿದೆ.

**ವಚನ 32.** ಕೆಲವು ಸಂದರ್ಭಗಳಲ್ಲಿ, ಕ್ರೈಸ್ತರು ದೇವರ ಮಹಿಮೆಗಾಗಿ ಕಾರ್ಯಮಾಡುವದನ್ನು ಅಥವಾ **ಯೆಹೂದ್ಯರಿಗಾಗಲಿ ಅಥವಾ ಗ್ರೀಕರಿಗಾಗಲಿ ಯಾವುದೇ ಅಪವಾದವನ್ನು ನೀಡದಂತೆ ಇರುವದನ್ನು ಆಯ್ದುಕೊಳ್ಳುವದು ಅವಶ್ಯವಾಗಿದೆ**. ಇಂಥಹ ಸಂಗತಿಯಲ್ಲಿ, ದೇವರ ಮಹಿಮೆ ಮೊದಲ ಆದ್ಯತೆಯಾಗಿರಬೇಕು. ಕ್ರೈಸ್ತರು ಮಾಡುವ ಕೆಲವು ಸಂಗತಿಗಳು ಅಪವಾದವನ್ನು ತರುತ್ತವೆ. ಅಪವಾದವನ್ನು ನೀಡುವ ಕಾರ್ಯಗಳನ್ನು ದೂರವಿಡಬಹುದಾದರೆ, ವಿಶ್ವಾಸಿಯು "ಯಾವದೇ ಅಪರಾಧವನ್ನು" ಮಾಡದಂತೆ ತನ್ನ ಮನಸ್ಸನ್ನು ನೆಲೆಗೊಳಿಸಿಕೊಳ್ಳಬೇಕು. ಅಪೊಸ್ತಲನು ಈಗಾಗಲೇ ತನ್ನ ಸಮರ್ಥನೆಯನ್ನು ವಿವರಿಸಿದ್ದಾನೆ. ಕ್ರಿಸ್ತನಿಗೆ ತನ್ನ ಸಮರ್ಪಣೆಯ ಮಿತಿಯಲ್ಲಿ, ಪೌಲನು ಯೆಹೂದ್ಯರಿಗೆ

ಯೆಹೂದ್ಯನಾದನು, “ಧರ್ಮಶಾಸ್ತ್ರವಿಲ್ಲದವನಂತೆ” ಯಾರಿಗೆ ಧರ್ಮಶಾಸ್ತ್ರವಿಲ್ಲವೋ ಅವರಿಗೆ, ಬಲಹೀನರಿಗೆ ಬಲಹಿನನಾದನು. ಅವನು ಅಪರಾಧವನ್ನು ಮಾಡದಂತೆ ಜೀವಿಸಲು ಪ್ರಯತ್ನಿಸಿದನು ಇದರಿಂದಾಗಿ “ಎಲ್ಲಾ ವಿಧದಲ್ಲಿ” ರಕ್ಷಣೆಯನ್ನು ಹೊಂದುವದಕ್ಕಾಗಿ ಆತ್ಮಗಳನ್ನು ಕ್ರಿಸ್ತನ ಬಳಿಗೆ ರಕ್ಷಣೆಗಾಗಿ ತರಲಿಕ್ಕಾಗುವಂತೆ (9:20-23) ಪ್ರಯತ್ನಿಸಿದನು.

**ವಚನ 33.** ಒಬ್ಬ ಪ್ರಸಂಗಿಯು ಇದನ್ನು ಇಷ್ಟಪಡುತ್ತಾನೋ ಇಲ್ಲವೋ, ಅವನು ಇದಕ್ಕೆ ಸಿದ್ಧನಾಗಿದ್ದಾನೋ ಇಲ್ಲವೋ, ಅವನು ಏನು ಮಾಡುತ್ತಾನೋ ಅದರ ಮೇಲೆ ಆತನು ಹೇಳುವದನ್ನು ಮೌಲ್ಯಮಾಪನ ಮಾಡಲಾಗುತ್ತದೆ. ಪೌಲನು ತನ್ನ ಜವಬ್ದಾರಿಯನ್ನು ಸ್ವೀಕರಿಸಲು ಸಿದ್ಧನಾಗಿದ್ದನು. 9ನೇ ಅಧ್ಯಾಯದ ಉದ್ದಕ್ಕೂ, ಅಪೊಸ್ತಲನು ನಿವೇಧನೆಯನ್ನು ಅವನ ಸ್ವಂತ ಉದಾಹರಣೆಯೊಂದಿಗೆ ನೋಡುತ್ತೇವೆ. ಅವನು ಒಬ್ಬನ ಹಕ್ಕುಗಳ ಮೇಲೆ ಒತ್ತಡ ತರುವದು, ಕ್ರೈಸ್ತರಿಗೆ ಪ್ರಥಮ ಆದ್ಯತೆಯಲ್ಲ. ಅವನು ಕೊರಿಂಥದವರಿಗೆ ಹೇಳಲು ಧೈರ್ಯವುಳ್ಳವನಾಗಿದ್ದನು, “ಆದುದರಿಂದ, ನೀವು ನನ್ನನ್ನು ಅನುಸರಿಸುವವರಾಗಿರಿ” (4:16). ಸುವಾರ್ತೆಯನ್ನು ಆಲಿಸುವವರಿಗೆ ತಮ್ಮ ಬೋಧಕರು ಸುವಾರ್ತೆಯನ್ನು ತಮ್ಮ ಜೀವಿತದಲ್ಲಿ ಗಂಭೀರವಾಗಿ ಪರಿಗಣಿಸಲಿ ಎಂದು ಅಪೇಕ್ಷಿಸುವದು ಸಮಂಜಸವಾಗಿದೆ. ಪ್ರತಿಯೊಬ್ಬ ಪ್ರಸಂಗಿಯ ಪ್ರಯೋಜನೀಯತೆ ಸ್ವಲ್ಪ ಮಟ್ಟಿಗೆ ಅವರು **ತನ್ನ ಸ್ವಂತ ಲಾಭವನ್ನು ನೋಡಲಿಲ್ಲ ಎಂದು ಹೇಳುವದರ ಮೇಲೆ ಅಳೆಯಬಹುದು ಆದರೆ ಅನೇಕರ ಲಾಭಕ್ಕಾಗಿ, ಅವರು ರಕ್ಷಣೆ ಹೊಂದಬೇಕು**.

## ಅಳವಡಿಸಿಕೊಳ್ಳುವದು

### ಸಮಂಜಸವಾದ ಮತ್ತು ಲಾಭದಾಯಕವಾದ ಜೀವಿತ

ಸಮಂಜಸವಾದ ಮತ್ತು ಲಾಭದಾಯಕವಾದ ಜೀವಿತದ ಕುರಿತು ಪೌಲನು ಹೇಳುತ್ತಾನೆ “ಎಲ್ಲಾ ಕಾರ್ಯಗಳನ್ನು ಮಾಡುವದಕ್ಕೆ ಸ್ವಾತಂತ್ರ್ಯವುಂಟು ಆದರೆ ಎಲ್ಲವೂ ವಿಹಿತವಾಗಿರುವದಿಲ್ಲ” (10:23ಅ). ಕೆಲವೊಮ್ಮೆ ಹೇಳಿದ ಸಂಗತಿಗಳು ಅಥವಾ ಮಾಡಿರಲಿ ಇಲ್ಲದೇ ಇರಲಿ ತಾಂತ್ರಿಕವಾಗಿ ತಪ್ಪಾಗಿರುತ್ತವೆ, ಆದರೆ ಅವು ಸಂದರ್ಭಕ್ಕೆ ಸಹ ಸಮಂಜಸವಾಗಿರುವದಿಲ್ಲ. ನೆರೆಯವರನ್ನು ಪ್ರೀತಿಸುವದು ಅವನು ಮಾತನಾಡಲಿಕ್ಕಿರುವದು ಅಥವಾ ಮಾಡಲಿಕ್ಕಿರುವದರ ಪರಿಣಾಮ ನೆರೆಯವನ ಮೇಲೆ ಏನಾಗುತ್ತದೆ ಎಂಬುದನ್ನು ಪರಿಗಣಿಸುವದಾಗಿದೆ ಮತ್ತು ಅಸಮಂಜಸವಾದದ್ದನ್ನು ತೆಗೆದುಹಾಕಬೇಕು.

ಅವನ ಮಾತು ಮತ್ತು ನಡೆತೆಯ ಸಮಂಜಸತೆ ಬದಲಾಗುತ್ತಾ ಇರುವದರ ವ್ಯತ್ಯಾಸ ಕ್ರೈಸ್ತರಿಗೆ ತೀರ್ಪುಮಾಡುವದಕ್ಕೆ ಸಹಾಯಕವಾಗಿದೆ. ಪದಗಳು ಮತ್ತು ನಡತೆ ಸಣ್ಣ ಗುಂಪಿನಲ್ಲಿ ಅಥವಾ ಸ್ವಲ್ಪ ಜನ ಆತ್ಮೀಯ ಸ್ನೇಹಿತರಲ್ಲಿ ಸಮಂಜಸವಾಗಿರಬಹುದು ಆದರೆ ದೊಡ್ಡ ಗುಂಪಿನಲ್ಲಿ ಅಲ್ಲ.

ತನ್ನ ವಿಷಯವನ್ನು ವಾದಿಸುವದಕ್ಕಾಗಿ ಕ್ರೈಸ್ತರು ಇತರರ ಕುರಿತಾಗಿ ಕಳಕಳಿಯಿರುವದರಿಂದ ತಮ್ಮ ಹಕ್ಕುಗಳನ್ನು ಬಿಟ್ಟುಕೊಡಬೇಕು. ಪೌಲನು ಸಾಮಾನ್ಯ

ಸತ್ಯವನ್ನು ನಿವೇದಿಸುತ್ತಾನೆ. ಎಲ್ಲಾ ಕಾರ್ಯಗಳನ್ನು ಮಾಡುವದಕ್ಕೆ ಸ್ವಾತಂತ್ರ್ಯವುಂಟು, ಆದರೆ ಎಲ್ಲವೂ ಭಕ್ತಿಯನ್ನು ಬೆಳೆಸುವದಿಲ್ಲ (10:23). ಅಪೊಸ್ತಲನು ಮುಂದೆ ಇಟ್ಟ ತತ್ವಗಳು ಕ್ರೈಸ್ತರಿಗೆ ಕೆಲವು ಕ್ರಿಯೆಗಳನ್ನು ಮತ್ತು ಪದಗಳನ್ನು ವ್ಯಕ್ತಿಗತ ಹಿನ್ನೆಲೆಯಲ್ಲಿ ಕಾಯ್ದಿರಿಸಬೇಕು. ಅದೇ ಸಮಯದಲ್ಲಿ ಅನುಮತಿಸಬಹುದಾದ ಮತ್ತು ಅಸಮಂಜಸವಾದವುಗಳನ್ನು ಅನೇಕಾವರ್ತಿ ಸ್ಥಳಾಂತರಿಸುವವುಗಳ ಮಧ್ಯದಲ್ಲಿನ ರೇಖೆಯಲ್ಲಿ, ಕ್ರೈಸ್ತರು ಉನ್ನತ ಮಟ್ಟದ ವ್ಯತ್ಯಾಸವನ್ನು ನಿರ್ವಹಿಸಬೇಕು ಮತ್ತು ಸಮಂಜಸವಾದ ನಡತೆಗೆ ಮಾದರಿಯಾಗಿರಬೇಕು.

## ವಿಮೋಚಿಸಲ್ಪಟ್ಟವರಿಗೆ ಭರವಸೆಗಳು

ವೀಕ್ಷಕರು ರೋಮಾಂಚನಗೊಳ್ಳುವ ಪ್ರದರ್ಶನಗಳಲ್ಲಿ ಸಹಕಾರ, ಸಮತೋಲನ, ಸಮಯದ ಮಿತಿ ಮತ್ತು ಕ್ರೀಡಾ ಕೌಶಲ್ಯಗಳಿರುವದನ್ನು ವೀಕ್ಷಿಸುವದರಲ್ಲಿ ಸಂತೋಷಿಸುತ್ತಾರೆ. ಸಾಧನೆಯಲ್ಲಿ ಅಪಾಯ ಪ್ರಜ್ಞೆ ನಮ್ಮನ್ನು ಆಕರ್ಷಿಸುತ್ತದೆ. ಸಮಯದಲ್ಲಿ ಒಂದು ಕ್ಷಣದಲ್ಲಿ ಆಗುವ ತಪ್ಪುಗಳು ಗಂಭೀರವಾದ ಗಾಯಗಳತ್ತ ಅಥವಾ ಮರಣದತ್ತ ಸಹ ನಡೆಸುತ್ತದೆ. ಕ್ರೈಸ್ತರ ವಿಷಯದಲ್ಲಿ ಪೌಲನ ಕಳಕಳಿ, ಅವರು ಸಂಧಿಗ್ದದ ಕ್ಷಣಗಳಲ್ಲಿ ಎಚ್ಚರವಹಿಸುವದಿಲ್ಲ, ಇದರ ಪರಿಣಾಮ ಆತ್ಮೀಕ ಮರಣ. ಕ್ರೀಡಾಪಟುಗಳಂತೆ, ಕ್ರೈಸ್ತರು ಯಾವಾಗಲೂ ಉಪಸ್ಥಿತನಿರುವ ವೈರಿಯನ್ನು ಎದುರಿಸುತ್ತಾರೆ: ಸಂತೋಷ. ಒಮ್ಮೆಯಾದರೂ, ನವೀಕರಿಸಿದ ಕೌಶಲ್ಯಗಳ ಅಲಕ್ಷತನ, ನಾಶನದ ಅವಶ್ಯಕತೆಯಾಗಿದೆ. ಶೋಧನೆಯ ಶಕ್ತಿಯನ್ನು ತಿಳಿದುಕೊಳ್ಳುವದು ಅನೇಕ ಕ್ರೈಸ್ತರನ್ನು ಮರಣಕ್ಕಿಂತ ನಿಕೃಷ್ಟವಾದ ಅಂತ್ಯದಲ್ಲಿ ನಡೆಸುತ್ತದೆ.

*ಕ್ಷಮಾಪಣೆಯ ಭರವಸೆ.* ಕ್ರೈಸ್ತರು ಯೇಸುವಿನ ಪಾಪಗಳ ಕ್ಷಮಾಪಣೆಯ ಶಕ್ತಿಯ ಮೇಲೆ ವಿಶ್ವಾಸವನ್ನು ಇಡಲು ಒಳ್ಳೇದನ್ನು ಮಾಡುತ್ತಾರೆ. ನಾವು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿದ್ದೇವೆ ಮತ್ತು ನಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಹೊಂದಿದ್ದೇವೆ ಎಂಬುದನ್ನು ಜ್ಞಾಪಿಸಿಕೊಳ್ಳುವಾಗ ದೊರೆಯುವ ಭರವಸೆ ಕ್ರೈಸ್ತ ಜೀವಿತಕ್ಕೆ ಸಂತೋಷವನ್ನು ಸೇರಿಸುತ್ತದೆ. ಪೌಲನ ಮರುಭರವಸೆಯ ಪದಗಳು ಅವನ ಪತ್ರದುದ್ದಕ್ಕೂ ಹರಡಿಕೊಂಡಿವೆ. ಅವನು ಒಂದು ಗುಂಪಿನ ಸಹೋದರರಿಗೆ ಜ್ಞಾಪಿಸುತ್ತಾನೆ, "ನೀವು ಆತನಲ್ಲಿದ್ದುಕೊಂಡು ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ, . . . ನೀವು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟಿದ್ದರಿಂದಲೇ ಆ ಸುನ್ನತಿಯನ್ನು ಹೊಂದಿದಿರಿ. ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ" (ಕೊಲಸ್ಸೆ 2:10-12). ಇತರ ಕ್ರೈಸ್ತರಿಗೆ, ಅಪೊಸ್ತಲನು ಬರೆಯುತ್ತಾನೆ. "ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ" (ಗಲಾತ್ಯ 3:27).

ಪಶ್ಚಾತ್ತಾಪಪಟ್ಟ ಒಬ್ಬ ವಿಶ್ವಾಸಿ ಕರ್ತನನ್ನು ದೀಕ್ಷಾಸ್ನಾನದಲ್ಲಿ ಧರಿಸಿಕೊಂಡು ಆತನಿಗೆ ವಿಧೇಯನಾಗುವಾಗ, ದೇವರು ಆತ್ಮೀಕವಾಗಿ ಅವನನ್ನು ಅಥವಾ ಅವಳನ್ನು ಪರಿವರ್ತಿಸುತ್ತಾನೆ. ಒಬ್ಬ ಪಾಪಿ, ಯಾವ ನಿರೀಕ್ಷೆಯಿಲ್ಲದೇ ದೇವರಿಂದ ದೂರಹೋಗಿ, ದೀಕ್ಷಾಸ್ನಾನ ಮಾಡಿಸಿಕೊಳ್ಳಲು ನೀರಿನಲ್ಲಿ ಇಳಿದುಹೋಗುವಾಗ, ಅಲ್ಲಿ ಕ್ರಿಸ್ತನ ರಕ್ತದಿಂದ

ತೊಳೆಯಲ್ಪಡುತ್ತಾನೆ. ನೀರಿನಿಂದ ಎದ್ದುಬರುವಾಗ, ಈ ಹೊಸ ಕ್ರೈಸ್ತನು ಆತನವನಾಗುತ್ತಾನೆ. ತಪ್ಪಿಹೋದವನು ರಕ್ಷಣೆಯನ್ನು ಹೊಂದಿದವನಾಗುತ್ತಾನೆ; ಸತ್ತವನಂತಿದ್ದವನು ಜೀವವನ್ನು ಧರಿಸಿಕೊಳ್ಳುತ್ತಾನೆ. ದೀಕ್ಷಾಸ್ನಾನದಲ್ಲಿ, ಒಬ್ಬನು ಹೊಸದಾಗಿ ಹುಟ್ಟುತ್ತಾನೆ. ಕ್ರಿಸ್ತನೊಂದಿಗೆ ಹೂಣಲ್ಪಡುತ್ತಾನೆ, ಹಳೆಯ ಮನುಷ್ಯನು ಸತ್ತುಹೋಗುತ್ತಾನೆ ಮತ್ತು ಹೊಸ ಮನುಷ್ಯನು ಇನ್ನೊಂದು ವಿಧದ ಜೀವಿತದಲ್ಲಿ ಎದ್ದುಬರುತ್ತಾನೆ. ಕ್ರೈಸ್ತರು ಕುರಿಮರಿಯ ರಕ್ತದ ಕೊಡೆಯ ಕೆಳಗೆ ನಿಂತುಕೊಳ್ಳುತ್ತಾರೆ. ಆನಂದದಿಂದ ನಾವು ಹಾಡುತ್ತೇವೆ, "ಶಕ್ತಿಯಿದೆ, ಶಕ್ತಿಯಿದೆ . . . ಕುರಿಮರಿಯ ಅಮೂಲ್ಯ ರಕ್ತದಲ್ಲಿ"[18] ದೀಕ್ಷಾಸ್ನಾನವು ವಿಶ್ವಾಸಿಗಳಿಗೆ ವಿಮೋಚಿಸಲ್ಪಟ್ಟ ಮತ್ತು ಕ್ಷಮಾಪಣೆ ಹೊಂದಿದ ಜನರ ಭಾಗವಾಗಿದ್ದೇವೆ ಎಂಬ ಮರುಭರವಸೆಯನ್ನು ನಿರಂತರವಾಗಿ ಒದಗಿಸುತ್ತದೆ.

ಇದೆಲ್ಲವನ್ನೂ ಪೌಲನು ತಿಳಿದಿದ್ದನು ಮತ್ತು ಕೊರಿಂಥದ ಕ್ರೈಸ್ತರು ಸಹ ತಿಳಿದಿದ್ದರು. ಆದಾಗ್ಯೂ, ಪೌಲನು ದೀಕ್ಷಾಸ್ನಾನದಲ್ಲಿ ದೇವರೊಂದಿಗೆ ನಮ್ಮ ಐಕ್ಯತೆಯ ಜ್ಞಾಪಕದ ಭರವಸೆ ಬರಲಿಕ್ಕಿರುವ ಅಪಾಯವನ್ನು ತಡೆಹಿಡಿಯುತ್ತದೆ. ಸಂತೋಷ ಭಯಹುಟ್ಟಿಸುತ್ತದೆ. ಕೆಲವು ಜನರು ಆಯಲ್ಪಟ್ಟವರು ಮತ್ತು ದೇವರಿಂದ ವಿಮೋಚಿಸಲ್ಪಟ್ಟವರು ತಮ್ಮ ಹಳೆಯ ಪಾಪದ ಜೀವಿತಕ್ಕೆ ತಿರುಗಿಕೊಂಡಿದ್ದಾರೆ ಮತ್ತು ದೇವರ ಕೃಪೆಯನ್ನು ತಾವು ಕಳೆದುಕೊಂಡದ್ದನ್ನು ಕಂಡುಕೊಂಡಿದ್ದಾರೆ. ಇಸ್ರಾಯೇಲ್ಯರು ಐಗುಪ್ತ್ಯವನ್ನು ತೊರೆದಾಗ, ಅವರು ಒಂದು ರೀತಿಯಲ್ಲಿ ದೀಕ್ಷಾಸ್ನಾನವನ್ನು ಹೊಂದಿದರು. ಅವರು ಕೆಂಪು ಸಮುದ್ರವನ್ನು ಹಾದುಹೋಗುತ್ತಿರುವ ಹಾಗೆ, ಆಕಾಶವು ಅವರನ್ನು ಆವರಿಸಿಕೊಂಡಿರುವ ಹಾಗೆ ಅವರು ದೇವರ ಪೋಷಣೆಯಲ್ಲಿ ಸುತ್ತಿಕೊಂಡರು. ದೇವರು ಅವರನ್ನು ವಿಮೋಚಿಸಿದನು; ಆತನು ಕೊರಿಂಥದಲ್ಲಿರುವ ಕ್ರೈಸ್ತರನ್ನು ಕ್ರಿಸ್ತನ ರಕ್ತದಿಂದ ಕೊಂಡುಕೊಂಡಹಾಗೆ ಅವರನ್ನು ಕೊಂಡುಕೊಂಡನು. ಅಡವಿಯಲ್ಲಿ, ಇಸ್ರಾಯೇಲ್ಯರು ಪಾಪಮಾಡಿದರು ಮತ್ತು ದೇವರ ಕೋಪವನ್ನ ಎಬ್ಬಿಸಿದರು. ಕೊರಿಂಥದವರು ಇದನ್ನೆ ಮಾಡಬಾರದು ಎಂಬುದು ಅಪೊಸ್ತಲನ ಪ್ರಾರ್ಥನೆಯಾಗಿದೆ.

*ಕರ್ತನ ಭೋಜನದ ಭರವಸೆ.* ಕೊರಿಂಥದವರಿಗೆ ಪೌಲನು ಬರೆಯುವದು ಅವರು ಯಾವಾಗಲಾದರೂ ಮತ್ತು ಎಲ್ಲಿಯಾದರೂ ಜೀವಿಸಲಿ, ವಿಮೋಚಿಸಲ್ಪಟ್ಟವರಿಗೆ ಸಮಂಜಸವಾಗಿದೆ. ಕರ್ತನ ಭೋಜನವನ್ನು ತೆಗೆದುಕೊಳ್ಳುವದು ಕೇವಲ ಜ್ಞಾಪಕಾರ್ಥವಲ್ಲ, ಆದರೆ ಅದು ಒಂದು ಭರವಸೆ ಕೂಡಾ ಆಗಿದೆ. ಆತ್ಮೀಕ ಆಹಾರವನ್ನು ತಿನ್ನುವದು ಮತ್ತು ಆತ್ಮೀಕ ಪಾನಿಯದಲ್ಲಿ ಪಾಲುತೆಗೆದುಕೊಳ್ಳುವ, ಕ್ರೈಸ್ತರು ಪರಸ್ಪರರೊಂದಿಗೆ ಮತ್ತು ಕ್ರಿಸ್ತನೊಂದಿಗೆ ಅನ್ಯೋನ್ಯತೆಯನ್ನು ಹೊಂದುತ್ತಾರೆ (10:16). ಇತಿಹಾಸವನ್ನು ನಮಗೆ ಬೋಧಿಸುವದನ್ನು ಮುಂದುವರೆಸುವಾಗ, ಪೌಲನು ಕೊರಿಂಥದವರಿಗೆ ದೇವರು ಇಸ್ರಾಯೇಲ್ಯರಿಗೆ ಆತ್ಮೀಕ ಆಹಾರ ಮತ್ತು ಪಾನೀಯವನ್ನು ಅರಣ್ಯದಲ್ಲಿ ಒದಗಿಸಿದನು ಎಂಬುದನ್ನು ಜ್ಞಾಪಿಸುತ್ತಾನೆ. ಇದು ಕರ್ತನ ಭೋಜನದಂತ ಅಲ್ಲ, ಆದರೆ ತತ್ವದಲ್ಲಿ ಇದು ಅಷ್ಟೊಂದು ವ್ಯತ್ಯಾಸವಾಗಿಲ್ಲ. ಅಪೊಸ್ತಲನು. "ಅವರೆಲ್ಲರೂ ದೈವೀಕವಾದ ಒಂದೇ ಆಹಾರವನ್ನು ತಿಂದರು; ಅವರೆಲ್ಲರೂ ದೈವೀಕವಾದ ಒಂದೇ ನೀರನ್ನು ಕುಡಿದರು; ಹೇಗಂದರೆ ಅವರ ಹಿಂದೆ ಹೋಗುತ್ತಿದ್ದ ದೈವೀಕವಾಗ ಬಂಡೆಯೊಳಗಿಂದ ಬಂದ ನೀರನ್ನು ಕುಡಿಯುತ್ತಿದ್ದರು, ಆ ಬಂಡೇ ಕ್ರಿಸ್ತನೇ" (10:3, 4).

ಪೌಲನು "ಕ್ರಿಸ್ತನಲ್ಲಿ" ಇರುವದು ದೀಕ್ಷಾಸ್ನಾನಕ್ಕಿಂತ ಮತ್ತು ಕರ್ತನ ಭೋಜನಕ್ಕಿಂತೆ ಹೆಚ್ಚಾಗಿರುವದನ್ನು ಒಳಗೊಂಡಿದೆ ಎಂಬುದನ್ನು ತಿಳಿದಿದ್ದನು. ಈ ಗುರುತುಗಳು ಆತ್ಮೀಕ ಬಲಕ್ಕೆ ಎಷ್ಟು ಮಹತ್ವವುಳ್ಳವುಗಳಾಗಿವೆಯೋ, ಅವು ದೈವೀಕತೆಗೆ ಅಷ್ಟೇ ಉತ್ತಮವಾದ ಉಗಮಗಳಾಗಿವೆ.

---

## ಟಿಪ್ಪಣೆಗಳು

[1]Carl Holladay, *The First Letter of Paul to the Corinthians*, The Living Word Commentary (Abilene, Tex.: Abilene Christian University Press, 1979), 123. [2]David E. Garland, *1 Corinthians*, Baker Exegetical Commentary on the New Testament (Grand Rapids, Mich.: Baker Academic, 2003), 456–57. [3]ಈ ಟಿಪೋಲಜಿಯಾ ಕುರಿತು Ben Witherington III ಹೀಗೆ ವಿವರಿಸಿದ್ದಾರೆ: "ದೇವರ ಗುಣ ಲಕ್ಷಣಗಳು ಒಂದೇ ರೀತಿಯಲ್ಲಿ ಇರುವದರಿಂದ ದೇವರು ಒಂದೇ ರೀತಿಯಲ್ಲಿ ವಿಭಿನ್ನ ಯುಗಗಳಲ್ಲಿ ನಡೆದುಕೊಳ್ಳುವದರಿಂದಲೂ ಮತ್ತು, ಬಹುಶಃ ಹೆಚ್ಚು ಮುಖ್ಯವಾಗಿ, ರಕ್ಷಣೆ ಇತಿಹಾಸದಲ್ಲಿನ ವ್ಯಕ್ತಿಗಳು ಮತ್ತು ಘಟನೆಗಳು ಮೂನ್ಸೂಚನೆ ನೀಡುವ ವ್ಯಕ್ತಿಗಳನ್ನು ಮತ್ತು ಘಟನೆಗಳನ್ನು ಒದಗಿಸುತ್ತವೆಂಬುದು ಈ ಟಿಪಾಲಜಿಯಾ ಹಿನ್ನಲೆಯಲ್ಲಿರುವ ಭಾವನೆಯಾಗಿದೆ" (Ben Witherington III, *Conflict and Community in Corinth: A Socio-Rhetorical Commentary on 1 and 2 Corinthians* [Grand Rapids, Mich.: Wm. B. Eerdmans Publishing Co., 1995], 217). [4]ಆ ಸಂಖ್ಯೆಯು ಸಮಸ್ಯೆಯನ್ನು ಒಡ್ಡುತ್ತದೆ. ಅರಣ್ಯಕಾಂಡ 25:9ರಲ್ಲಿ ದಾಖಲಾದ ಪ್ರಕಾರ 24,000 ಜನರು ನಾಶವಾಗಿದ್ದಾರೆ. ಆ ಸಂಖ್ಯೆಯನ್ನು ಸಮನ್ವಯಗೊಳಿಸುವ ಪ್ರಯತ್ನಗಳು ಮತ್ತು 1 ಕೊರಿಂಥ 10:8ರಲ್ಲಿನ ಸಂಖ್ಯೆಯು ಅಂಖ್ಯಾತವಾಗಿದೆ. ಆದರೆ ಅವುಗಳಲ್ಲಿ ಯಾವುದು ಬಹಳ ತೃಪ್ತಿಕರವಾಗಿಲ್ಲ. ಬಾಲ್ ಪೆರಿಯೋನಲ್ಲಿ ನಾಶವಾದ ನಿಖರವಾದ ಸಂಖ್ಯೆಯ ಜನರ ಕುರಿತು ಪೌಲನಿಗೆ ಅಷ್ಟು ಅವಶ್ಯಕವಾದದ್ದಲ್ಲ. ಒಬ್ಬ ಇಂಜಿನಿಯರ್ ಒಂದು ಇನ್ಚನ್ನು ಎಚ್ಚರಿಕೆಯಿಂದ ಅಳೆಯಬಹುದು, ಆದರೆ ಅಂತಹ ನಿಖರತೆಯು ಹೆಚ್ಚಿನ ಸಮಯಗಳಲ್ಲಿ ಅಗತ್ಯವಾಗಿರುವದಿಲ್ಲ. ದೂರವನ್ನು ಸಾಮಾನ್ಯವಾಗಿ ಅಂದಾಜು ಮೈಲೂ ಅಥವಾ ಕಿಲೋಮೀಟರ್ ಗಳಲ್ಲಿ ನೀಡಲಾಗುತ್ತದೆ. ಬೈಬಲ್ ನಿಖರವಾದದ್ದೆಂದು ನಾವು ಭರವಸೆ ಹೊಂದಬಹುದು, ಬಾಲ್ ಪೆರಿಯೋನಲ್ಲಿ ನಾಶವಾದವರ ಸಂಖ್ಯೆ 23,000 ಅಥವಾ 24,000 ಆಗಿದ್ದರೂ ಸಹ. [5]Richard E. Oster, Jr., *1 Corinthians*, The College Press NIV Commentary (Joplin, Mo.: College Press Publishing Co., 1995), 236–37. [6]Sirach 33:1 (NAB). The apocryphal book of Sirach is also known as "Ecclesiasticus." [7]ನೋಡಿರಿ ರೋಮಾ 11:25; 12:16; 2 ಕೊರಿಂಥ 11:19. ಅದೇ ಗ್ರೀಕ್ ಪದವನ್ನು 1 ಕೊರಿಂಥ 4:10ರಲ್ಲಿ "ಬುದ್ಧಿವಂತ" ಎಂದು ಅನುವಾದಿಸಲಾಗಿದೆ. [8]Garland, 478–79. [9]Baruch 4:7 (NAB). [10]Garland, 480.

[11]Wayne A. Meeks, *The First Urban Christians: The Social World of the Apostle Paul*, 2nd ed. (New Haven, Conn.: Yale University Press, 2003), 98. [12]ಪೌಲನು ಪಟ್ಟಣದಲ್ಲಿ ಒಂದುವರೆ ವರ್ಷ ಕಳೆದನು (ಅಪೊಸ್ತಲರ ಕೃತ್ಯಗಳು 18:11). ಅಂತಿಯೋಕ್ಯದಿಂದ ಯೆರೂಸಲೇಮಿನ ಮಾರ್ಗವಾಗಿ ಎಫೆಸೆಗೆ ಮತ್ತು ಆಸ್ಯದ ಮಲೆನಾಡಿಗೆ (ಅಪೊಸ್ತಲರ ಕೃತ್ಯಗಳು 19:1), ಹಿಂದಿರುಗಲು ಒಂದುವರೆ ವರ್ಷದಿಂದ ಎರಡು ವರ್ಷಗಳ ಅವಧಿ ಬೇಕಾಗಿತ್ತು, ಎಫೆಸೆಗೆ ಆಗಮಿಸಿದ ನಂತರ (ಅಪೊಸ್ತಲರ ಕೃತ್ಯಗಳು 18:22), ಕೊರಿಂಥದ ಪರಿಸ್ಥಿತಿಗಳ ಬಗ್ಗೆ ತಿಳಿದು ಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಂಡಿರ ಬಹುದು. ಕೊರಿಂಥದವರುಗೆ ಬರೆದ ಮೊದಲ ಪತ್ರಿಕೆಗೆ ಮುಂಚಿತವಾಗಿ ಒಂದು ಪತ್ರವನ್ನು ಅವರಿಗೆ ಬರೆದರು (ನೋಡಿರಿ 1 ಕೊರಿಂಥ 5:11). [13]"ಹುಡುಕಿ" (ζητέω, *zēteō*) ಎಂದು ಅನುವಾದಿಸಿದ ಪದವು ಚರ್ಚೆ ಮತ್ತು ವಿವಾದವನ್ನು ಒಳಗೊಂಡಿರುವ ಬಲವಾದ ಪದವಾಗಿದೆ. [14]Jerome Murphy-O'Connor, *St. Paul's Corinth: Texts and Archaeology*, 3rd rev. and exp. ed. (Collegeville, Minn.: Liturgical Press, 2002), 30. ಪುರಾವೆಗಳನ್ನು ಪರಿಶೀಲಿಸಿದ ನಂತರ, ಆಚರಣೆಗಳಿಂದ Garland ರವರು ಗ್ರೀಕ್ ಮಾಂಸ ಮಾರ್ಕೆಟ್ ಗಳಲ್ಲಿ "ವಿತರಣೆ ಮಾಡಲ್ಪಟ್ಟವುಗಳೆಲ್ಲವೂ ವಿಗ್ರಹರಾಧನೆ ಆಚರಣೆಗಳಿಂದ ಕಲುಷಿತಗೊಳಿಸಲ್ಪಟ್ಟವುಗಳಲ್ಲ" (Garland,

491–92). [15]R. C. H. Lenski, ನಂತಹ ಇತರ ವ್ಯಾಖ್ಯಾನಕಾರರು "ಯಾರಾದರೂ" ಮಾತ್ರ ಒಬ್ಬ ಸಹೋದರನನ್ನು ಅಥೈಸಬಹುದು ಎಂದು ವಾದಿಸಿದ್ದಾರೆ. ಈ ದೃಷ್ಟಿಕೋನ ಸರಿಯಾಗಿದ್ದರೆ ಬಲಹೀನ/ಬಲವಾದ ಸಹೋದರರ ಪರಿಸ್ಥಿ ಪರಿಗಣನೆಗೆ ಒಳಗಾಗುತ್ತದೆ. (R. C. H. Lenski, *The Interpretation of St. Paul's First and Second Epistles to the Corinthians* [Minneapolis: Augsburg Publishing House, 1937], 421.) [16]ಪೌಲನು εἰδωλόθυτον (*eidōlothuton*; 10:19) ರಿಂದ ἱερόθυτον (*hierothuton*; 10:28) ಗೆ ಬದಲಾಗಿರುವ ಆಧಾರದ ಮೇಲೆ synonymously, ಮುಕ್ತಾಯವನ್ನು ಬಹುಶಃ ತಿರಸ್ಕರಿಸಲ್ಪಟ್ಟಂತ ವ್ಯಾಖ್ಯಾನವನ್ನು ಮಾಡಿದರು ಸಹ, ಅವರು ಪದಗಳು ಸಾಮಾನಾರ್ಥಕವಾಗಿ ಬಳಸಿದ್ದಾರೆಂದು ತೋರುತ್ತದೆ. [17]Tertullian *Apology* 40.2. [18]Lewis E. Jones, "There Is Power in the Blood," *Songs of Faith and Praise,* comp. and ed. Alton H. Howard (West Monroe, La.: Howard Publishing Co., 1994).